# ಸಂದೇಹ ನಿವಾರಿಣಿ

ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಕನ್ನಡ ಅನುವಾದ

**ಆರ್. ಎಲ್. ಅನಂತರಾಮಯ್ಯ**

**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩
೨೦೧೮

*Sandeha Nivarini*—Translation of Telugu book written by Bhagavan Sri Sathya Sai Baba into Kannada by R.L. Anantaramaiah. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages vi+110

© 2018
Sri Sathya Sai Publications Society, Bengaluru, India

೦೬/೨೦೧೮ (೨೦೦೦ ಪ್ರತಿಗಳು)

ಪುಟಗಳು : ೧೧೬

**ಬೆಲೆ : ₹ 25**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ


ಓದುಗನೊಂದಿಗೆ ಒಂದು ಮಾತು . . . . . . . . . . . . . . . . . . vi

**ಅಧ್ಯಾಯ ೧** ೧

**ಅಧ್ಯಾಯ ೨** ೭

**ಅಧ್ಯಾಯ ೩** ೧೩

**ಅಧ್ಯಾಯ ೪** ೨೩

**ಅಧ್ಯಾಯ ೫** ೨೭

**ಅಧ್ಯಾಯ ೬** ೩೪

**ಅಧ್ಯಾಯ ೭** ೩೮

**ಅಧ್ಯಾಯ ೮** ೪೬

**ಅಧ್ಯಾಯ ೯** ೫೧

**ಅಧ್ಯಾಯ ೧೦** ೫೮

**ಅಧ್ಯಾಯ ೧೧** ೬೮

**ಅಧ್ಯಾಯ ೧೨** ೭೩

**ಅಧ್ಯಾಯ ೧೩** ೭೭

**ಅಧ್ಯಾಯ ೧೪** ೮೨

**ಅಧ್ಯಾಯ ೧೫** ೮೬

**ಅಧ್ಯಾಯ ೧೬** ೯೪

**ಅಧ್ಯಾಯ ೧೭** ೧೦೧

# ಓದುಗನೊಂದಿಗೆ ಒಂದು ಮಾತು

"ನಾನು ಶಿರ್ಡಿಯ ಸಾಯಿಬಾಬಾ, ಮತ್ತೆ ಬಂದಿದ್ದೇನೆ; ಆಗ ಬಹುವಾಗಿ ನಾನು ಅಡುಗೆಯನ್ನು ಸಿದ್ಧಪಡಿಸುತ್ತಿದ್ದೆ; ಈಗ ನಿಮ್ಮನ್ನು ಬಲಪಡಿಸಿ ಪರಿಶುದ್ಧಗೊಳಿಸುವ ಊಟವನ್ನು ಉಣಿಸಲು ಬಂದಿದ್ದೇನೆ" ಎಂದು ಹೇಳುತ್ತಾರೆ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪುಟ್ಟಪರ್ತಿ ಗ್ರಾಮದ ಪ್ರಶಾಂತಿನಿಲಯದಿಂದ. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ, ೧೯೪೦ ರಲ್ಲಿ, ಶಾಲೆಯ ಪುಸ್ತಕಗಳನ್ನು ಎಸೆದು, ಭಕ್ತರ ಮೊದಲ ಕೂಡುಹವನ್ನು ಉದ್ದೇಶಿಸಿ ಮಾತನಾಡುತ್ತಾ ಇದನ್ನು ಅವರು ಘೋಷಿಸಿದರು. ಅಂದಿನಿಂದಲೂ ಒಂದೇ ಸಮನೆ ಅಧಿಕವಾಗುತ್ತಿರುವ ದೈಹಿಕ ಮತ್ತು ಆಧ್ಯಾತ್ಮಿಕ ನಿಯಮಾವಳಿಗಳನ್ನು ತಮ್ಮ ಕರುಣೆ ಮತ್ತು ವಿಶ್ವವಿಜಯಿಯಾಗುವ ಪ್ರೇಮಗಳಿಂದ ಸಾಂತ್ವನಗೊಳಿಸುತ್ತಿದ್ದಾರೆ, ತಿದ್ದುತ್ತಿದ್ದಾರೆ, ಗುಣಪಡಿಸುತ್ತಿದ್ದಾರೆ. ಶಾಂತಿ ಮತ್ತು ಸಂತೋಷಗಳ ನೂತನ ಸಾಯಿಶಕೆಯನ್ನು ಸ್ಥಾಪಿಸಿದ್ದಾರೆ. ತಮ್ಮ ಧರ್ಮಸ್ಥಾಪನೆಯ ಧ್ಯೇಯದ ಭಾಗವಾಗಿ ಬಾಬಾ ೧೯೫೮ ಫೆಬ್ರವರಿ ತಿಂಗಳು ಒಂದು ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಅದಕ್ಕೆ ಸನಾತನ ಸಾರಥಿ ಎಂಬ ಬಹು ಅರ್ಥಪೂರ್ಣವಾದ ಹೆಸರನ್ನಿಟ್ಟರು. ಆ ಶೀರ್ಷಿಕೆಯಿಂದ ತಾವು ಸನಾತನ (ಪ್ರಾಚೀನ)ರೂ ಹೌದು, ಸಾರಥಿ (ಸಮಸ್ತ ದೇಹಿಗಳ ರಥವನ್ನು ನಡೆಸುವವನು)ಯೂ ಹೌದು ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಪ್ರಕಟಿಸಲು ಅವರು ಅಪೇಕ್ಷಿಸಿದರು. ಸನಾತನ ಸಾರಥಿಯು ಎಲ್ಲಾ ರೀತಿಯ ಎಲ್ಲಾ ಬಗೆಯ, ಸುಳ್ಳಿನ ವಿರುದ್ಧವಾಗಿಯೂ, ಸ್ವಾರ್ಥ ಮನೋಧರ್ಮದ ವಿರುದ್ಧವಾಗಿಯೂ ಚಳುವಳಿಯಲ್ಲಿ ತೊಡಗಿದೆ ಎಂದು ಅವರು ಸಾರಿದರು. ಬಾಬಾರೊಂದಿಗೆ ನಡೆಸಿದ ಸಂಭಾಷಣೆಗಳ ಈ ಸರಣಿ, ಮೊದಲು ಪತ್ರಿಕೆಯಲ್ಲಿ ತೆಲುಗಿನಲ್ಲಿ ಪ್ರಕಟವಾಗಿದೆ. ಅದು ಆಧ್ಯಾತ್ಮಿಕ ಸತ್ಯದ ನಿಗೂಢತೆಗಳನ್ನು ತೆರೆದು ತೋರಿಸುತ್ತದೆ, ಸಾಧಕರ ದೃಷ್ಟಿಗೆ ಮುಸುಕಿರುವ ಮಂಜನ್ನು ಪ್ರೇಮದಿಂದ ತೆಗೆದುಹಾಕುತ್ತದೆ. ಈಗ ಈ ಪುಸ್ತಕ ನಿಮ್ಮೆದುರಿಗಿದೆ. ಜಾಗರೂಕತೆಯಿಂದ ಹಾಗೂ ಶ್ರದ್ಧೆಯಿಂದ ಓದಿದರೆ ಅದು ಖಂಡಿತವಾಗಿಯೂ ಸ್ಪಷ್ಟೀಕರಿಸುತ್ತದೆ, ಬಲಪಡಿಸುತ್ತದೆ ಮತ್ತು ಮನವೊಲಿಸುತ್ತದೆ. ಇದರ ಅಧ್ಯಯನವು ನಿಮ್ಮನ್ನು ಲಕ್ಷ್ಯದ ಹತ್ತಿರ ಹತ್ತಿರಕ್ಕೆ ಒಯ್ಯಲಿ.

ಪ್ರಶಾಂತಿ ನಿಲಯಂ **ನಾ. ಕಸ್ತೂರಿ**

# ಅಧ್ಯಾಯ ೧

**ಭಕ್ತ:** ಸ್ವಾಮಿ, ಅಧ್ಯಾತ್ಮ ಪಥಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತು ನಮಗೆ ತಿಳಿಯದುದನ್ನು ಕೇಳಬಹುದೇ?

**ಸ್ವಾಮಿ :** ಖಂಡಿತವಾಗಿಯು, ಅದರಲ್ಲೇನು ಸಂದೇಹ? ಇಲ್ಲಿ ನಾನಿರುವುದಾದರೂ ಏತಕ್ಕಾಗಿ? ನಿಮಗೆ ತಿಳಿಯದುದನ್ನು ವಿವರಿಸಿ ತಿಳಿಸಿಕೊಡುವುದಕ್ಕಾಗಿಯೇ ಅಲ್ಲವೆ? ಯಾವುದೇ ಹೆದರಿಕೆಯಾಗಲಿ, ಸಂಕೋಚವಾಗಲಿ ಇಲ್ಲದೆ ನೀವು ನನ್ನನ್ನು ಕೇಳಬಹುದು. ಉತ್ತರ ಕೊಡಲು ನಾನು ಸದಾ ಸಿದ್ಧನಾಗಿದ್ದೇನೆ. ನೀವು ಪ್ರಾಮಾಣಿಕವಾಗಿ, ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿಂದ ಕೇಳಬೇಕು ಅಷ್ಟೆ.

**ಭಕ್ತ:** ಆದರೆ ಪ್ರಶ್ನೆಗಳನ್ನು ಕೇಳಿ ಕೇಳಿ ಗುರುವನ್ನು ಪೀಡಿಸಬಾರದು ಎಂದು ಕೆಲವು ಹಿರಿಯರು ಹೇಳುತ್ತಾರಲ್ಲ. ಅದು ನಿಜವೆ ಸ್ವಾಮಿ?

**ಸ್ವಾಮಿ :** ಅದು ಸರಿಯಲ್ಲ. ಶಿಷ್ಯನು ಬೇರೆ ಯಾರ ಬಳಿಗೆ ಹೋಗಬೇಕು? ಗುರುವೇ ಅವನಿಗೆ ಸರ್ವಸ್ವವಾದ್ದರಿಂದ ಎಲ್ಲಾ ವಿಚಾರಗಳಲ್ಲು ಅವನ ಸಲಹೆ ಪಡೆದು ಅದರಂತೆ ನಡೆಯಬೇಕು. ಅದೇ ಅತ್ಯುತ್ತಮವಾದ ಮಾರ್ಗ.

**ಭಕ್ತ:** ಹಿರಿಯರು ಏನು ಮಾಡಬೇಕೆಂದು ಹೇಳುವರೋ ಅದನ್ನು, ಯಾವ ಆಕ್ಷೇಪಣೆಯನ್ನೂ ಎತ್ತದೆ, ಭಕ್ತಿ ಗೌರವದಿಂದ ನಡೆಸಬೇಕು ಎಂದು ಕೆಲವರು ಹೇಳುತ್ತಾರೆ. ಅದೇ ತಮ್ಮ ಆದೇಶವೂ ಹೌದೆ ಸ್ವಾಮಿ?

**ಸ್ವಾಮಿ :** ಅವರಲ್ಲಿ ನಿಮಗೆ ಪೂರ್ತಿಯಾಗಿ ವಿಶ್ವಾಸವು ಬಲಿಯುವವರೆಗೆ, ಅವರ ಮಾತುಗಳಲ್ಲಿ ಸತ್ಯವಿದೆ ಎಂಬ ನಂಬಿಕೆ ನಿಮಗೆ ಬರುವವರೆಗೆ ಅವರ ಆದೇಶಗಳನ್ನು ಭಕ್ತಿಯಿಂದ ನಡೆಸಲು ನಿಮಗೆ ಕಷ್ಟವಾಗಬಹುದು. ಆದ್ದರಿಂದ ಅಲ್ಲಿಯವರೆಗೆ, ಅವರ ಆಜ್ಞೆಗಳ ಮಹತ್ವವನ್ನು, ಸೂಕ್ತಾಸೂಕ್ತತೆಯನ್ನು ಕುರಿತು ಅವರನ್ನು ಕೇಳಿ ಮನವರಿಕೆ ಮಾಡಿಕೊಂಡರೆ ಅದು ತಪ್ಪಲ್ಲ.

**ಭಕ್ತ:** ಸ್ವಾಮಿ! ನಾವು ಯಾರನ್ನು ನಂಬಬೇಕು, ಯಾರನ್ನು ನಂಬಬಾರದು? ಪ್ರಪಂಚದ ತುಂಬ ವಂಚನೆಯೇ ತುಂಬಿದೆ. ಒಳ್ಳೆಯವರು ಎಂದು ನಾವು ನಂಬಿಕೊಂಡಿದ್ದವರೇ ಕೆಟ್ಟವರಾದಾಗ ನಂಬಿಕೆ ಬೆಳೆಯುವುದು ಹೇಗೆ?

**ಸ್ವಾಮಿ :** ಮಗು, ಈ ಪ್ರಪಂಚದಲ್ಲಾಗಲಿ ಬೇರೆ ಯಾವುದರಲ್ಲೇ ಆಗಲಿ ಇತರರಲ್ಲಿ ನಂಬಿಕೆ ಬೆಳೆಸಿಕೊಳ್ಳಬೇಕಾದ ಅಗತ್ಯವೇನಿದೆ?

ಮೊದಲು ನಿನ್ನನ್ನು ನೀನು ನಂಬು, ಆಮೇಲೆ ಪರಮಾತ್ಮನಲ್ಲಿ ನಂಬಿಕೆಯನ್ನಿಡು. ಈ ಎರಡು ವಿಶ್ವಾಸಗಳನ್ನು ನೀನು ಬೆಳೆಸಿಕೊಂಡ ಪಕ್ಷದಲ್ಲಿ ಯಾವುದೇ ಒಳಿತು ಅಥವಾ ಕೆಡುಕು ನಿನಗೆ ಹಾನಿಯನ್ನುಂಟುಮಾಡುವುದಿಲ್ಲ.

**ಭಕ್ತ:** ಸ್ವಾಮಿ ಕೆಲವು ವೇಳೆ ಭಗವಂತನಲ್ಲಿ ನಂಬಿಕೆಯೂ ಕರಗಿ ಹೋಗುತ್ತದೆ ಅದಕ್ಕೇನು ಕಾರಣ?

**ಸ್ವಾಮಿ :** ಕೇವಲ ಹೊರ ಜಗತ್ತಿನ ಸೆಳೆತಕ್ಕೆ ಸಿಕ್ಕಿ, ಹೊರಗಿನ ಆಸೆ, ಆಕಾಂಕ್ಷೆಗಳಲ್ಲಿ ಯಶ ದೊರಕದೆ ಹೋದಾಗ ಅವನಿಗೆ ದೇವರಲ್ಲಿ ವಿಶ್ವಾಸವು ಕಡಿಮೆಯಾಗುತ್ತದೆ ಆದ್ದರಿಂದ ಅಂತಹ ಆಸೆಗಳನ್ನು ಬಿಡು. ಕೇವಲ ಆಧ್ಯಾತ್ಮಿಕ ಬಾಂಧವ್ಯಕ್ಕಾಗಿ ಆಸೆಪಡು, ಆಗ ಸಂದೇಹವಾಗಲಿ, ಕಷ್ಟಗಳಾಗಲಿ ನಿನ್ನನ್ನು ಕಾಡುವುದಿಲ್ಲ. ಇದಕ್ಕೆ ಬಹು ಮುಖ್ಯವಾದ ವಿಷಯ ಭಗವಂತನಲ್ಲಿ ವಿಶ್ವಾಸ. ಅದಿಲ್ಲದೆ ಹೋದರೆ ನೀನು ಎಲ್ಲದರಲ್ಲೂ ಸಂದೇಹ ತಾಳುತ್ತೀಯೆ. ಅದು ದೊಡ್ಡದಾಗಲಿ, ಚಿಕ್ಕದಾಗಲಿ ಎಲ್ಲವೂ ನಿನ್ನ ಸಂದೇಹಕ್ಕೆ ಒಳಗಾಗುತ್ತದೆ.

**ಭಕ್ತ:** ಪರಮಾತ್ಮನ ಸತ್ಯವನ್ನು ಅರ್ಥಮಾಡಿಕೊಳ್ಳುವವರೆಗೆ ಮಹಾತ್ಮರ, ಸಜ್ಜನರ ಸಹವಾಸದಲ್ಲಿರುವುದು ಮತ್ತು ಒಬ್ಬ ಗುರುವನ್ನು ದೊರಕಿಸಿಕೊಳ್ಳುವುದು ಮುಖ್ಯ ಎಂದು ಹೇಳುತ್ತಾರೆ. ಇವೆಲ್ಲಾ ಅಗತ್ಯವೇ?

**ಸ್ವಾಮಿ :** ಹೌದು, ಶ್ರೇಷ್ಠರಾದವರ ಮತ್ತು ಸಜ್ಜನರ ಸಹವಾಸ ಅತ್ಯಗತ್ಯ. ಆ ಪರಸತ್ಯ ವನ್ನು ನಿನಗೆ ಮನಗಾಣಿಸಬೇಕಾದರೆ ಒಬ್ಬ ಗುರುವೂ ಮುಖ್ಯ. ಆದರೆ ಈ ವಿಷಯದಲ್ಲಿ ನೀನು ಬಹು ಜಾಗರೂಕನಾಗಿರಬೇಕು. ಈ ದಿನಗಳಲ್ಲಿ ನಿಜವಾದ ಗುರುವು ದೊರಕುವುದು ಬಹಳ ವಿರಳ. ಕಪಟಿಗಳೇ ಬಹು ಸಂಖ್ಯೆಯಲ್ಲಿದ್ದಾರೆ, ಅಸಲಿ ಗುರುಗಳು ಏಕಾಂತಕ್ಕೆ ಸರಿದಿದ್ದಾರೆ. ತಮ್ಮಷ್ಟಕ್ಕೆ ತಾವು ಸಾಕ್ಷಾತ್ಕಾರ ದೊರಕಿಸಿ ಕೊಳ್ಳಲು ಅವರು ಯತ್ನಿಸುತ್ತಿದ್ದಾರೆ. ಅಸಲಿ ಗುರುಗಳೇನೊ ಅನೇಕರಿದ್ದಾರೆ. ಆದರೆ ಅವರನ್ನು ಸುಲಭವಾಗಿ ಕಂಡುಕೊಳ್ಳುವುದು ಸಾಧ್ಯವಿಲ್ಲ. ಒಂದು ವೇಳೆ ಅಂಥವ ರೊಬ್ಬರು ನಿನಗೆ ಸಿಕ್ಕಿ, ನಿನಗೆ ಒಂದಕ್ಕಿಂತ ಹೆಚ್ಚು ಸದ್ವಾಕ್ಯವನ್ನು ಉಪದೇಶಿದರೆ ಅದು ನಿನ್ನ ಸುದೈವವೆಂದು ಕೃತಜ್ಞನಾಗಿರಬೇಕು; ಹಲವು ಹತ್ತು ಬಗೆಯ ಕಥೆಗಳನ್ನು ಹೇಳುತ್ತಾ ಅವರು ಕಾಲವನ್ನು ಕಳೆಯುವುದಿಲ್ಲ. ಗುರುವನ್ನು ಅರಸುವುದರಲ್ಲಿ ಅವಸರ ಪಡಬಾರದು.

**ಭಕ್ತ:** ಹಾಗದರೆ ಈ ಪ್ರಪಂಚದಲ್ಲಿ ನಮಗೆ ದಾರಿಯೇನು?

**ಸ್ವಾಮಿ:** ಏಕೆ, ಅದಕ್ಕಾಗೇ ನಮಗೆ ವೇದ, ಶಾಸ್ತ್ರ, ಪುರಾಣ ಮತ್ತು ಇತಿಹಾಸಗಳಿವೆ. ಅವುಗಳನ್ನು ಅಧ್ಯಯನ ಮಾಡು; ಅವು ಬೋಧಿಸುವ ಮಾರ್ಗದಲ್ಲಿ ನಡೆದು ಅನುಭವಗಳನ್ನು ಗಳಿಸು; ಅವುಗಳ ಅರ್ಥವನ್ನು, ಸಂದೇಶವನ್ನು ಪಂಡಿತರಿಂದ ಕೇಳಿ ತಿಳಿದುಕೋ; ಅನುದಿನದ ನಡವಳಿಕೆಯಲ್ಲಿ ಅವುಗಳನ್ನು ಅನುಸರಿಸು; ಪರಮಾತ್ಮನೇ ಗುರು ಮತ್ತು ಭಗವಂತ ಎಂದು ಧ್ಯಾನ ಮಾಡು; ಆಗ ಆ ಗ್ರಂಥಗಳೇ ನಿನಗೆ ಗುರುವಾಗಿ ಸಹಾಯ ಮಾಡುತ್ತವೆ. ಇಷ್ಟಕ್ಕೂ ಗುರು ಎಂದರೆ ಏನು? ಯಾರ ಮೂಲಕ ನಿನ್ನ ಮನಸ್ಸು ಭಗವಂತನಲ್ಲಿ ನೆಲೆಗೊಳ್ಳುತ್ತದೆಯೋ ಅವನೀಗ ಗುರು. ಪರಮಾತ್ಮನನ್ನು ಗುರುವಾಗಿ ಪರಗಣಿಸಿ ಅಚಂಚಲ ಪ್ರೇಮದಿಂದ ಸಾಧನೆ ಮಾಡುತ್ತಾ ಹೋದರೆ, ಭಗವಂತನೇ ನಿನ್ನೆದುರಿಗೆ ಕಾಣಿಸಿಕೊಂಡು ಗುರುವಾಗಿ ಉಪದೇಶ ಮಾಡುತ್ತಾನೆ. ಅಥವಾ ಸಾಧನೆಯ ಫಲವಾಗಿ ಒಬ್ಬ ಸದ್ಗುರುವನ್ನು ನೀನು ಸಂಧಿಸುವಂತೆ ಅವನು ಅನುಗ್ರಹಿಸುತ್ತಾನೆ.

**ಭಕ್ತ:** ಆದರೆ ಇಂದು ಕೆಲವು ದೊಡ್ಡ ಮನುಷ್ಯರು ಕೇಳಿದವರಿಗೆಲ್ಲಾ ಉಪದೇಶವನ್ನು ಕೊಡುತ್ತಿದ್ದಾರೆ. ಇವರು ಸದ್ಗುರುಗಳಲ್ಲವೆ ಸ್ವಾಮಿ?

**ಸ್ವಾಮಿ:** ಅವರು ಸದ್ಗುರುಗಳು ಹೌದು ಎಂದೋ ಅಲ್ಲ ಎಂದೋ ನಾನು ಹೇಳುವುದಿಲ್ಲ. ಆದರೆ ಇಷ್ಟನ್ನು ಮಾತ್ರ ಹೇಳುತ್ತೇನೆ. ಮುಖಸ್ತುತಿ ಮಾಡಿಕೊಂಡು ತನ್ನ ಬಳಿಗೆ ಬರುವವರಿಗೆಲ್ಲಾ ಉಪದೇಶ ಮಾಡುವುದು ಸದ್ಗುರುವಿನ ಲಕ್ಷಣವಲ್ಲ. ವ್ಯಕ್ತಿಯ ಭೂತ–ಭವಿಷ್ಯಗಳನ್ನು ಪರಿಗಣಿಸದೆ, ಅರ್ಹತೆ ಮತ್ತು ಅನರ್ಹತೆಗಳನ್ನು ಪರೀಕ್ಷಿಸದೆ, ಶಿಷ್ಯನು ಉಪದೇಶಕ್ಕೆ ಯೋಗ್ಯನಾಗಿದ್ದಾನೆಯೆ ಎಂದು ನೋಡದೆ ಉಪದೇಶ ಮಾಡಬಾರದು.

**ಭಕ್ತ:** ಹಾಗಾದರೆ, ಸ್ವಾಮಿ, ನಾನೊಂದು ಅಪರಾಧ ಮಾಡಿದ್ದೇನೆ. ಒಬ್ಬ ಮಹಾತ್ಮರು ನಮ್ಮ ಹಳ್ಳಿಗೆ ಬಂದಿದ್ದರು. ಅವರಿಂದ ಎಲ್ಲರೂ ಉಪದೇಶ ಪಡೆಯುತ್ತಿದ್ದುದನ್ನು ನೋಡಿ, ನಾನೂ ಅವರಿಗೆ ನಮಸ್ಕಾರ ಮಾಡಿ ಕೇಳಿದೆ; ಅವರು ನನಗೊಂದು ಒಳ್ಳೆಯ ಮಂತ್ರವನ್ನು ಉಪದೇಶಿಸಿ ಅನುಗ್ರಹಿಸಿದರು. ಸ್ವಲ್ಪ ಕಾಲ ನಾನು ಮಂತ್ರ ಜಪ ಮಾಡುತ್ತಿದ್ದೆ. ಆಮೇಲೆ ಅವರೊಬ್ಬ ಕಪಟಿ, ಮೋಸಗಾರ ಎಂದು ಗೊತ್ತಾಯಿತು. ಅವರು ನನಗೆ ಅನುಗ್ರಹಿಸಿದ್ದ ನಾಮದ ಮೇಲೆ ನನಗೆ ವಿಶ್ವಾಸ ಹೊರಟು ಹೋಯಿತು; ಮಂತ್ರ ಜಪವನ್ನು ಕೈಬಿಟ್ಟು ತಪ್ಪು ಮಾಡಿದೆನೆ ಅಥವಾ ಸರಿಯೇ?

**ಸ್ವಾಮಿ:** ಇದರ ತಪ್ಪು ಸರಿಯನ್ನು ನೀನು ಸಂದೇಹಿಸುವೆಯಾ? ಅದು ದೊಡ್ಡ ತಪ್ಪು. ಈಗ ನಾನು ಹೇಳಿದ ಹಾಗೆ ಗುರುವು ಶಿಷ್ಯನ ಅರ್ಹತೆಗಳನ್ನು ಪರೀಕ್ಷಿಸುವ ಹಾಗೆ ಶಿಷ್ಯನೂ ಉಪದೇಶವನ್ನು ಸ್ವೀಕರಿಸುವುದಕ್ಕೆ ಮುಂಚೆ ಗುರುವಿನ ಯೋಗ್ಯತೆಯನ್ನು ಪರೀಕ್ಷಿಸಬೇಕು. ನೀನು ಮಾಡಿದ ಮೊದಲನೆಯ ತಪ್ಪು ಉಪದೇಶವನ್ನು ಪಡೆಯುವುದಕ್ಕೆ ಮೊದಲು ಇದಕ್ಕೆ ಗಮನ ಕೊಡದೆ ಅವಸರಪಟ್ಟಿದ್ದು. ಒಂದು ವೇಳೆ ಗುರುವು ಅಗತ್ಯ ಅರ್ಹತೆಗಳಿಲ್ಲದೆಯೂ ಉಪದೇಶ ಮಾಡಿದನೆನ್ನೋಣ. ನೀನು ಏಕೆ ಪ್ರತಿಜ್ಞೆಯನ್ನು ಮುರಿದು ನಾಮಜಪವನ್ನು ಕೈಬಿಟ್ಟೆ? ಅದು ನೀನು ಮಾಡಿದ ಎರಡನೆಯ ತಪ್ಪು; ಯಾರೋ ಮಾಡಿದ ತಪ್ಪನ್ನು ಪವಿತ್ರ ಭಗವನ್ನಾಮಕ್ಕೆ ಆರೋಪಿಸಿದ್ದು. ಮೊದಲೇ ಸಾಕಷ್ಟು ಸಮಯ ತೆಗೆದುಕೊಂಡು ಆತನ ಅಸಲಿತನವನ್ನು ತಿಳಿದುಕೊಂಡು ಆತನಲ್ಲಿ ಶ್ರದ್ಧೆ ವಿಶ್ವಾಸಗಳನ್ನು ಬೆಳೆಸಿಕೊಳ್ಳಬೇಕಾಗಿತ್ತು. ಆಮೇಲೆ ಆತನನ್ನು ಗುರುವಾಗಿ ಸ್ವೀಕರಿಸಬೇಕೆಂಬ ಒತ್ತಡವು ಅಂತರಂಗದಲ್ಲಿ ಮೂಡಿದಾಗ ಉಪದೇಶವನ್ನು ಸ್ವೀಕರಿಸಬೇಕಾಗಿತ್ತು. ಆದರೆ ಒಮ್ಮೆ ಒಪ್ಪಿಕೊಂಡಾದ ಮೇಲೆ ಎಂಥದೇ ಕಷ್ಟ ಬಂದರೂ ನಿಲ್ಲಿಸದೆ ನಾಮಜಪವನ್ನು ಮುಂದುವರಿಸಬೇಕಾಗಿತ್ತು. ಇಲ್ಲವಾದರೆ, ಉದ್ದೇಶವಿಲ್ಲದೆ ಸ್ವೀಕರಿಸಿ, ಉದ್ದೇಶವಿಲ್ಲದೆ ಪರಿತ್ಯಜಿಸಿದ ದೋಷ ನಿನ್ನದಾಗುತ್ತದೆ. ಸಂದೇಹವು ಕಾಡುತ್ತಿದ್ದರೂ ನಿನಗೆ ಅಷ್ಟಾಗಿ ಇಷ್ಟವಿಲ್ಲದ ನಾಮವಾದರೂ ಸರಿ, ಸ್ವೀಕರಿಸಿದ ಮೇಲೆ ಅದನ್ನು ತೊರೆಯಬಾರದು.

**ಭಕ್ತ:** ತ್ಯಜಿಸಿದಾಗ ಏನಾಗುತ್ತದೆ?

**ಸ್ವಾಮಿ:** ಮಗು, ಗುರುವಿಗೆ ಅವಿಧೇಯತೆ ಮತ್ತು ಭಗವನ್ನಾಮದ ತಿರಸ್ಕಾರ—ಈ ದೋಷಗಳಿಂದಾಗಿ ನಿನ್ನ ಸಾಧನೆ ಮತ್ತು ಏಕಾಗ್ರತೆಗಳು ಸೊರಗಿ ಹೋಗುತ್ತವೆ. "ರೋಗ ಹತ್ತಿದ ಸಸಿಯು ಮರವಾಗಿ ಬೆಳೆಯದು" ಎಂಬ ಉಕ್ತಿಯಿಲ್ಲವೆ?

**ಭಕ್ತ:** ನಮಗೆ ಅರ್ಹತೆಯ ಕೊರತೆಯಿದ್ದಾಗಲೂ ಗುರುವು ಮಂತ್ರೋಪದೇಶ ಮಾಡಿದರೆ?

**ಸ್ವಾಮಿ:** ಅಂತಹ ಗುರುವು ಗುರುವೇ ಅಲ್ಲ. ಅವನ ತಪ್ಪಿನ ಫಲವು ನಿನ್ನ ಮೇಲೆ ಬೀಳುವುದಿಲ್ಲ. ಆ ದೋಷಕ್ಕೆ ಅವನೇ ಫಲವನ್ನು ಅನುಭವಿಸಬೇಕು.

**ಭಕ್ತ:** ಶಿಷ್ಯನು ಗುರುವಿನೊಂದಿಗೆ ಪ್ರಮಾಣ ಮಾಡಿರುವಂತೆ ನಡೆದುಕೊಂಡರೆ, ಮುಂದೆ ಆ ಗುರುವು ಎಂಥವನೇ ಆಗಿರಲಿ, ಅವನಲ್ಲಿ ಹಿಂದಿನಂತೆಯೇ ಗೌರವಿಸುತ್ತಿದ್ದರೆ ಶಿಷ್ಯನು ಗುರಿಯನ್ನು ಮುಟ್ಟಲು ಸಾಧ್ಯವಿದೆಯೆ?

**ಸ್ವಾಮಿ :** ಖಂಡಿತವಾಗಿ, ಅದರಲ್ಲಿ ಸಂದೇಹವೇನಿದೆ? ಏಕಲವ್ಯನ ಕತೆಯು ನಿನಗೆ ತಿಳಿದಿಲ್ಲವೆ? ದ್ರೋಣಾಚಾರ್ಯರು ಅವನನ್ನು ಶಿಷ್ಯನೆಂದು ಅಂಗೀಕರಿಸಲಿಲ್ಲ. ಆಗ ಅವನು ಒಂದು ಪ್ರತಿಮೆಯನ್ನು ಅದೇ ದ್ರೋಣಾಚಾರ್ಯರೆಂದು ಭಾವಿಸಿದನು. ಹಾಗೆ ಭಕ್ತಿಯಿಂದ ಪೂಜಿಸುತ್ತಾ ಧನುರ್ವಿದ್ಯೆಯನ್ನು ಕಲಿತು ಸಕಲ ಕಲೆಗಳಲ್ಲಿ ಪರಿಣತಿಯನ್ನು ಸಂಪಾದಿಸಿದನು. ಕೊನೆಗೆ ಅನ್ಯಾಯದಿಂದ ಕುರುಡಾಗಿ ಗುರುವು ತನಗೆ ಗುರುದಕ್ಷಿಣೆಯಾಗಿ ಬಲಗೈ ಹೆಬ್ಬೆರಳನ್ನು ಕೊಡಬೇಕೆಂದು ಕೇಳಿದಾಗ, ಏಕಲವ್ಯನು ಸಂತೋಷವಾಗಿ ಅದನ್ನು ಕೊಟ್ಟುಬಿಟ್ಟನು. ಗುರುವು ತನಗೆ ಮಾಡಿದ ಅನ್ಯಾಯವನ್ನು ಏಕಲವ್ಯನು ಮನಸ್ಸಿಗೆ ತಂದುಕೊಂಡನೆ?

**ಭಕ್ತ:** ಹಾಗೆ ಕೊಟ್ಟಿದ್ದರಿಂದ ಏನು ಪ್ರಯೋಜನವಾಯಿತು ಸ್ವಾಮಿ? ಆತನು ಪಡೆದ ಶಿಕ್ಷಣವೆಲ್ಲ ವ್ಯರ್ಥವಾಯಿತು ಅಷ್ಟೆ. ಅವನು ಮಾಡಿದ ಸಾಧನೆಯ ಫಲಿತಾಂಶವೇನು?

**ಸ್ವಾಮಿ :** ಏಕಲವ್ಯನು ತನ್ನ ಪ್ರತಿಭೆಯನ್ನು ಉಪಯೋಗಿಸುವ ಎಲ್ಲಾ ಅವಕಾಶಗಳನ್ನು ಕಳೆದುಕೊಂಡರೂ ಆ ಶಿಕ್ಷಣದಿಂದ ಅವನು ಪಡೆದ ಚಾರಿತ್ರ್ಯ ಎಂದಿಗೂ ಕಳೆದುಹೋಗಲಿಲ್ಲ. ತನ್ನ ತ್ಯಾಗದಿಂದ ಅವನು ಗಳಿಸಿದ ಸತ್ಕೀರ್ತಿ ಸಾಕಷ್ಟು ಪರಿಹಾರವಲ್ಲವೇನು?

**ಭಕ್ತ:** ಸರಿ ಆದದ್ದು ಆಗಿಹೋಯಿತು. ಇನ್ನು ಮುಂದಾದರೂ ನಾನು ಸರಿಯಾಗಿ ನಡೆದುಕೊಂಡು ಹೆಸರು ಕೆಡದಂತಿರಬೇಕು. ದಯವಿಟ್ಟು ತಾವೇ ನನಗೆ ಬೋಧಿಸಬೇಕು.

**ಸ್ವಾಮಿ :** ನಿನ್ನ ಯೋಚನೆ, ಇಡೀ ರಾತ್ರಿ ರಾಮಾಯಣದ ಪ್ರದರ್ಶನವನ್ನು ನೋಡಿ ಬೆಳಗಾಗುತ್ತಲೇ ರಾಮನಿಗೂ ಸೀತೆಗೂ ಏನು ಸಂಬಂಧ ಎಂದು ಪಕ್ಕದಲ್ಲಿದ್ದವನನ್ನು ಕೇಳಿದವನ ಹಾಗಿದೆ! ನಿನ್ನ ಅರ್ಹತೆಗಳು ಮಾಗಿದಾಗ ಗುರು ಮತ್ತು ಉಪದೇಶ ತಾವಾಗಿ ಒದಗಿಬರುತ್ತವೆ. ಇಂದು ನಾನು ಹೇಳಿದೆನಲ್ಲವೆ? ಅದು ತನಗೆ ತಾನೇ ಬರುತ್ತದೆ, ನೀನು ಕೇಳಬೇಕಾದ ಅವಶ್ಯಕತೆ ಇಲ್ಲ! ನಿಜವಾಗಿ ಹೇಳಬೇಕೆಂದರೆ, ಶಿಷ್ಯನು ತಾನಾಗಿ ಉಪದೇಶಕ್ಕಾಗಿ ಕೇಳಬಾರದು. ಗುರುವು ಸೂಕ್ತ ಸಮಯಕ್ಕಾಗಿ ಕಾಯುತ್ತಿರುತ್ತಾನೆ, ಅವನೇ ಅನುಗ್ರಹಿಸಿ ಸಹಾಯ ಮಾಡುತ್ತಾನೆ. ನೀನು ಒಂದು ಸಾರಿಗಿಂತ ಹೆಚ್ಚಾಗಿ ಉಪದೇಶವನ್ನು ಪಡೆದುಕೊಳ್ಳಬಾರದು. ಅದು ಪುನರುಕ್ತಿಸುವಂಥದಲ್ಲ. ಒಂದು ಉಪದೇಶವನ್ನು ತೊರೆದು ನಿನಗೆ ಇಷ್ಟಬಂದಂತೆ ಇನ್ನೊಂದನ್ನು ಹಿಡಿದರೆ ಅದು ಮದುವೆಯಾದ ಹೆಣ್ಣು ದಾರಿ ತಪ್ಪಿ ಹೋದ ಹಾಗೆ.

**ಭಕ್ತ:** ಹಾಗಾದರೆ ಈಗ ನನ್ನ ಗತಿ ಏನು? ನನ್ನನ್ನು ರಕ್ಷಿಸಿಕೊಳ್ಳಲು ದಾರಿಯೇ ಇಲ್ಲವೆ?

**ಸ್ವಾಮಿ:** ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಡು. ಆದರೆ ಪಡೆದುಕೊಂಡ ಭಗವನ್ನಾಮವನ್ನು ಕುರಿತು ಧ್ಯಾನವನ್ನು ಬಿಡದೆ ಮುಂದುವರಿಸು. ಜಪವನ್ನು ಬಿಟ್ಟು ನಾಮಸ್ಮರಣೆಗೆ ನೀನು ಎಷ್ಟು ನಾಮಗಳನ್ನು ಬೇಕಾದರೂ ಬಳಸಬಹುದು. ಧ್ಯಾನಕ್ಕೆ ಮಾತ್ರ ಉಪದೇಶದಿಂದ ಪಡೆದ ನಾಮವನ್ನೇ ಉಚ್ಚರಿಸಬೇಕು, ನೆನಪಿಟ್ಟುಕೊ. ಪವಿತ್ರ ನಾಮವನ್ನು ಬದಲಾಯಿಸುತ್ತಿರಬೇಡ; ಅವಿರತವಾದ ಹಂಬಲದಿಂದ ಪರಿಶ್ರಮದಿಂದ ನಿನ್ನನ್ನು ಪರಿವರ್ತಿಸಿಕೊಂಡು ಮುಂದುವರಿ.

**ಭಕ್ತ:** ಸ್ವಾಮಿ, ಈ ದಿನವು ನಿಜವಾಗಿ ಶ್ರೇಷ್ಠವಾದ ದಿನ. ತಾವು ಕೃಪೆಯಿಟ್ಟು ನೀಡಿದ ಸಂದೇಶದಿಂದ ಸಂಶಯಗಳೆಲ್ಲ ಪರಿಹಾರವಾದುವು. ತಾವು ಹೇಳಿದಂತೆ ಉಪದೇಶವು ಸಂದೇಹವನ್ನು ಸೃಷ್ಟಿಸಿತು; ತಮ್ಮ ಸಂದೇಶವು ಅದನ್ನು ಹೋಗಲಾಡಿಸಿತು. ಅನುಮತಿ ಕೊಟ್ಟರೆ ನಾನು ನನ್ನ ಸ್ಥಳಕ್ಕೆ ಹಿಂದಿರುಗತ್ತೇನೆ. ಮತ್ತೆ ಬರುವಾಗ ಇನ್ನಷ್ಟು ಹೊಸ ಸಂದೇಹಗಳನ್ನು ತರುತ್ತೇನೆ. ತಮ್ಮ ದಿವ್ಯ ಸನ್ನಿಧಿಯಲ್ಲಿ ಅವುಗಳನ್ನು ಹೋಗಲಾಡಿಸಿಕೊಂಡು ಬದಲಿಗೆ ಶಾಂತಿ ಮತ್ತು ಆನಂದಗಳನ್ನು ತುಂಬಿಕೊಳ್ಳುತ್ತೇನೆ. ತಾವು ಅಪ್ಪಣೆ ಕೊಟ್ಟರೆ ಮುಂದಿನ ತಿಂಗಳು ಬರುತ್ತೇನೆ.

**ಸ್ವಾಮಿ:** ಒಳ್ಳೆಯದು. ನನಗೆ ಬೇಕಾಗಿರುವದೂ ಅದೇಯೆ. ನಿನ್ನಂಥವರು ಸಂದೇಹಗಳನ್ನು ಪರಿಹರಿಸಿಕೊಂಡು ಜೀವನದ ನಿಜವಾದ ಅರ್ಥವನ್ನು ಗ್ರಹಿಸಿ, ಸಂದೇಶವನ್ನು ಶ್ರದ್ಧೆಯಿಂದಲೂ ಸ್ಥಿರ ಬುದ್ಧಿಯಿಂದಲೂ ಸ್ವಾಗತಿಸಬೇಕು, ಭಗವಂತನ ನಾಮಸ್ಮರಣೆಯಲ್ಲಿ ನಿರಂತರವಾಗಿ ನಿರತನಾಗಬೇಕು. ನೀನು ಬಂದಾಗಲೆಲ್ಲಾ, ಏನೇ ಆಗಲಿ, ದುಃಖ ಸಂದೇಹ ಕಳವಳಗಳನ್ನು ಕಳೆದುಕೊಳ್ಳುವ ಮಾರ್ಗವನ್ನು ನನ್ನಿಂದ ಕೇಳಿ ತಿಳಿದುಕೊ. ಎಂದೂ ದುಃಖವನ್ನು ಅನುಭವಿಸಬೇಡ. ಏಕೆಂದರೆ ಆ ನೋವನ್ನು ಒಳಗಿಟ್ಟುಕೊಂಡು ನೀನು ಯಾವ ಸಾಧನೆಯನ್ನೂ ಮಾಡಲಾರೆ. ಆ ಸ್ಥಿತಿಯಲ್ಲಿ ನೀನು ಮಾಡುವ ಸಾಧನೆಯೆಲ್ಲವೂ ಬೂದಿಯಮೇಲೆ ಸುರಿದ ಪನ್ನೀರಾಗುತ್ತದೆ. ಒಳ್ಳೆಯದು ಈಗ ಹೋಗು ಮತ್ತೆ ಬಾ.

# ಅಧ್ಯಾಯ ೨

**ಭಕ್ತ:** ನಮಸ್ಕಾರ ಮಾಡುತ್ತೇನೆ, ಸ್ವಾಮಿ.

**ಸ್ವಾಮಿ:** ನಿನ್ನನ್ನು ನೋಡಿ ಸಂತೋಷವಾಗುತ್ತದೆ. ತುಂಬಾ ಆಯಾಸವಾಗಿರುವಂತಿದೆ. ಈ ಬೇಸಿಗೆಯಲ್ಲಿ ಪ್ರಯಾಣ ಹೆಚ್ಚು ಬಳಲಿಸುತ್ತದೆ. ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದುಕೊ. ಆಮೇಲೆ ಮಾತನಾಡೋಣ.

**ಭಕ್ತ:** ಮನಶ್ಶಾಂತಿಯಿಲ್ಲದಾಗ ವಿಶ್ರಾಂತಿಯನ್ನು ಎಲ್ಲಿ ಪಡೆಯಬಹುದು?

**ಸ್ವಾಮಿ:** ಮಗು, ಮನಸ್ಸಿಗಾಗಿಯೇ ವಿಶ್ರಾಂತಿ. ಆ ಶಾಂತಿ ದೊರೆತಮೇಲೆ ವಿಶ್ರಾಂತಿಯ ಅಗತ್ಯವೆಲ್ಲಿದೆ? ಗಾಯ ಮಾಗುವವರೆಗೆ ಬ್ಯಾಂಡೇಜು ಕಟ್ಟಬೇಕು; ಆಮೇಲೆ ಅದರಿಂದ ಏನು ಉಪಯೋಗ?

**ಭಕ್ತ:** ಸ್ವಾಮಿ, ಈಗ ನನ್ನ ಮನಸ್ಸು ಚಡಪಡಿಸುತ್ತಿದೆ. ನಾನು ಏನನ್ನೂ ನಿರ್ಧರಿಸಲಾರದವನಾಗಿದ್ದೇನೆ. ಅದಕ್ಕೆ ಕಾರಣ ಏನೆಂದು ತಿಳಿಯುತ್ತಿಲ್ಲ. ಏನು ಮಾಡಲಿ?

**ಸ್ವಾಮಿ:** ಕಾರಣವಿಲ್ಲದೆ ಕಾರ್ಯವಿಲ್ಲ. ನಿನ್ನ ಈಗಿನ ಮನಸ್ಥಿತಿಯ ಕಾರಣವು ನಿನಗೆ ಖಂಡಿತವಾಗಿಯೂ ತಿಳಿಯುತ್ತದೆ... ಒಳ್ಳೆಯದು, ಈಗ ಬೇರೆ ಏನನ್ನೂ ಮಾಡಬೇಕಾಗಿಲ್ಲ. ಮನೋಯಾತನೆಯ ಸಂದರ್ಭಗಳಲ್ಲಿ ಸ್ವಲ್ಪ ಹೊತ್ತು ಏಕಾಂತ ಸ್ಥಳದಲ್ಲಿ ಕುಳಿತು ನಾಮಸ್ಮರಣೆ ಮಾಡು; ಅಥವಾ ಇದು ಸಾಧ್ಯವಿಲ್ಲವೆನಿಸಿದರೆ, ಹಾಸಿಗೆ ಉರುಳಿಸಿಕೊಂಡು ಸ್ವಲ್ಪ ಹೊತ್ತು ನಿದ್ದೆ ಮಾಡು. ಆಮೇಲೆ ಇದೆಲ್ಲವನ್ನೂ ಕುರಿತು ಯೋಚಿಸುವೆಯಂತೆ.

**ಭಕ್ತ:** ನೀವು ಹೇಳಿಲ್ಲವೆ ಸ್ವಾಮಿ, ಈ ಪ್ರಪಂಚದಲ್ಲಿ ಪ್ರತಿಯೊಬ್ಬರಿಗೂ ಪ್ರಿಯವಾದ ಯಾವುದಾದರೂ ವಸ್ತುವಿರುತ್ತದೆ; ಅದಕ್ಕೆ ಏನಾದರೂ ಹಾನಿಯುಂಟಾದರೆ ಮನಸ್ಸಿನ ಶಾಂತಿ ಕದಡಿಹೋಗುತ್ತದೆ ಎಂದು? ಅಂಥದೊಂದು ನಡೆದಿರುವಾಗ ನನಗೆ ಅತ್ಯಂತ ಪ್ರಿಯವಾದುದನ್ನು ಇನ್ನೊಬ್ಬ ವ್ಯಕ್ತಿ ಅಪಮಾನಿಸಿದಾಗ ಅಥವಾ ಅದರಲ್ಲಿ ದೋಷವನ್ನು ಬೆದಕುತ್ತ ಹೋದಾಗ ನನ್ನ ಮನಸ್ಸಿಗೆ ಹೇಗೆ ತಾನೆ ಶಾಂತಿ ಬಂದೀತು? ಆಗ ನಾನು ಏನು ಮಾಡಬೇಕು?

**ಸ್ವಾಮಿ:** ಒಳ್ಳೆಯದು. ಆತ್ಮ ವಿಚಾರವನ್ನು ತಿಳಿದುಕೊಂಡಿರುವ ಸಜ್ಜನನು ಈ ರೀತಿ ಇತರರು ಪ್ರೀತಿಸುವ ವಸ್ತುಗಳನ್ನು ನಿಂದಿಸುವುದಿಲ್ಲ. ಅಂತಹ ಜನರ

ಸಹವಾಸವನ್ನು ಮಾಡುವುದಿಲ್ಲ. ಏಕೆಂದರೆ ಅವನು ತನ್ನಲ್ಲೇ ಹೀಗೆ ಹೇಳಿ ಕೊಳ್ಳುತ್ತಾನೆ; ಇನ್ನೊಬ್ಬರ ಇಷ್ಟ ವಸ್ತುವನ್ನು ನಿಂದಿಸಿದಾಗ ಅವನಿಗೆ ತನ್ನ ಇಷ್ಟ ವಸ್ತುವನ್ನು ನಿಂದಿಸಿದಾಗ ಆಗುವಷ್ಟೇ ಯಾತನೆಯಾಗುತ್ತದೆ. ಆದ್ದರಿಂದ ಶಾಂತ ನಾಗು. ಹಾಗೆ ನಿಂದಿಸುವವರು ಆತ್ಮ ವಿಚಾರವನ್ನು ತಿಳಿಯದವರು. ನೀನು ಆತ್ಮವಿಚಾರದಲ್ಲಿ ನಿರತನಾಗಿರುವಾಗ ಅದರ ಜ್ಞಾನವಿಲ್ಲದಿರುವವರೊಂದಿಗೆ ನಿನಗೆ ಯಾವ ಸಂಬಂಧವೂ ಇಲ್ಲ... ಅದು ಹಾಗಿರಲಿ, ಇದೆಲ್ಲಕ್ಕೂ ಕಾರಣವೇನು? ನಿನ್ನ ಮನಸ್ಸಿನೊಳಗೆ ಕೊರೆಯುತ್ತಿರುವುದೆಲ್ಲ ಹೊರಗೆ ಬಂದುಬಿಟ್ಟರೆ ಎಲ್ಲ ಕಷ್ಟಗಳೂ ಕೊನೆಗೊಳ್ಳುತ್ತವೆ.

**ಭಕ್ತ:** ಆಧ್ಯಾತ್ಮಿಕವಾಗಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಸದಾ ಒಳ್ಳೆಯ ಕೆಲಸದಲ್ಲೇ ತೊಡಗಿರಲು ಬೇಕಾದ ಧೈರ್ಯ ಸ್ಥೈರ್ಯಗಳನ್ನು ತುಂಬಿ, ಮಾರ್ಗ ದರ್ಶನ ನೀಡಿ, ನೀವು ಹೇಗೆ ಜನರನ್ನು ಸರಿಯಾದ ದಾರಿಯಲ್ಲಿ ನಡೆಸುತ್ತಿದ್ದೀರಿ ಎಂಬುದನ್ನು ಇಡೀ ಜಗತ್ತು ಬಲ್ಲುದು. ನೀವು ಶೈಕ್ಷಣಿಕವಾಗಿ ಮತ್ತು ವೈದ್ಯಕೀಯ ವಾಗಿ ಅಪಾರವಾದ ನೆರವು ನೀಡಿದ್ದೀರಿ. ನೀವು ಎಂದೂ ಯಾರಿಗೂ ಕೆಟ್ಟದ್ದು ಮಾಡಿಲ್ಲ... ಇಂತಹ ನಿಮ್ಮನ್ನು ಕುರಿತು ಇಲ್ಲ ಸಲ್ಲದ ಕಥೆಗಳನ್ನು ಕಟ್ಟಿ ಹರಡುವ ವ್ಯಕ್ತಿಗಳನ್ನು ಅಡಗಿಸುವುದು ಹೇಗೆ? ಅವರಿಗೆ ಇದರಿಂದ ಏನು ಲಾಭ?

**ಸ್ವಾಮಿ :** ಓ, ಇದೋ ಕಥೆ? ಸರಿ, ನಿನಗೆ ಗೊತ್ತಿಲ್ಲವೆ, ಒಳ್ಳೆಯದು ಕೆಟ್ಟದ್ದು ಎರಡೂ ಜಗತ್ತಿನ ಸ್ವಭಾವವೇ ಆಗಿವೆ. ಎಲ್ಲರೂ ಮಾರುವವರೇ ಆದರೆ, ಕೊಳ್ಳುವವರು ಯಾರು? ಭಗವಂತನನ್ನು ಕುರಿತು ದೋಷಾನ್ವೇಷಣೆ ಕಾಲಾನುಕಾಲದಿಂದ ಬಂದಿ ರುವ ಸಂಗತಿಯಾಗಿದೆ; ಅದೇನೂ ಹೊಸದಲ್ಲ. ಇವತ್ತಿನವರು ಕೆಲವು ಹೊಸ ಕಥೆಗಳನ್ನು ಕಟ್ಟಬಹುದು ಅಷ್ಟೆ. ಅದಿರಲಿ, ನೀನೇಕೆ ಈ ನಿಂದನೆಯನ್ನು ಮನಸ್ಸಿಗೆ ತಂದುಕೊಳ್ಳಬೇಕು? ಅವರು ಈ ವಿಧಾನದಿಂದ ಸ್ವಾಮಿಯನ್ನು ನೆನಪು ಮಾಡಿ ಕೊಳ್ಳುತ್ತಿದ್ದಾರೆ ಎಂದು ಭಾವಿಸಿಕೊ. ಪ್ರೇಮಸ್ಮರಣ ಮತ್ತು ದ್ವೇಷಸ್ಮರಣ ಎಂದು ಎರಡು ವಿಧಗಳಿವೆ. ಇವುಗಳಲ್ಲಿ ದ್ವೇಷಸ್ಮರಣೆ ಅವಿದ್ಯಾ ಮಾಯೆ; ಅದು ರಜೋ ಗುಣಕ್ಕೆ ಸಂಬಂಧಪಟ್ಟದ್ದು. ಪ್ರೇಮಸ್ಮರಣವು ವಿದ್ಯಾ ಮಾಯೆ; ಅದು ಸತ್ವಗುಣ ಕ್ಕೆ ಸಂಬಂಧಿಸಿದ್ದು. ಅವಿದ್ಯಾಮಾಯೆಯು ದುಃಖದಲ್ಲೂ ವಿದ್ಯಾಮಾಯೆಯು ಆನಂದದಲ್ಲೂ ಪರ್ಯಾವಸಾನವಾಗುತ್ತವೆ. ಅವುಗಳ ಫಲ ಅಲ್ಲಲ್ಲೇ ಸೂಚಿತ ವಾಗಿದೆ. ಅವರನ್ನು ನೀನೇಕೆ ಅಡಗಿಸಬೇಕು? ಅವರಿಗೇನು ಲಾಭ ಎಂದು ಕೇಳಿದೆಯಲ್ಲವೆ? ಅವರಿಗೆ ಯಾವ ಲಾಭವೂ ಬೇಕಾಗಿಲ್ಲ; ಇತರರ ದೋಷಗಳನ್ನು ಬೆದಕುವುದೇ ಅವರಿಗೆ ಅಭ್ಯಾಸವಾಗಿರುತ್ತದೆ; ಅದು ತಮ್ಮ ಕರ್ತವ್ಯವೆಂಬಂತೆ ಮಾಡುತ್ತಾರೆ. ಬಟ್ಟೆಯ ನುಸಿಗೆ ತಾನು ಕಚ್ಚುತ್ತಿರುವ ಸೀರೆ ನೂರು ರೂಪಾಯಿ

ಗಳದ್ದಾದರೇನು ಅಗ್ಗವಾದುದಾದರೆ ಏನು? ಕಚ್ಚುವುದು, ಹರಿಯುವುದು ಅದರ ಸ್ವಭಾವ. ದುಬಾರಿ ಬೆಲೆಯ ಸೀರೆಯನ್ನೂ ಕಡಮೆ ಬೆಲೆಯ ಸೀರೆಯನ್ನೂ ಸಮನಾಗಿಯೇ ಅದು ಕಚ್ಚಿ ಹಾಳುಮಾಡುತ್ತದೆ. ಅದಕ್ಕೆ ವಸ್ತುಗಳ ಮೌಲ್ಯ ಗೊತ್ತೆ? ಅದರ ಕೆಲಸವೇ ಅಂಥದು. ಆದ್ದರಿಂದ ದೋಷಾನ್ವೇಷಕರ ಕೆಲಸವು ನುಸಿಯ ಕೆಲಸದ ಹಾಗೆ ಎಂದು ಅರ್ಥ ಮಾಡಿಕೊಂಡು ಶಾಂತನಾಗಿರು.

**ಭಕ್ತ:** ಸ್ವಾಮಿ! ನೀವು ಹೇಳಿದ್ದು ಸರಿ. ಅಜ್ಞಾನಿಗಳಾದವರು ಹಾಗೆ ವರ್ತಿಸಿದಾಗ ನುಸಿಯ ವರ್ಗಕ್ಕೆ ಸೇರಿದವರು ಎಂದು ಸುಮ್ಮನಾಗಬಹುದು. ಆದರೆ ವಿದ್ಯಾವಂತರಾದ, ದೊಡ್ಡವರೆನಿಸಿದ, ತಿಳಿದುಕೊಂಡಿರುವ ವ್ಯಕ್ತಿಗಳು ಹೀಗೆ ಕತೆ ಕಟ್ಟಿ ಹರಡುವುದನ್ನು ನೋಡಿ ಸಹಿಸಿಕೊಳ್ಳುವುದು ಹೇಗೆ?

**ಸ್ವಾಮಿ:** ಕಲಿಯುವಿಕೆ ಎಂದರೆ ಆತ್ಮ ಜ್ಞಾನ; ಅದು ಪ್ರಪಂಚಕ್ಕೆ ಸಂಬಂಧಿಸಿದ ವಸ್ತುಗಳ ಅರಿವಲ್ಲ. ಅದು ಹೊಟ್ಟೆಪಾಡಿಗಾಗಿ ಕಲಿಕೆ, ಜೀವನಕ್ಕೆ ಆಧಾರ. ಆತ್ಮ ಜ್ಞಾನವನ್ನು ಅದರೊಂದಿಗೆ ಹೋಲಿಸುವುದು ದೊಡ್ಡ ತಪ್ಪು. ಇತರರನ್ನು ನಿಂದಿಸದೆ, ಸದುದ್ದೇಶದಿಂದ ಸತ್ಯವನ್ನು ಅರಸುವವರೀಗ ಶ್ರೇಷ್ಠರಾದವರು. ವಿವೇಚನಾಶಕ್ತಿಯಿಲ್ಲದೆ ಆಧ್ಯಾತ್ಮಿಕ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ತಮಗಿರುವ ಅಧಿಕಾರದಿಂದ ಅಹಂಕಾರ ಪಡುವವರಿಗಾಗಲಿ, ಆತ್ಮಜ್ಞಾನವೆಂಬುದರ ಪರಿಚಯವೇ ಇಲ್ಲದವರಿಗಾಗಲಿ ಅದು ಸಾಧ್ಯವಿಲ್ಲ. ಆದ್ದರಿಂದ ನೀನು ದೊಡ್ಡವರು, ವಿದ್ಯಾವಂತರು ಎಂದು ವರ್ಣಿಸಿದ ಜನರು ಬಟ್ಟೆ ನುಸಿಗೆ ಸಮೀಪ ಎಂದು ತಿಳಿದುಕೊ. ಇಂತಹ ಕ್ಲೇಶಗಳಿಗೆ ಎಡೆಕೊಡದೆ ನಿನ್ನ ನಂಬಿಕೆಯನ್ನು ಬಲಪಡಿಸಿಕೊಳ್ಳುವುದರಲ್ಲಿ ನಿರತನಾಗು.

**ಭಕ್ತ:** ಇಂತಹ ವ್ಯಕ್ತಿಗಳಿಂದಾಗಿ ಪ್ರಪಂಚದಲ್ಲಿ ಅನೇಕ ಆಸ್ತಿಕ ಜನರು ನಾಸ್ತಿಕರಾಗುತ್ತಿದ್ದಾರೆ, ಅಲ್ಲವೆ ಸ್ವಾಮಿ? ತಮ್ಮ ವಿದ್ಯೆಗೆ ಮರ್ಯಾದೆಯಿಲ್ಲದೆ, ಸತ್ಯವನ್ನು ತಿಳಿಯಲು ಸ್ವಲ್ಪವೂ ಶ್ರಮಪಡದೆ ಮಹಾಪುರುಷರನ್ನು ನಿಂದಿಸುವ ಇಂತಹ ವ್ಯಕ್ತಿಗಳನ್ನು ಅಡಗಿಸಲು ಯಾವ ಆಯುಧವೂ ಇಲ್ಲವೆ?

**ಸ್ವಾಮಿ:** ಯಾಕೆ? ಇದೆಯಲ್ಲ. "ಹರಿದ ಥಡಿಯ ಮೇಲೆಯೇ ಹರುಕು ಚಿಂದಿಯ ಹೊರೆ" ಎನ್ನುವ ಮಾತಿದೆ. ಅಂತಹ ವ್ಯಕ್ತಿಗಳು ಆಡುವ ಮಾತುಗಳನ್ನು ಅಂತಹ ವ್ಯಕ್ತಿಗಳೇ ಆಲಿಸುವುದು; ನಿಜವಾದ ಆಸ್ತಿಕರಾದ ಯಾರೂ ಅವರೊಂದಿಗೆ ಸೇರಿಕೊಳ್ಳುವುದಿಲ್ಲ. ಹಾಗೆ ಒಂದು ವೇಳೆ ಸೇರಿದರೂ ಅವರಾಡುವ ಕತೆಗಳೆಲ್ಲ ಕಲ್ಪಿತವಾದವು ಎಂದು ತಿಳಿದೊಡನೆ ದೂರ ಸರಿದು ಹೋಗುತ್ತಾರೆ. ಆದ್ದರಿಂದ

ಇಂತಹ ವ್ಯಕ್ತಿಗಳನ್ನು ಅಡಗಿಸುವ ಆಯುಧ ಅವರ ಕೈಯಲ್ಲೇ ಇದೆ. ನಿನಗೆ ಭಸ್ಮಾಸುರನ ಕತೆ ಗೊತ್ತಿಲ್ಲವೆ? ಎದುರಾದ ಪ್ರತಿಯೊಬ್ಬರ ತಲೆಯ ಮೇಲೆ ಕೈಯಿಟ್ಟು ಭಸ್ಮಾಸುರ ಅವರನ್ನು ಹಿಡಿ ಬೂದಿಯಾಗಿ ಸುಟ್ಟುಬಿಡುತ್ತಿದ್ದ. ಕೊನೆಗೊಮ್ಮೆ ತನ್ನ ತಲೆಯ ಮೇಲೆಯೇ ಕೈಯಿಟ್ಟುಕೊಂಡು ಉರಿದು ಭಸ್ಮವಾಗಿ ಹೋದ! ಹಾಗೆಯೇ ಇತರರನ್ನು ನಿಂದಿಸುವವರು ಅಂತಿಮವಾಗಿ ತಾವೇ ತಮ್ಮ ನಿಂದೆಗೆ ಬಲಿಯಾಗುತ್ತಾರೆ.

ಭಗವಂತನಲ್ಲಿ ದೋಷವನ್ನು ಹುಡುಕುವವರು ನಾಲ್ಕು ಬಗೆಯಾಗಿರುತ್ತಾರೆ:

೧. ದೇವರಿಗೆ ಸಂಬಂಧಪಟ್ಟ ಯಾವುದೇ ವಿಚಾರದಲ್ಲಿ ಆಸಕ್ತಿ ಇಲ್ಲದವರು.

೨. ವೈಯಕ್ತಿಕ ದ್ವೇಷದಿಂದಾಗಿ ಇನ್ನೊಬ್ಬರ ಹಿರಿಮೆಯನ್ನು ಸಹಿಸಿಕೊಳ್ಳಲಾಗದವರು.

೩. ಯಾವುದರದೇ ವೈಯಕ್ತಿಕ ಅನುಭವವಾಗಲಿ,ಸಂಪರ್ಕವಾಗಲಿ,ಪರಿಜ್ಞಾನವಾಗಲಿ ಇಲ್ಲದ, ಆದ್ದರಿಂದಲೇ ಯಾರಿಂದಲೋ ತಾವು ಕೇಳಿದ ಸಂಗತಿಗಳ ಮೇಲೆ ಕತೆ ಕಟ್ಟುವವರು. ಇವರು ಗಾಳಿ ಮಾತಿಗೆ ಗುಲಾಮರಾಗಿಬಿಟ್ಟಿರುತ್ತಾರೆ.

೪. ಯಾವುದೋ ಪ್ರಾಪಂಚಿಕವಾದ ಆಸೆಯನ್ನಿಟ್ಟುಕೊಂಡು ಇಲ್ಲಿಗೆ ಬಂದು, ತಮ್ಮದೇ ವಿಧಿಯಿಂದಾಗಿ ಅದು ಪೂರೈಸದಾದಾಗ ದೇವರನ್ನು ನಿಂದಿಸಿ ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳುವವರು.

ಈ ನಾಲ್ಕು ಬಗೆ ಜನರು ಮಾತ್ರ ನೀನು ಹೇಳಿದ ಹಾಗೆ ಹರಟುತ್ತಾರೆ; ಇತರರು ಗೊಂಬೆಗಳ ಹಾಗೆ ಕಿರಿಚುವುದಿಲ್ಲ, ಕುಣಿದು ಕುಪ್ಪಳಿಸುವುದಿಲ್ಲ. ಅವರು ಇಷ್ಟಪಡದಿದ್ದರೂ ಅಥವಾ ಶ್ರದ್ಧೆಯಿರದಿದ್ದರೂ ಸ್ವಂತ ಅನುಭವವಾಗಿರದಿದ್ದರೂ ಅಂತಹ ಕತೆಗಳನ್ನು ಕೇಳಿದಾಗ ತಮ್ಮಲ್ಲೇ ಅವುಗಳನ್ನು ವಿಶ್ಲೇಷಣೆ ಮಾಡಿ ತಮಗೆ ತೃಪ್ತಿಕರವಾಗುವ ನಿರ್ಣಯಕ್ಕೆ ಬರುತ್ತಾರೆ. ಅವರು ಇತರರನ್ನು ನಿಂದಿಸುವುದಿಲ್ಲ.

ತನ್ನದೇ ಮನಸ್ಸನ್ನು ನಂಬದೆ ಇತರರ ಮಾತುಗಳಿಗೆ ಅಲ್ಲಿ ಎಡೆ ಕೊಡುವುದು ಸರಿಯಾದ ದಾರಿಯಲ್ಲ. ಅಲ್ಲದೆ ಸತ್ಯವನ್ನು ತಿಳಿಯದವರೊಂದಿಗೆ ಚರ್ಚೆ ಮಾಡುವುದರಿಂದ ಪ್ರಯೋಜನವಿಲ್ಲ. ವಾಸ್ತವವಾಗಿ ಸತ್ಯವು ಯಾವುದೇ ಚರ್ಚೆಗೆ, ವಾದ ವಿವಾದಗಳಿಗೆ ಆಸ್ಪದ ಕೊಡುವುದಿಲ್ಲ. ತಿಳಿಯದವರೊಂದಿಗೆ ಆದರೆ ಮಧ್ಯವರ್ತಿ ಹಂತದಲ್ಲಿರುವವರೊಂದಿಗೆ ವಾದ ಮಾಡುವುದು ಸೊಂಡಿಲನ್ನು

ಮುಟ್ಟಿ ಆನೆಯ ಇಡೀ ದೇಹವೇ ಅದೆಂದು ಭ್ರಮಿಸಿದ ಹಾಗಾಗುತ್ತದೆ, ಕುರುಡರು ಮತ್ತು ಆನೆಯ ಕಥೆಯಲ್ಲಿರುವ ಹಾಗೆ.

ಒಳ್ಳೆಯದು, ಇದನ್ನು ಗಮನದಲ್ಲಿಟ್ಟುಕೊ. ಈ ಬಗೆಯ ಸಂಭಾಷಣೆಗಳಲ್ಲಿ ಕಾಲ ವನ್ನು ಕಳೆಯುವುದು ಒಳ್ಳೆಯದಲ್ಲ. ನಿಂದನೆ ಮತ್ತು ದೋಷಾನ್ವೇಷಣೆಗಳು ಸಹಜವೂ ಸಾಮಾನ್ಯವೂ ಆದವು. ಇದನ್ನು ತಿಳಿದುಕೊಂಡು, ನಿಜವಾದ ಭಕ್ತ ರಾಗಲು ಆಶಿಸುವವರು ತಮ್ಮ ಆನಂದದ ಸೌಧವನ್ನು ನಿರ್ಮಿಸಲು ತಕ್ಕ ಆಧಾರ ಗಳನ್ನು ಹುಡುಕಬೇಕು. ದೊರಕುವ ಸಮಯವನ್ನೆಲ್ಲಾ ಪವಿತ್ರ ಉದ್ದೇಶಗಳಿಗಾಗಿ ಉಪಯೊಗಿಸಬೇಕು. ಅದನ್ನು ಪೋಲು ಮಾಡಬಾರದು. ಇತರರಲ್ಲಿರುವ ಒಳ್ಳೆಯ ತನಕ್ಕೂ ಕೆಟ್ಟತನಕ್ಕೂ ನಿಮಗೂ ಯಾವ ಸಂಬಂಧವೂ ಇಲ್ಲ. ಸಮಯವನ್ನು ಹಾಳು ಮಾಡದೆ ನಿನ್ನಲ್ಲಿರುವ ಕೆಡುಕನ್ನು ಕಿತ್ತುಹಾಕಿ ಒಳಿತನ್ನು ಬೆಳೆಸಲು ಉಪಯೋಗಿಸ ಬೇಕು.

ಸಾಧನೆಯನ್ನು ಕುರಿತೋ ನಿನಗೆ ಅಗತ್ಯವಾದ ಯಾವುದಾದರೂ ಸಂದೇಶವನ್ನು ಕುರಿತೋ ಕೇಳು. ಉಪಯುಕ್ತವಾದದ್ದನ್ನು ಅರಸು. ಇನ್ನು ಮುಂದೆ ಇತರರು ಮಾಡುವ ದೋಷಾನ್ವೇಷಣೆಯ ಕತೆಗಳನ್ನು ನನ್ನ ಹತ್ತಿರಕ್ಕೆ ತರಬೇಡ. ನೀನೂ ಅಂಥವಕ್ಕೆ ಗಮನ ಕೊಡಬೇಡ.

**ಭಕ್ತ:** ಇದೆಲ್ಲ ನಡೆದದ್ದು ನಾವೂ ಅದೇ ಮಾನವ ಸಹಜ ಸ್ವಭಾವದವರಾದ್ದರಿಂದ. ಆದರೆ ಈಗ ತಮ್ಮ ಉತ್ತರವನ್ನು ಕೇಳಿದ ಮೇಲೆ ಅರ್ಥವಾಯಿತು; ನನಗೆ ಧೈರ್ಯ, ಸಂತೋಷಗಳು ಬಂದುವು; ಸಂದೇಹ ಮತ್ತು ದುಃಖಗಳು ನಿವಾರಣೆಯಾದುವು. ಅಂತಹ ಜನರೊಂದಿಗೆ ಮಾತನಾಡುವುದರಿಂದ ಜನರಲ್ಲಿರುವ ಸ್ವಲ್ಪ ನಂಬಿಕೆ, ಭಕ್ತಿ, ಪ್ರಾಮಾಣಿಕತೆಗಳೂ ಕ್ಷಯಿಸಿಹೋಗುತ್ತವೆ. ಈ ಪ್ರಶ್ನೆಗಳಿಂದ ನಾನು ತಮಗೆ ಕಷ್ಟ ಕೊಟ್ಟಿದ್ದಕ್ಕೆ ಅದೇ ಕಾರಣ. ಇಲ್ಲವಾದರೆ ಆ ವಿಷಯಗಳಿಗೆ ನಾನು ತಲೆ ಕೆಡಿಸಿಕೊಳ್ಳುವವನಲ್ಲ. ದಯಮಾಡಿ ಕ್ಷಮಿಸಬೇಕು ಸ್ವಾಮಿ, ಇನ್ನು ಮುಂದೆ ಈ ರೀತಿಯಾಗಿ ನಾನು ಮಾತನಾಡುವುದಿಲ್ಲ.

**ಸ್ವಾಮಿ :** ತುಂಬಾ ಒಳ್ಳೆಯದು! ದೊರಕುವ ಅಲ್ಪ ಸಮಯದಲ್ಲಿ ಯಾವುದಾದರೂ ಒಳ್ಳೆಯ ಕೆಲಸವನ್ನು ಕುರಿತು ಯೋಚಿಸದೆ, ಇತರರ ಅಜ್ಞಾನ ಜನ್ಯ ಗೊಡ್ಡು ಹರಟೆಗಳನ್ನೇ ನೆನೆಯುತ್ತಿದ್ದರೆ, ನೀನೂ ಅವರ ನಿಂದಾಕಾರ್ಯದಲ್ಲಿ ತೊಡಗಿ ದಂತೆಯೇ ಆಗುತ್ತದೆ. ಅದು ಭಕ್ತರಿಗೆ ತುಂಬಾ ಹಾನಿಕರವಾದದ್ದು. ಇತರರು ಏನು ಬೇಕಾದರೂ ಹೇಳಲಿ, ನೀನು ನಿನ್ನ ಶ್ರದ್ಧೆಯನ್ನು ಕಳೆದುಕೊಳ್ಳಬಾರದು.

ಒಮ್ಮೆ ನೀನು ಅದರಲ್ಲಿ ಸ್ಥಿರವಾಗಿ ನಿಂತೆಯೆಂದರೆ ಎಂದೂ ನಿನಗೆ ಯಾವ ಕೊರತೆಯೂ ಇರುವುದಿಲ್ಲ. ಒಂದು ಮಾತನ್ನನುಸರಿಸಿ ಇನ್ನೊಂದು ಬರುತ್ತಿದ್ದರೆ ಅದರಿಂದ ಕೋಪತಾಪಗಳು ಹುಟ್ಟುತ್ತವೆ. ಭಕ್ತಿ ಮಾರ್ಗವು ಈ ಗುಣಗಳನ್ನು ಅಡಗಿಸುವುದಕ್ಕಾಗಿ ರೂಪಿತವಾಗಿದೆಯೇ ಹೊರತು ಬೆಳೆಸುವುದಕ್ಕಾಗಿ ಅಲ್ಲ.

ಜನರು ಇಂತಹ ನಿಂದಕರ ಮಾತುಗಳನ್ನು ಕೇಳುವುದರಿಂದ ಅವರ ಭಕ್ತಿ ಮತ್ತು ಶ್ರದ್ಧೆ ಕಣ್ಮರೆಯಾಗುತ್ತವೆ ಎಂದು ನೀನು ಹೇಳುತ್ತೀಯೆ... ಆದರೆ ಎಷ್ಟು ಕಾಲದವರೆಗೆ? ಸತ್ಯವು ಬೆಳಕಿಗೆ ಬಂದೊಡನೆ ಮತ್ತೆ ಜನರು ಅವರನ್ನು ನಂಬುತ್ತಾರೆಯೆ? ಮತ್ತೆ ಅವರ ಮಾತಿಗೆ ಬೆಲೆ ಬರುತ್ತದೆಯೆ?

ಆ ದೋಷಾನ್ವೇಷಕರ ಮಾತು ಕಂಚಿನ ಸದ್ದು ಇದ್ದ ಹಾಗೆ. ಅಗ್ಗದ ಲೋಹಗಳು ಹೆಚ್ಚು ಸದ್ದು ಮಾಡುತ್ತವೆ; ಸದ್ದನ್ನೇ ಮಾಡದ ಚಿನ್ನ ತುಂಬ ಬೆಲೆ ಬಾಳುವಂಥದ್ದು. ನಿಜವಾದ ಭಕ್ತರು ನಿಶ್ಶಬ್ದವಾಗಿರುತ್ತಾರೆ. ಅವರು ಮೌನದ ಮಾರ್ಗವನ್ನು ಅನುಸರಿಸುತ್ತಾರೆ. ಅವರ ನಾಲಗೆಗಳು ಭಗವಂತನ ಮಹಿಮೆಯನ್ನು ಜಪಿಸುವುದರಲ್ಲೇ ಪೂರ್ತಿ ಮುಳುಗಿ ಹೋಗುರತ್ತವೆ. ಬೇರೆ ಮಾತನಾಡಲು ಅವರಿಗೆ ಸಮಯವೇ ಇಲ್ಲ.  ಅದು ಅತ್ಯುತ್ತಮ. ಆದ್ದರಿಂದ ಕಂಚಿನಂತೆ ಸದ್ದು ಮಾಡುತ್ತಾ ಜನರು ನಿನ್ನ ಕಿವಿಗೆ ಹೋಗಲು ಬಿಡಬೇಡ; ಅದಕ್ಕೆ ಬದಲು, ಕಿವಿಗಳಿಗೆ ಭಗವಂತನ ನಾಮಾಮೃತವನ್ನು ತುಂಬು, ಅದೇ ಪ್ರಣವಾನಂದ.

ಮುಂದಿನ ತಿಂಗಳು ಸಾಧನೆ, ಅನುಷ್ಠಾನ ಮೊದಲಾದ ಉಪಯುಕ್ತ ವಿಷಯಗಳನ್ನು ಕುರಿತು ಏನಾದರೂ ಸಮಸ್ಯೆಗಳಿದ್ದರೆ ಅವನ್ನು ಇಲ್ಲಿಗೆ ತಂದು ಸರಿಪಡಿಸಿಕೊಂಡು ಹೋಗು. ಇಂತಹ ಗೊಡ್ಡು ಸಂದೇಹಗಳ ಹೊರೆಯನ್ನು ತರಬೇಡ!

**ಭಕ್ತ:** ನಾನು ನಿಜವಾಗಿ ಇಂದು ಧನ್ಯನಾದೆ ಸ್ವಾಮಿ. ನನಗೆ ತಿಳಿವಿನ ಬೆಳಕನ್ನು ನೀಡಿದಿರಿ. ಇದನ್ನು ನೋಡಿದರೆ ಎಲ್ಲವೂ ನಮ್ಮ ಒಳ್ಳೆಯದಕ್ಕೇ ಎಂಬ ಹೇಳಿಕೆ ನಿಜವೆನಿಸುತ್ತದೆ. ಇಲ್ಲಿಂದ ಮುಂದಕ್ಕೆ ಯಾರು ಏನೇ ಹೇಳಿದರೂ ನಾನು ತಾಳ್ಮೆಯಿಂದಿರುತ್ತೇನೆ. ಅದನ್ನು ಒಪ್ಪಿಕೊಳ್ಳುವುದಿಲ್ಲ.  ಅದೂ ಒಳ್ಳೆಯದಕ್ಕೆ. ನಮಸ್ಕಾರ ಸ್ವಾಮಿ. ಹೊರಡಲು ಅನುಮತಿ ನೀಡಬೇಕು.

# ಅಧ್ಯಾಯ ೩

**ಸ್ವಾಮಿ :** ಓಹ್! ಯಾವಾಗ ಬಂದೆ? ಹೊರಗೆ ಎಲ್ಲೂ ಕಾಣಿಸಲಿಲ್ಲವಲ್ಲ. ಚೆನ್ನಾಗಿರುವೆಯಾ?

**ಭಕ್ತ:** ನಾನು ಬಂದು ಎರಡು ದಿನಗಳಾದವು, ಸ್ವಾಮಿ. ಹೊರಗೆ ಎಲ್ಲಾ ಕಡೆಯು ಜನರು ತುಂಬಿ ಹೋಗಿದ್ದಾರೆ. ಒಂದೇ ಸಮನೆ ಸದ್ದುಗಳ ಗೊಂದಲ. ಈ ಗೊಂದಲ ಗಲಿಬಿಲಿಗಳನ್ನು ತಪ್ಪಿಸಿಕೊಳ್ಳಲೆಂದು ನನ್ನ ಊರಿನಿಂದ ಬಂದರೆ ಇಲ್ಲೂ ಅಸಾಧ್ಯ ಜನಜಂಗುಳಿ. ಆದ್ದರಿಂದ ಒಳಕ್ಕೆ ಬಂದೆ. ಇಲ್ಲಿ ಶಾಂತವಾಗಿದೆ, ಆನಂದವಾಗಿದೆ, ನಿಶ್ಶಬ್ದವಾಗಿದೆ. ಅದಕ್ಕೇ ನಾನು ಹಾಲ್‌ನಲ್ಲಿ ಕುಳಿತುಬಿಟ್ಟಿದ್ದೆ. ಹೊರಗೆ ಎಷ್ಟು ಚಡಪಡಿಕೆಯಿದೆಯೋ ಒಳಗೆ ಅಷ್ಟೇ ಶಾಂತವಾಗಿದೆ.

**ಸ್ವಾಮಿ :** ಇದರಲ್ಲಿ ಏನು ವಿಶೇಷ? ಅದು ತುಂಬಾ ಸಹಜ. ಬೆಲ್ಲ ಎಲ್ಲಿದೆಯೋ ಅಲ್ಲಿ ಇರುವೆಗಳು ಮುತ್ತಿಕೊಳ್ಳುತ್ತವೆ... ಇನ್ನು ಒಳಗೆ–ಹೊರಗೆ ಇದೇ ವ್ಯತ್ಯಾಸ. ಅದೇ ಲಕ್ಷಣ. ಅದಿರುವುದೇ ಹಾಗೆ.

**ಭಕ್ತ:** ಸ್ವಾಮಿ ತಾವು ಹೇಳುವುದು ನನಗೆ ಅರ್ಥವಾಗಲಿಲ್ಲ. ದಯವಿಟ್ಟು ವಿವರಿಸಿ ಹೇಳಿ, ಕೇಳಿ ಸಂತೋಷಪಡುತ್ತೇನೆ.

**ಸ್ವಾಮಿ :** ಹೊರಗೆ ಎನ್ನುವುದೊಂದು, ಒಳಗೆ ಎನ್ನುವುದೊಂದು ಇದೆ ಎಂದು ನೀನೇ ಹೇಳಿದೆಯಲ್ಲವೆ? ಒಳ್ಳೆಯದು. ಅವೇ ನಾವು ಬಾಹ್ಯ ಪ್ರಪಂಚ ಮತ್ತು ಅಂತರ್ ಪ್ರಪಂಚ ಎಂದು ಕರೆಯುವಂಥವು, ಹೊರಗಿನ ಜಗತ್ತು ಮತ್ತು ಒಳಗಿನ ಜಗತ್ತು. ಒಳಗಿನದು ಯಾವುದು? ನಿನಗೇನನ್ನಿಸುತ್ತದೆ ಹೇಳು.

**ಭಕ್ತ:** ನನ್ನ ಬಾಯಿಯಿಂದಲೇ ಉತ್ತರ ಬರುವಂತೆ ಮಾಡುವಿರಾ? ತಾವೇ ಹೇಳಿದರೆ ಅದು ತುಂಬಾ ಚೆನ್ನಾಗಿರುತ್ತದಲ್ಲವೆ?

**ಸ್ವಾಮಿ :** ಪ್ರಶ್ನಕನೇ ಉತ್ತರ ಕೊಡುವಂತೆ ಮಾಡುವುದೀಗ ಸನಾತನ ಮಾರ್ಗದ ಬೋಧನೆ. ಯಾರು ಪ್ರಶ್ನೆ ಮಾಡುತ್ತಾರೋ ಅವರೇ ಉತ್ತರ ನೀಡಿದರೆ ಅವರಿಗೆ ವಿಷಯವು ತುಂಬಾ ಸ್ಪಷ್ಟವಾಗಿ ಅರ್ಥವಾಗುತ್ತದೆ. ಬೋಧನ ಶೈಲಿ ಬೇರೆಯಾಗುತ್ತದೆ. ಹಿಂದಿನ ಕಾಲದಲ್ಲಿ ಋಷಿಗಳು ತಮ್ಮ ಶಿಷ್ಯರು ವೇದಾಂತವನ್ನು ಅರ್ಥ ಮಾಡಿ

ಕೊಳ್ಳುವಂತೆ ಮಾಡಲು ಇದೇ ಮಾರ್ಗವನ್ನು ಅನುಸರಿಸುತ್ತಿದ್ದರು. ಆದ್ದರಿಂದ ಮಾತನಾಡು! ನೋಡೋಣ.

**ಭಕ್ತ:** ನಾನು ಕಣ್ಣಿನಿಂದ ನೋಡಿರುವ ವಸ್ತುಗಳನ್ನು ಕುರಿತು ಹೇಳಲೆ?

**ಸ್ವಾಮಿ:** ಕಣ್ಣಿನಿಂದ ಮಾತ್ರವಲ್ಲ. ನಿನ್ನ ಅನುಭವಕ್ಕೆ ಬಂದಿರುವುದೆಲ್ಲವನ್ನೂ, ಕಣ್ಣು, ಕಿವಿ, ಮೊದಲಾದ ಬಾಹ್ಯೇಂದ್ರಿಯಗಳ ಮೂಲಕ ತಿಳಿವಿಗೆ ಬಂದಿರುವುದೆಲ್ಲವನ್ನೂ ಹೇಳು.

**ಭಕ್ತ:** ಭೂಮಿ, ಆಕಾಶ, ನೀರು, ಸೂರ್ಯ, ಚಂದ್ರ, ವಾಯು, ಅಗ್ನಿ, ನಕ್ಷತ್ರಗಳು, ತಾರಿಕೆ, ಪರ್ವತಗಳು, ಬೆಟ್ಟಗಳು, ಮರಗಳು, ಪ್ರಾಣಿಗಳು, ಪಕ್ಷಿಗಳು, ತಂಪು, ಉಷ್ಣ, ಸಂತೋಷ, ಮೀನುಗಳು, ಕೀಟಗಳು, ಕಾಯಿಲೆಗಳು ... ಹೀಗೆ ಅನೇಕ ವಸ್ತುಗಳನ್ನು ನಾನು ನೋಡಿದ್ದೇನೆ.

**ಸ್ವಾಮಿ:** ಸಾಕು ಸಾಕು.... ಬೇಕಾದಷ್ಟಾಯಿತು. ಇದು "ಪ್ರಪಂಚ." ಇವುಗಳನ್ನು ಇಂದಷ್ಟೇ ನೋಡಿದೆಯಾ? ಅದು ನಿನ್ನೆಯೂ ಇದ್ದಿತೆ? ನಾಳೆ ಇರುತ್ತದೆಯೆ?

**ಭಕ್ತ:** ಹೀಗೇಕೆ ಕೇಳುವಿರಿ ಸ್ವಾಮಿ? ಯುಗ ಯುಗಗಳಿಂದ ಇದು ಹೀಗೆಯೇ ಇದೆ ಅಲ್ಲವೇ? ಎಲ್ಲಿಯವರೆಗೆ ಅದಿರುತ್ತದೆ ಎಂದು ಯಾರು ಬಲ್ಲರು? ಎಂದಿನಿಂದ ಹೀಗೆ ಅಸ್ತಿತ್ವದಲ್ಲಿದೆ ಎಂದು ಯಾರು ಬಲ್ಲರು?

**ಸ್ವಾಮಿ:** 'ಎಷ್ಟು ಕಾಲದಿಂದ ಇದು ಅಸ್ತಿತ್ವದಲ್ಲಿದೆ!' ಎಂದು ನೀನು ಕೇಳಿದೆಯಲ್ಲವೆ? ಅದನ್ನೇ 'ಅನಾದಿ' ಆದಿಯಿಲ್ಲದ್ದು ಎಂದು ಹೇಳುತ್ತೇನೆ. ಈ ಹೊರ ಪ್ರಪಂಚ ಆದಿಯಿಲ್ಲದ್ದು... 'ಹೊರ' ಎಂಬುದಿದ್ದಾಗ 'ಒಳ' ಎಂಬುದೊಂದು ಇರಲೇ ಬೇಕಲ್ಲವೆ? ನೀನು ಯಾವಾಗಲಾದರೂ ಸಿನಿಮಾ ನೋಡಿದ್ದೀಯಾ?

**ಭಕ್ತ:** ಯಾವಾಗಲಾದರೂ ನೋಡುವುದೇ! ಏಕೆ ಸ್ವಾಮಿ, ಸಿನಿಮಾ ಕೂಡ ಪ್ರಪಂಚದೊಂದು ಭಾಗವೇ ಅಲ್ಲವೆ? ನಾನು ಅನೇಕ ಸಿನಿಮಾಗಳನ್ನು ನೋಡಿದ್ದೇನೆ.

**ಸ್ವಾಮಿ:** ನೀನು ಏನು ನೊಡಿದೆ ಹೇಳು.

**ಭಕ್ತ:** ಅನೇಕ ಅದ್ಭುತವಾದ ಚಿತ್ರಗಳನ್ನು ನೋಡಿದ್ದೇನೆ. ಅಸಂಖ್ಯಾತ ದನಿಗಳನ್ನು ಸದ್ದುಗಳನ್ನು ಕೇಳಿದ್ದೇನೆ. ಸುಖ–ದುಃಖಗಳ ಅಸಂಖ್ಯಾತ ಅನುಭವಗಳನ್ನು ಕಂಡಿದ್ದೇನೆ.

**ಸ್ವಾಮಿ :** 'ನಾನು ನೋಡಿದ್ದೇನೆ' ಎಂದು ಹೇಳುತ್ತಿದ್ದೀಯೆ. ಪರದೆ ಒಂದು; 'ಚಿತ್ರಗಳು' ಇನ್ನೊಂದು. ನೀನು ಎರಡನ್ನೂ ನೋಡಿದೆಯಾ.

**ಭಕ್ತ:** ಹೌದು.

**ಸ್ವಾಮಿ :** ತೆರೆಯನ್ನೂ ಚಿತ್ರಗಳನ್ನೂ ಒಂದೇ ಸಮಯದಲ್ಲಿ ನೋಡಿದೆಯಾ?

**ಭಕ್ತ:** ಅದು ಹೇಗೆ ಸಾಧ್ಯ ಸ್ವಾಮಿ? ಚಿತ್ರಗಳು ಕಾಣಿಸುತ್ತಿರುವಾಗ ತೆರೆಯು ಕಾಣಿಸುವುದಿಲ್ಲ. ತೆರೆಯು ಕಾಣಿಸುವಾಗ ಚಿತ್ರಗಳು ಕಾಣಿಸುವುದಿಲ್ಲ.

**ಸ್ವಾಮಿ :** ಹೌದಲ್ಲವೆ? ತೆರೆ, ಚಿತ್ರಗಳು ಇವೆಲ್ಲಾ ಸದಾ ಇರುವಂಥವೇನು?

**ಭಕ್ತ:** ಇಲ್ಲ, ತೆರೆ ಶಾಶ್ವತವಾದದ್ದು; ಚಿತ್ರಗಳು ಬರುತ್ತವೆ, ಹೊಗುತ್ತವೆ.

**ಸ್ವಾಮಿ :** ನೀನು ಹೇಳುವಂತೆ, ತೆರೆಯು ಖಾಯಂ ಆದದ್ದು, ಚಿತ್ರಗಳು ಬಂದು ಹೋಗುವಂಥವು. ಈ 'ಶಾಶ್ವತ' 'ಅಶಾಶ್ವತ'ಗಳನ್ನು ಸೂಚಿಸಲು ನಾವು ಸ್ಥಿರಂ–ಅಸ್ಥಿರಂ, ನಿತ್ಯ–ಅನಿತ್ಯ, ಕ್ಷರ–ಅಕ್ಷರ ಎಂಬ ಪದಗಳನ್ನು ಉಪಯೋಗಿಸುತ್ತೇವೆ. ಇನ್ನೊಂದು ವಿಷಯ ನೋಡೋಣ. ಚಿತ್ರವು ತೆರೆಯ ಮೇಲೆ ಬೀಳುತ್ತದೆಯೋ ತೆರೆಯು ಚಿತ್ರದ ಮೇಲೆ ಬೀಳುತ್ತದೆಯೋ? ಯಾವುದು ಯಾವುದಕ್ಕೆ ಆಧಾರ?

**ಭಕ್ತ:** ಚಿತ್ರಗಳು ತೆರೆಯ ಮೇಲೆ ಬೀಳುತ್ತವೆ. ಆದ್ದರಿಂದ ಚಿತ್ರಕ್ಕೆ ತೆರೆಯು ಆಧಾರ.

**ಸ್ವಾಮಿ :** ಹಾಗೆಯೇ ಚಿತ್ರದಂತಿರುವ ಬಾಹ್ಯ ಪ್ರಪಂಚವು ಅನಿತ್ಯವಾದದ್ದು; ಅದು ಬದಲಾಗುತ್ತಿರುತ್ತದೆ. ಆಂತರಿಕ ಪ್ರಪಂಚ ನಿತ್ಯವಾದದ್ದು, ಅದು ಬದಲಾಗುವುದಿಲ್ಲ. ಬಾಹ್ಯ ಜಗತ್ತಿಗೆ ಅಂತರ್ ಜಗತ್ತು ಆಧಾರ, ಅದರ ತಳಹದಿ.

**ಭಕ್ತ:** ಸ್ವಾಮಿ, ತಾವು ಕ್ಷರ–ಅಕ್ಷರ, ನಿತ್ಯ–ಅನಿತ್ಯ ಎಂಬ ಪದಗಳನ್ನು ಉಪಯೋಗಿಸಿದಿರಿ.

**ಸ್ವಾಮಿ :** ಹೌದು ಮಗು! ನೀನೀಗ ಚಿತ್ರಗಳ ವಿಷಯ ಹೇಳುತ್ತಿದ್ದೆ. ಅವಕ್ಕೆ ಹೆಸರುಗಳು ಮತ್ತು ರೂಪಗಳು ಇವೆಯೆ?

**ಭಕ್ತ:** ಇಲ್ಲವೆ ಮತ್ತೆ ! ಅವಕ್ಕೆ ನಾಮ–ರೂಪಗಳಿರುವುದರಿಂದಲೇ ನಮಗೆ ಕತೆ ಅರ್ಥವಾಗುವುದು. ಆಗಲೇ ನಾವು ರಾಮಾಯಣ ಮಹಾಭಾರತಗಳನ್ನು ನೆನಪು

ಮಾಡಿಕೊಳ್ಳುತ್ತೇವೆ. ರೂಪರಹಿತ ನಾಮವಾಗಲಿ, ನಾಮರಹಿತ ರೂಪವಾಗಲಿ ಇಲ್ಲ.

**ಸ್ವಾಮಿ :** ಭೇಷ್! ಚೆನ್ನಾಗಿ ಹೇಳಿದೆ. ರೂಪ ಎಲ್ಲಿದೆಯೋ ಅಲ್ಲಿ ನಾಮವಿರಲೇಬೇಕು; ನಾಮವಿರುವಲ್ಲಿ ರೂಪವಿರಲೇಬೇಕು. ಇವೆರಡೂ ಪರಸ್ಪರ ಸಂಬಂಧ ಪಟ್ಟಿವೆ. ನಾವು ಅವಿನಾಭಾವ ಸಂಬಂಧ ಎಂದು ಹೇಳಿದಾಗ ಈ ಸಂಬಂಧವನ್ನೇ ನಾವು ಹೇಳುವುದು. ಈಗ ನಿನಗೆ ಪ್ರಪಂಚದ ಅರ್ಥ ತಿಳಿಯಿತೆ?

**ಭಕ್ತ:** ಅದು ನಾಮ ರೂಪಗಳೊಂದಿಗೆ ಸಮೀಕೃತವಾಗಿದೆ ಎಂದು ಗ್ರಹಿಸಿದೆ ಸ್ವಾಮಿ... ಅದು ಹೇಗೆ ಪ್ರಾರಂಭವಾಯಿತು ಎಂಬುದನ್ನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ.

**ಸ್ವಾಮಿ:** ಈಗ ನೀನು ಆ ತೊಡರಿಗೆ ಸಿಕ್ಕಿಕೊಳ್ಳಬಾರದು. ಅದನ್ನು ವರ್ಣಿಸಲು ಹೊರಟರೆ, ಮಾವಿನ ತೋಟಕ್ಕೆ ಹೋಗಿ ಕಿತ್ತುಕೊಂಡಿರುವ ಮಾವಿನ ಹಣ್ಣನ್ನು ತಿನ್ನದೆ, ತೋಟದಲ್ಲಿ ಎಷ್ಟು ಮರಗಳಿವೆ, ಪ್ರತಿ ಕೊಂಬೆಯಲ್ಲಿ ಎಷ್ಟು ಶಾಖೆಗಳಿವೆ, ಒಂದು ಹಣ್ಣಿಗೆ ಇಷ್ಟಾದರೆ ಇಡೀ ತೋಟದಲ್ಲಿರುವ ಮಾವಿನ ಹಣ್ಣಿನ ಬೆಲೆ ಏನು ಎಂದೆಲ್ಲ ಲೆಕ್ಕ ಹಾಕುತ್ತಾ ನಿಂತ ಹಾಗಾಗುತ್ತದೆ. ಹೀಗೆ ಮಾಹಿತಿ ಸಂಗ್ರಹ ಮಾಡುತ್ತಾ ವಿವೇಕದಿಂದ ಅಮೂಲ್ಯವಾದ ಸಮಯವನ್ನು ಪೋಲು ಮಾಡುವುದಕ್ಕೆ ಬದಲಾಗಿ ನಾವು ಕೈಯಲ್ಲಿರುವ ಹಣ್ಣನ್ನು ತಿನ್ನುವ ವ್ಯಕ್ತಿಯ ಹಾಗೆ ಯಾವುದು ಅತ್ಯಂತ ಮುಖ್ಯವೋ ಅದನ್ನು ಮೊದಲು ಕಂಡುಕೊ; ಅದನ್ನು ಮೊದಲು ಅರ್ಥ ಮಾಡಿ ಕೊಂಡ ಮೇಲೆ ತೃಪ್ತಿ ಮತ್ತು ಸಂತೋಷಗಳು ದೊರಕುತ್ತವೆ. ಅದು ಹಾಗಿರಲಿ. ಈ ಪ್ರಪಂಚಕ್ಕೆ ಇನ್ನೊಂದು ಹೆಸರೂ ಇದೆ. ನಿನಗೆ ಗೊತ್ತೆ?

**ಭಕ್ತ:** ಪ್ರಪಂಚವು ನಾಮ ಮತ್ತು ರೂಪಗಳೊಂದಿಗೆ ಸಮೀಕೃತವಾಗಿದೆ ಎಂದು ಹೇಳಿದೆ; ಪ್ರಪಂಚಕ್ಕೆ ಜಗತ್ತು ಎಂದು ಇನ್ನೊಂದು ಹೆಸರೂ ಇದೆಯೆಂದು ಕೇಳಿದ್ದೇನೆ.

**ಸ್ವಾಮಿ :** ಈ ನಾಮ ರೂಪ ಪ್ರಪಂಚವು, ಈ ಜಗತ್ತು ಇಂದ್ರಜಾಲದ ಹಾಗೆ ಅಥವಾ ಇಂದ್ರಜಾಲಿಗನ ಯಕ್ಷಿಣಿಯ ಹಾಗೆ. ಎಷ್ಟು ಹೊತ್ತು ನೋಡುತ್ತಿರುವೆಯೋ ಅಷ್ಟು ಹೊತ್ತು ಸತ್ಯವಾಗಿರುತ್ತದೆ. ಹಾಗೆಯೇ ಈ ಜಗತ್ತು, ಇಂದ್ರಿಯಗಳ ಮೂಲಕ ಅನುಭವವನ್ನು ಪಡೆದುಕೊಳ್ಳುತ್ತಿರುವವರೆಗೆ ಸತ್ಯ. ಅಂದರೆ ಜಾಗೃತ್ ಸ್ಥಿತಿಯಲ್ಲಿ ಯಾವುದು ಅನುಭವಕ್ಕೆ ಬರುವುದಿಲ್ಲವೋ ಅದನ್ನು ಅಸ್ತಿತ್ವರಹಿತ ಎಂದು ಭಾವಿಸ ಲಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅಸ್ತಿತ್ವಕ್ಕೆ ಸತ್ ಎಂದೂ ಅನಸ್ತಿತ್ವಕ್ಕೆ ಅಸತ್

ಎಂದೂ ಹೇಳುತ್ತೇವೆ. ಆದ್ದರಿಂದ ಈ ಜಗತ್ತಿನ ಬಗೆಗೆ ಏನು ಹೇಳುವೆ? ಅದು ಸತ್ ಎನ್ನುವೆಯೋ ಅಸತ್ ಎನ್ನುವೆಯೋ?

**ಭಕ್ತ:** ಅದು ಜಾಗೃತ್ ಸ್ಥಿತಿಯಲ್ಲಿ ಅನುಭವದಲ್ಲಿರುತ್ತದೆ. ಆದ್ದರಿಂದ ಅದು ಸತ್: ಆಳವಾದ ನಿದ್ದೆಯ ಸ್ಥಿತಿಯಲ್ಲಿ ಇರುವುದಿಲ್ಲ, ಆದ್ದರಿಂದ ಅಸತ್.

**ಸ್ವಾಮಿ:** ಒಹ್! ಸತ್–ಅಸತ್ ಎಂದೆಯಲ್ಲವೆ? ಈ ಎರಡು ಪದಗಳನ್ನು ಕೂಡಿಸಿದರೆ ಸದಸತ್ ಆಗುತ್ತದೆ. ಅದನ್ನೇ ನಾನು ಮಾಯೆ ಎಂದು ಕರೆಯುವುದು.

**ಭಕ್ತ:** ಮಾಯೆಯು ಯಕ್ಷಿಣಿಗೆ ಸಮನಾದದ್ದೆ?

**ಸ್ವಾಮಿ:** ಅಲ್ಲವೇನು? "ಇಂದ್ರಜಾಲಮಿದಂ ಸರ್ವಂ"; ಇದೆಲ್ಲವೂ ಯಕ್ಷಿಣಿಗಾರನ ಕೆಲಸ. ಋಷಿಗಳು ಯುಗ ಯುಗಾಂತರಗಳಿಂದ ಇದನ್ನು ಹೇಳಿಕೊಂಡು ಬಂದಿದ್ದಾರೆ.

**ಭಕ್ತ:** ಹಾಗಾದರೆ, ಇಂದ್ರಜಾಲವನ್ನು ಪ್ರದರ್ಶಿಸುವವನೊಬ್ಬನಿರಬೇಕಲ್ಲ! ಅಲ್ಲವೆ!

**ಸ್ವಾಮಿ:** ಖಂಡಿತವಾಗಿಯೂ ಇದ್ದಾನೆ. ಭಗವಂತನೇ ಆ ಮಂತ್ರವಾದಿ. ಅವನಿಗೆ ಅಸಂಖ್ಯವಾದ ಶುಭಕರವಾದ ಗುಣಗಳಿವೆ. ಮಹರ್ಷಿಗಳು ಪ್ರತಿಯೊಂದು ಗುಣ ಲಕ್ಷಣದ ಮೇಲೂ ಒಂದು ನಾಮವನ್ನು ಕಟ್ಟಿದ್ದಾರೆ, ನಾಮದ ಮೇಲೂ ಒಂದು ರೂಪವನ್ನು ಕಟ್ಟಿದ್ದಾರೆ. ಗುಣರಹಿತವಾದುದನ್ನು ಸಗುಣವೆಂಬಂತೆ ಮಾಡಿ, ರೂಪ ರಹಿತವನ್ನು ರೂಪ ಸಹಿತವೆಂದು ಮಾಡಿ ಅವುಗಳನ್ನು ಕುರಿತು ಧ್ಯಾನ ಮಾಡಿ, ಸಾಕ್ಷಾತ್ಕಾರವನ್ನು ಪಡೆದರು. ಸಹಸ್ರಾರು ನಾಲಗೆಗಳ ಮೂಲಕ ಇಂದು ಘೋಷಿತವಾಗುತ್ತಿರುವುದು ಅವರ ಅನುಭವವಲ್ಲವೆ? ಶಾಸ್ತ್ರಗಳಲ್ಲಿ, ವೇದೋಪನಿಷತ್ತುಗಳಲ್ಲಿ ತಾವು ಪ್ರತಿಯೊಬ್ಬರೂ ತಮ್ಮ ತಮ್ಮ ಪ್ರವೃತ್ತಿ, ಭಕ್ತಿ ಮತ್ತು ಪೂಜೆಗನುಗುಣವಾಗಿ ಧ್ಯಾನ ಸಮಾಧಿಯಲ್ಲಿ ಹೇಗೆ ಭಗವತ್ ಸಾಕ್ಷಾತ್ಕಾರವನ್ನು ಪಡೆದುಕೊಂಡರು ಎಂಬುದನ್ನು ಅವರು ಹೇಳಿಲ್ಲವೆ? ಪ್ರತಿಯೊಬ್ಬರಿಗೂ ಭಗವಂತನ ದರ್ಶನವಾಗಿದೆ, ಅವನೊಂದಿಗೆ ಐಕ್ಯವಾಗಿದ್ದಾರೆ.

**ಭಕ್ತ:** ಹೌದು ಸ್ವಾಮಿ! ನನಗೆ ಅದು ಅರ್ಥವಾಯಿತು. ಆದರೆ ನಾಮ–ರೂಪಗಳು ಗುಣಗಳ ಮೇಲೆ ನಿಂತಿವೆ ಎಂದು ಹೇಳಿದಿರಿ. ದಯವಿಟ್ಟು ಅದನ್ನು ವಿವರಿಸಿ ಹೇಳಿ.

**ಸ್ವಾಮಿ:** ಖಂಡಿತ. ಈಗ ನಾವು ಇಂತಹ ಮುಖ್ಯವಾದ ವಿಚಾರಗಳ ಕಡೆಗೆ ಮಾತ್ರ ಗಮನ ಕೊಡಬೇಕು. ಇತರ ಅಂಶಗಳು ನಿನ್ನ ಕಲ್ಪನಾ ಶಕ್ತಿಗೆ ಸಿಕ್ಕದಷ್ಟು

ದೂರವಾಗಿವೆ. ಎಚ್ಚರಿಕೆಯಿಂದ ಕೇಳು. ಭಗವಂತನು ಎಲ್ಲರನ್ನು ಸಂತೋಷಪಡಿಸುತ್ತಾನೆ. ಆದ್ದರಿಂದ ಅವನನ್ನು ರಾಮ ಎಂದು ಕರೆಯಲಾಗುತ್ತದೆ. ಹಾಗೆಯೇ ಅವನು ಪ್ರೇಮ ಸ್ವರೂಪಿ, ಪ್ರೇಮ ಮೂರ್ತಿ; ಅವನು ಭಕ್ತವತ್ಸಲ, ತನ್ನ ಭಕ್ತರ ಬಗೆಗೆ ಅಕ್ಕರೆ ತುಂಬಿರುವವನು; ಅವನು ಕೃಪಾಸಾಗರ, ಕರುಣೆಯ ಕಡಲು, ಇಂತಹ ಒಂದೊಂದು ನಾಮದಲ್ಲೂ ರೂಪದಲ್ಲೂ ಅವನು ಭಕ್ತರಿಗೆ ಸಾಕ್ಷಾತ್ಕಾರ ನೀಡಿದ್ದಾನೆ. ಸಾಯುಜ್ಯವನ್ನು ಅನುಗ್ರಹಿಸಿದ್ದಾನೆ. ರೂಪರಹಿತನಾದ ಭಗವಂತನು ಭಕ್ತರನ್ನು ಅನುಗ್ರಹಿಸುವ ಸಲುವಾಗಿಯೇ ಎಲ್ಲಾ ಬಗೆಯ ರೂಪಗಳನ್ನು ಧರಿಸುತ್ತಾನೆ.

**ಭಕ್ತ**: ನನಗೆ ತುಂಬಾ ಸಂತೋಷವಾಗಿದೆ ಸ್ವಾಮಿ, ನಿಜವಾಗಿ ಸಂತೋಷವಾಗಿದೆ. ತಮ್ಮ ಕೃಪೆಯಿಂದ ನಾನು ನಿಚ್ಚಳವಾಗಿ ಅರ್ಥ ಮಾಡಿಕೊಳ್ಳುತ್ತಿದ್ದೇನೆ. ಒಂದು ಸಂದೇಹವಿದೆ. ರೂಪರಹಿತ ಪರಮಾತ್ಮನು ಅಸಂಖ್ಯ ನಾಮಗಳನ್ನು ಹೊಂದಿದ್ದಾನೆ ಎಂದು ತಾವು ಹೇಳಿದಿರಿ. ಇಲ್ಲಿ ನಾಮಗಳು ಮತ್ತು ರೂಪಗಳು ಸಮಾನವೆ? ಅವುಗಳಲ್ಲಿ ಏನಾದರೂ ತಾರತಮ್ಯವುಂಟೆ?

**ಸ್ವಾಮಿ :** ಎಂತಹ ಪ್ರಶ್ನೆ! ಎಲ್ಲ ನಾಮಗಳೂ ರೂಪಗಳೂ ನಿಜವಾಗಿಯೂ ಸಮಾನವಾದವು. ಯಾವುದೇ ನಾಮವನ್ನು ಅಥವಾ ರೂಪವನ್ನು ಪೂಜಿಸಿದರೂ ಭಗವಂತ ಆ ವಿಶಿಷ್ಟ ಸತ್ಯ ಸ್ವರೂಪನೇ. ಆ ನಾಮ ಮತ್ತು ರೂಪದ ಮೂಲಕ ಅವನನ್ನು ಸಾಕ್ಷಾತ್ಕರ ಪಡಿಸಿಕೊಳ್ಳುವುದು ಸಾಧ್ಯ. ಆದರೆ ಭಕ್ತನು ಇಲ್ಲಿ ಒಂದು ವಿಚಾರಕ್ಕೆ ಗಮನ ಕೊಡಬೇಕು. ಭಗವಂತನನ್ನು ಯಾವುದೇ ರೂಪದಲ್ಲಿ ಪೂಜಿಸಿದರೂ ಕೋರುವ ಕೋರಿಕೆ ಅಥವಾ ಉದ್ದೇಶ ಮಾತ್ರ ಒಂದೇ ಆಗಿರಬೇಕು.

**ಭಕ್ತ**: ಅದು ಯಾವ ಬಗೆಯ ಉದ್ದೇಶವಾಗಿರಬೇಕು, ಸ್ವಾಮಿ?

**ಸ್ವಾಮಿ :** ಮುಮುಕ್ಷುತ್ವ, ಬಿಡುಗಡೆಗಾಗಿ ಬಯಕೆ. ಭಗವತ್‌ಶಕ್ತಿಯನ್ನು ಮಾತ್ರವೇ ಪ್ರೀತಿಸಬೇಕು. ಬೇರೆ ಏನನ್ನೂ ಅಲ್ಲ. ಅದನ್ನು ಪ್ರೀತಿಸು, ಅದನ್ನು ಧ್ಯಾನಿಸು, ಆ ಧ್ಯಾನವು ಹರಳುಗಟ್ಟಲಿ. ಕೊನೆಯದಾಗಿ ಅದರಲ್ಲೇ ವಿಲೀನವಾಗಲು ಸಂಕಲ್ಪ ಮಾಡು. ವ್ಯಕ್ತಿಯಲ್ಲಿ ಇಂತಹ ಉತ್ಕಟವಾದ ಹಂಬಲವು ಬೆಳೆಯಬೇಕು.

**ಭಕ್ತ**: ಹೌದು ಸ್ವಾಮಿ! ಚೆನ್ನಾಗಿ ಅರ್ಥವಾಯಿತು. ತಾವು ಹೇಳಿದಂತೆ, ಭಾಗವತ ಮತ್ತು ರಾಮಾಯಣಗಳಲ್ಲಿ ಅನೇಕ ಕತೆಗಳನ್ನು ಕೇಳಿದ್ದೇನೆ. ಭಗವಂತನ ಬಳಿ ಹಲವು ಬಗೆಯಾದ ವರಗಳನ್ನು ಕೇಳಿ ತಮ್ಮ ವಿನಾಶವನ್ನು ತಾವೇ ತಂದುಕೊಂಡ ಸಂಧರ್ಭಗಳು, ಹಿರಣ್ಯಾಕ್ಷ, ರಾವಣ, ಭಸ್ಮಾಸುರ ಮೊದಲಾದವರು, ಇಂದಿಗೂ

ಅವರು ಹೋದ ಹಾದಿ ನೆನಪಿನಲ್ಲಿವೆ. ನೀವು ಅತ್ಯಂತ ಸ್ಪಷ್ಟವಾಗಿ ಹೇಳಿದ್ದೀರಿ. ಇದು ಭಕ್ತರು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸಬೇಕಾದ ವಿಷಯ.

**ಸ್ವಾಮಿ :** ಒಳ್ಳೆಯದು! ಸುಮ್ಮನೆ ಎಲ್ಲದಕ್ಕೂ 'ನಿಜ' 'ನಿಜ' ಎಂದು ತಲೆಯಾಡಿಸುತ್ತಾ ಇರುವುದರಿಂದ ಏನೂ ಪ್ರಯೋಜನವಿಲ್ಲ. ಇದೇ ಸತ್ಯ, ಇದೇ ಉತ್ತಮವಾದದ್ದು ಎಂಬುದು ನಿನ್ನ ಹೃದಯದಲ್ಲಿ ದೃಢವಾಗಿ ಬೇರೂರಿದರೆ ಸಾಕು, ಆಮೇಲಿನದು ಅದನ್ನು ಆಚರಣೆಯಲ್ಲಿ ತರುವ ವಿಷಯ. ನಾನು ಹೇಳುತ್ತಿರುವವರೆಗೆ ನಿಜ, ನಿಜ ಅನ್ನುತ್ತಿದ್ದು, ಇಲ್ಲಿಂದ ಹೋದ ಕೂಡಲೆ ಮರೆತು ಬಿಟ್ಟರೆ ಹೀಗೆ ಕೇಳುವುದು ನಿಷ್ಪ್ರಯೋಜಕವಾಗುತ್ತದೆ. ಆಹಾರವನ್ನು ತಿನ್ನುವುದು ಹಸಿವೆಯನ್ನು ಹೋಗಲಾಡಿಸುವುದಕ್ಕಾಗಿಯೇ ಹೊರತು, ಹೊಟ್ಟೆಯಿಂದ ದೂರದಲ್ಲಿ ನಾಲಿಗೆಯ ಮೇಲೆ ಇಟ್ಟುಕೊಂಡಿರುವುದಕ್ಕಾಗಿಯಲ್ಲ. ಆಗ ಮತ್ತೆ ಹಸಿವೆ ಪ್ರಾರಂಭವಾಗುತ್ತದೆ. ಹಾಗೆಯೇ ನಡವಳಿಕೆಯಲ್ಲಿ ತೋರಿಸದೆ ಸುಮ್ಮನೆ ಕೇಳಿಕೊಳ್ಳುವುದು ವ್ಯರ್ಥವಾಗುತ್ತದೆ.

**ಭಕ್ತ:** ಇದುವರೆಗೆ ತಾವು ಮುಖ್ಯವಾದ ಕೆಲವು ವಿಚಾರಗಳನ್ನು ಹೇಳಿದ್ದೀರಿ: ೧) ಬಾಹ್ಯ ೨) ಆಂತರಿಕ ಪ್ರಪಂಚ ೩) ಭಗವಂತ. ಇವೆಲ್ಲ ಕಾರಣ–ಪರಿಣಾಮ ಇದ್ದಹಾಗೆ ಬೇರೆ ಬೇರೆ ವಸ್ತುಗಳೇನು? ಅಥವಾ ಅವುಗಳ ನಡುವೆ ಏನಾದರೂ ಸಂಬಂಧ ಇದೆಯೇ?

**ಸ್ವಾಮಿ :** ನೀನೇ ಯೋಚನೆ ಮಾಡು! ಇದಕ್ಕೆ ಆಗಲೇ ನಾನು ಪ್ರೇಮವಾಹಿನಿಯಲ್ಲಿ ಉತ್ತರ ಕೊಟ್ಟಿದ್ದೇನೆ. ಅದು ನಿನಗೆ ಇಂದು ಕೈಸೇರಬಹುದು. ಅದನ್ನು ಓದು. "ಸೇವಿಸುವವನು", "ಸೇವಿಸಲ್ಪಡುವವನು" ಮತ್ತು "ಸೇವೆಯ ಒಳ ಹೊರಗುಗಳು" ಇವುಗಳ ನಡುವೆ ಇರುವ ಸಂಬಂಧದ ಬಗೆಗೆ ಅಲ್ಲಿ ಏನು ಹೇಳಿದೆಯೆಂಬುದನ್ನು ಶ್ರದ್ಧೆಯಿಂದ ಓದಿ ನೋಡು.

**ಭಕ್ತ:** ಸ್ವಾಮಿ, ತಾವು ಕ್ಷರ–ಅಕ್ಷರ, ನಿತ್ಯ–ಅನಿತ್ಯಗಳ ವಿಚಾರವಾಗಿ ಪ್ರಸ್ತಾಪಿಸಿದಿರಿ. ಇನ್ನು ಬೇರೆ ಹೆಸರುಗಳೂ ಅವಕ್ಕೆ ಇವೆಯೆ?

**ಸ್ವಾಮಿ :** ಇದಕ್ಕೆ ಪ್ರಕೃತಿ–ಪುರುಷ ಎಂದೂ ಹೆಸರು. ಅವು ಚೇತನ ಮತ್ತು ಅಚೇತನಗಳು. ಇವನ್ನೇ ಜೀವ ಮತ್ತು ಜಡ ಎಂದೂ ಕರೆಯಲಾಗುತ್ತದೆ. ಕ್ಷರ ಅಕ್ಷರ ಪುರುಷರನ್ನು ಬೇರೊಂದು ಸಂದರ್ಭದಲ್ಲಿ ಪರಾ ಮತ್ತು ಅಪರಾ ಪ್ರಕೃತಿಗಳೆಂದೂ ಹೆಸರಿಸಲಾಗುತ್ತದೆ. ನಿಚ್ಚಳವಾದ ಮನಸ್ಸಿನಿಂದ ಆಲೋಚನೆ ಮಾಡಿ ನೋಡಿದರೆ, ವಸ್ತುವು ಬದಲಾಗದೆ ಹೆಸರುಗಳು ಮಾತ್ರ ಬದಲಾಗುವುದು ನಿನಗೆ ತಿಳಿಯುತ್ತದೆ.

**ಭಕ್ತ:** ಹಾಗಾದರೆ ಸ್ವಾಮಿ, ಕ್ಷರ–ಅಕ್ಷರಗಳಿಗೆ ಪುರುಷ ಎಂಬ ಸಮಾನಾರ್ಥಕ ವಿರುವಂತೆಯೇ ಭಗವಂತನಿಗೂ ಸಮಾನಾರ್ಥಕವಿದೆಯೇ?

**ಸ್ವಾಮಿ:** ಯಾಕೆ: ಭಗವಂತನಿಗೆ ಅತ್ಯಂತ ಸೂಕ್ತವಾದ ಪುರುಷೋತ್ತಮ ಎಂಬ ಹೆಸರೇ ಇದೆಯಲ್ಲ. ಪುರುಷರಲ್ಲೆಲ್ಲ ಅವನೇ ಅತ್ಯಂತ ಶ್ರೇಷ್ಠನು.

**ಭಕ್ತ:** ಓಹ್! ಎಷ್ಟು ಸೊಗಸು! ಎಂಥಾ ಮಧುರವಾದ ಹೆಸರು! ಪುರುಷರು ಪುರುಷೋತ್ತಮನಿಂದ ಹುಟ್ಟಿದರೇ?

**ಸ್ವಾಮಿ:** ಇಲ್ಲಿ ದೊಡ್ಡ ಸಮಸ್ಯೆ ಎದುರಾಗುತ್ತದೆ. ಮೊದಲು ಒಂದು ಸಲ ನೀನು ಹುಟ್ಟಿತೇ ಎಂಬ ಪದವನ್ನು ಪ್ರಯೋಗಿಸಿದೆ. ನಾವು ಸರಿಯಾದ ಪದಗಳನ್ನು ಉಪಯೋಗಿಸಬೇಕು. ಇಲ್ಲವಾದರೆ ನಮಗೆ ತಪ್ಪು ಅರ್ಥ ಬರುತ್ತದೆ. ನಾವು ಪುರುಷೋತ್ತಮನಿಂದ 'ಹುಟ್ಟು'ತ್ತೇವೆಂದು ಹೇಳಬಾರದು. ಅವನಲ್ಲಿ ಅವರು ಪ್ರಕಾಶಿಸುತ್ತಾರೆ. ಈ ಪುರುಷರು ಪರಾ–ಅಪರಾ ಪ್ರಕೃತಿ, ಜೀವ–ಜಡ ಎಂಬ ಪದಗಳಿಂದ ಸೂಚಿತರಾಗುತ್ತಾರೆ ಎಂದು ನಾನು ಆಗಲೇ ಹೇಳಿದೆ. ಈ ಪ್ರಕೃತಿ ಎಂಬ ಶಬ್ದವು ಸ್ವಭಾವ ಮತ್ತು ಶಕ್ತಿ ಎಂಬ ಅರ್ಥವನ್ನೂ ಕೊಡುತ್ತದಲ್ಲವೆ?

**ಭಕ್ತ:** ಹೌದು, ಕೊಡುತ್ತದೆ. ಪರುಷೋತ್ತಮ ಒಬ್ಬನು, ಅವನ ಪ್ರಕೃತಿ ಎರಡನೆಯದು ಎಂದು ನಾನು ತಿಳಿದುಕೊಂಡಿದ್ದೇನೆ.

**ಸ್ವಾಮಿ:** ಇಲ್ಲ, ನೀನು ತಪ್ಪಾಗಿ ತಿಳಿದುಕೊಂಡಿದ್ದೀಯೆ. ಮತ್ತೆ ಆಲೋಚಿಸಿ ನೋಡು. ಒಂದು ವಸ್ತುವಿಗೂ ಅದರ ಸ್ವಭಾವಕ್ಕೂ ನಡುವೆ ಏನಾದರೂ ವ್ಯತ್ಯಾಸವಿದೆಯೆ? ವಸ್ತುವನ್ನು ಅದರ ಸ್ವಭಾವದಿಂದ ಪ್ರತ್ಯೇಕಗೊಳಿಸಿ ನೋಡುವುದು ಸಾಧ್ಯವೆ? ಆದರೂ ನೀನು 'ಎರಡು' ಎಂದು ಹೇಳಿದೆ.

**ಭಕ್ತ:** ಅದು ತಪ್ಪು ಸ್ವಾಮಿ. ಯಾರೂ ಅದನ್ನು ಬೇರ್ಪಡಿಸಲಾರರು. ಎರಡೂ ಒಂದೇ ಆಗಿವೆ.

**ಸ್ವಾಮಿ:** ಸಾಮಾನ್ಯವಾಗಿ ಮಾತನಾಡುವಾಗ ನಾವು 'ಸಕ್ಕರೆ ಸಿಹಿಯಾಗಿದೆ', 'ಸೂರ್ಯನು ಬೆಳಕನ್ನು ಕೊಡುತ್ತಾನೆ', 'ಅದು ಬಿಸಿಯಾಗಿದೆ' ಎಂದು ಹೇಳುತ್ತೇವೆ. ಸಿಹಿ ಸಕ್ಕರೆಯಲ್ಲಿದೆ, ಬೆಳಕು ಸೂರ್ಯನಲ್ಲಿದೆ, ಅವು ಬೇರೆ ಬೇರೆ ಅಲ್ಲ, ಒಂದೇ. ಸಕ್ಕರೆಯನ್ನು ನಾಲಗೆಯ ಮೇಲೆ ಇಟ್ಟ ಹೊರತು ಸಿಹಿಯು ಅನುಭವಕ್ಕೆ ಬರುವುದಿಲ್ಲ; ಸೂರ್ಯನನ್ನು ನೋಡದೆಯೇ ಬೆಳಕೂ ಶಾಖವೂ ತಿಳಿಯುವುದಿಲ್ಲ.

ಹೀಗೆ ಭಗವಂತನಿಗೆ ಎರಡೂ ಲಕ್ಷಣಗಳಿವೆ; ಅವುಗಳನ್ನು ಎರಡು ಎಂದು ಹೇಳುವಾಗ ಪುರುಷ ಮತ್ತು ಪ್ರಕೃತಿ ಎಂದು ಉಲ್ಲೇಖಿಸುತ್ತೇವೆ; ಆದರೆ ಸಾರದಲ್ಲಿ ಅವರಿಬ್ಬರೂ ಒಂದೇ. ಭಗವಂತನಲ್ಲಿ ಪ್ರಕೃತಿಯು (ಮಹಾ ಮಾಯಾ ಎಂಬ ಹೆಸರಿನಿಂದ ಕರೆಯುವುದು ಇದನ್ನೇ) ಅವ್ಯಕ್ತವಾದುದು, ಬೇರ್ಪಡಿಸಲಾಗದುದು, ಸಕ್ಕರೆಯಲ್ಲಿರುವ ಸಿಹಿಯ ಹಾಗೆ. ಅವಿನಾಭಾವ ಸಂಬಂಧ ಎನ್ನುವುದು ಈ ಸಂಬಂಧವನ್ನೇ. ಸಂಕಲ್ಪ ಮಾತ್ರದಿಂದ ಮಾಯೆಯು ಭಗವಂತನನ್ನು ಆವರಿಸಿ ಕೊಂಡು ವಿಶ್ವ ಅಥವಾ ಬ್ರಹ್ಮಾಂಡವಾಗಿ ವ್ಯಕ್ತವಾಗುತ್ತದೆ. ಇದನ್ನೇ ಸಮಷ್ಟಿ ವಿಶ್ವರೂಪ, ಅಥವಾ ಪರಿಪೂರ್ಣ ಸಕಲ ಜಗತ್ಸ್ವರೂಪ ಎಂದು ಕರೆಯುವುದು. ದೈವ ಸಂಕಲ್ಪಕ್ಕನುಗುಣವಾಗಿ ಅವಿದ್ಯಾ ಶಕ್ತಿಯ ಮೂಲಕ ಈ ಪರಿಪೂರ್ಣವೇ ಜಗತ್ತಾಗಿ ವ್ಯಕ್ತವಾಗುತ್ತದೆ.

**ಭಕ್ತ:** ಇದೇನು ಸ್ವಾಮಿ? ಇದುವರೆಗೂ ಎಲ್ಲವೂ ನಿಚ್ಚಳವಾಗಿತ್ತು. ಆದರೆ ಈಗ ಉಪಯೋಗಿಸಿದ ಈ ಅವಿದ್ಯಾ ಎಂಬ ಪದ ನನ್ನ ಆಲೋಚನೆಯನ್ನು ಏರು ಪೇರುಗೊಳಿಸಿಬಿಟ್ಟಿತಲ್ಲ! ನನಗೆ ಅದು ಏನೂ ಅರ್ಥವಾಗಿಲ್ಲ. ದಯವಿಟ್ಟು ವಿವರಿಸಿ.

**ಸ್ವಾಮಿ :** ಅವಸರಪಡಬೇಡ! ನೀನು ವಿದ್ಯಾ ಎಂಬ ಪದವನ್ನು ಕೇಳಿರುವೆಯೇನು! ಅದರ ಅರ್ಥ ಗೊತ್ತೆ?

**ಭಕ್ತ:** ಗೊತ್ತು. ವಿದ್ಯಾ ಎಂದರೆ ಅಧ್ಯಯನ.

**ಸ್ವಾಮಿ :** ವಿದ್ಯೆ ಎಂದರೆ ತಿಳಿವು, ಜ್ಞಾನ. ಅದಕ್ಕೆ ಅ ಸೇರಿದರೆ ಅಜ್ಞಾನವಾಗುತ್ತದೆ. ಅಜ್ಞಾನವು ಒಂದೇ ಆದರೂ ಹಲವು ಬಗೆ ರೂಪಗಳನ್ನು ಪಡೆಯುತ್ತದೆ.

**ಭಕ್ತ:** ಹೌದು ಸ್ವಾಮಿ. ಈ ಅವಿದ್ಯೆ ಹೇಗೆ ಬಂದಿತು? ಎಲ್ಲಿಂದ ಬಂದಿತು?

**ಸ್ವಾಮಿ :** ನಿನಗೆ ಬೆಳಕು–ಕತ್ತಲೆ ಗೊತ್ತು ತಾನೆ? ಅವೆರಡೂ ಒಂದೇ ಸಮಯದಲ್ಲಿ ಇರುತ್ತವೆಯೆ?

**ಭಕ್ತ:** ಬೆಳಕು ಇರುವಾಗ ಕತ್ತಲೆ ಇರುವುದಿಲ್ಲ ಅಥವಾ ಕತ್ತಲಿರುವಲ್ಲಿ ಬೆಳಕಿರುವು ದಿಲ್ಲ.

**ಸ್ವಾಮಿ :** ಬೆಳಕು ಇರುವಾಗ ಕತ್ತಲು ಎಲ್ಲಿರುತ್ತದೆ? ಕತ್ತಲೆ ಇರುವ ಸಮಯದಲ್ಲಿ ಬೆಳಕು ಎಲ್ಲಿರುತ್ತದೆ? ಚೆನ್ನಾಗಿ ಯೋಚಿಸು?

**ಭಕ್ತ:** ಇದು ತುಂಬಾ ಕಷ್ಟವಾದ ವಿಷಯ ಸ್ವಾಮಿ! ಆದರೂ ನನಗೆ ಸಾಧ್ಯವಿರುವಷ್ಟು ಮಟ್ಟಿಗೆ ಉತ್ತರ ಕೊಡುತ್ತೇನೆ. ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಕತ್ತಲು ಬೆಳಕಿನಲ್ಲೇ ಇರಬೇಕು; ಬೆಳಕು ಕತ್ತಲಿನಲ್ಲೇ ಇರಬೇಕು; ಹೀಗಿಲ್ಲದೆ ಬೇರೆ ಹೇಗೆ ಸಾಧ್ಯ?

**ಸ್ವಾಮಿ:** ಇನ್ನೊಂದು ಸಣ್ಣ ಪ್ರಶ್ನೆ ಕೇಳುತ್ತೇನೆ. ಉತ್ತರವನ್ನು ಕೊಡು. ಈ ಬೆಳಕು ಮತ್ತು ಕತ್ತಲೆ ಇವು ಸ್ವತಂತ್ರವಾಗಿವೆಯೋ ಅಥವಾ ಅವು ಬೇರೆ ಯಾವುದಾದರೂ ಒಂದನ್ನು ಅವಲಂಬಿಸಿವೆಯೋ?

**ಭಕ್ತ:** ಅವು ಸೂರ್ಯನನ್ನು ಅವಲಂಬಿಸಿವೆ. ಸೂರ್ಯನು ಮೂಡಿದಾಗ ಬೆಳಕು; ಸೂರ್ಯನು ಮುಳುಗಿದಾಗ ಕತ್ತಲು.

**ಸ್ವಾಮಿ:** ಒಳ್ಳೆಯದು ಮಗು, ವಿದ್ಯೆ ಮತ್ತು ಅವಿದ್ಯೆ ಎರಡೂ ಭಗವಂತನನ್ನು ಅವಲಂಬಿಸಿವೆ. ವಿದ್ಯೆಗೆ ಇನ್ನೊಂದು ಹೆಸರೂ ಇದೆ, ಚಿತ್ತ ಎಂದು. ಮುಂದಿನ ತಿಂಗಳು ಬಂದಾಗ ಅದೆಲ್ಲವನ್ನು ನಿನಗೆ ವಿವರಿಸುತ್ತೇನೆ. ಇವತ್ತಿಗೆ ಇಷ್ಟು ಸಾಕು, ಹೋಗಿಬಾ. ಒಂದೇ ಸಲಕ್ಕೆ ಎಲ್ಲವನ್ನೂ ತಿಂದರೆ ಜೀರ್ಣವಾಗುವುದಿಲ್ಲ. ಮತ್ತೆ ಅದು ಅನಾರೋಗ್ಯಕ್ಕೆ ದಾರಿ ಮಾಡುತ್ತದೆ. ನಾವು ಏನನ್ನು ಕೇಳಿದ್ದೇವೋ ಏನನ್ನು ತಿಂದಿದ್ದೇವೋ ಅದು ಅರಗಿ ರಕ್ತಗತವಾಗಲು ಸ್ವಲ್ಪ ಸಮಯ ಬೇಕು. ಆದ್ದರಿಂದಲೇ ಒಂದು ತಿಂಗಳ ಬಿಡುವು ಕೊಟ್ಟಿದ್ದೇನೆ. ಅಷ್ಟರಲ್ಲಿ ಇದೆಲ್ಲವನ್ನೂ ಅರಗಿಸಿಕೊಂಡು ಆಚರಣೆಯಲ್ಲಿ ತಂದರೆ, ಮಿಕ್ಕದ್ದನ್ನು ಸಂತೋಷವಾಗಿ ನಿನಗೆ ಹೇಳಿಕೊಡುತ್ತೇನೆ. ಇಲ್ಲವಾದರೆ ಆ ದಿನವು ಹೇಗಿರುತ್ತದೆಂಬುದನ್ನು ನೀನೇ ಊಹಿಸಿಕೊಳ್ಳಬಹುದು.

**ಭಕ್ತ:** ನಮಸ್ಕಾರ ಮಾಡುತ್ತೇನೆ ಸ್ವಾಮಿ. ನಾನು ನಿಜವಾಗಿ ಧನ್ಯನಾದೆ. ಕೇಳಿದುದನ್ನು ತಿಂದುದನ್ನು ಅರಗಿಸಿಕೊಳ್ಳುವುದು; ಇದಕ್ಕೆ ಬೇಕಾದ ಶಕ್ತಿಯನ್ನು ತಾವೇ ಅನುಗ್ರಹಿಸಬೇಕು. ಸಮಸ್ತವೂ ಭಗವಂತನದೇ ಆಗಿರುವಾಗ ಇದೊಂದು ನಮ್ಮದಾಗಿರಲು ಹೇಗೆ ಸಾಧ್ಯ? ತಾವು ನನಗೆ ಕೃಪೆ ಮಾಡಿರುವ ಸಾಮರ್ಥ್ಯವನ್ನು, ಜ್ಞಾನವನ್ನು ಸಾಧ್ಯವಾದಷ್ಟು ಮಟ್ಟಿಗೂ ಪೋಲಾಗದಂತೆ ಉಪಯೋಗಿಸುತ್ತೇನೆ. ಅಲ್ಲಿಂದಾಚೆಗೆ ಅದು ತಮ್ಮ ಕೃಪೆ. ತಮ್ಮ ಅನುಮತಿಯಿಂದ ಈಗ ಹೊಗಿಬರುತ್ತೇನೆ.

**ಸ್ವಾಮಿ:** ನಿನ್ನ ಹೊರೆಯನ್ನು ವಿಧಿಯ ಮೇಲೆ ಹೊರಿಸಿ ಸುಮ್ಮನಿರುವುದೆಂದರೆ ಅದು ಪರಿಶ್ರಮಹೀನತೆಯಾಗುತ್ತದೆ. ಪರಿಶ್ರಮ ಮತ್ತು ಪ್ರಾರ್ಥನೆಗಳಿಂದ ಅದೃಷ್ಟವನ್ನು ಸಂಪಾದಿಸಬೇಕು. ಪ್ರಯತ್ನ ಮತ್ತು ಪ್ರಾರ್ಥನೆ ಇಲ್ಲದೆ ಅದೃಷ್ಟವನ್ನೂ ಭಗವತ್ಕರುಣೆ

ಯನ್ನೂ ಗಳಿಸಲು ಸಾಧ್ಯವಿಲ್ಲ. ಆದ್ದರಿಂದ ಪರಿಶ್ರಮದಲ್ಲಿ ತೊಡಗು. ಒಳ್ಳೆಯದು, ಹೋಗಿ ಸಂತೋಷವಾಗಿ ಮತ್ತೆ ಬಾ.

# ಅಧ್ಯಾಯ ೪

**ಸ್ವಾಮಿ:** ಹೋ ! ನೀನು ಬಂದಿದ್ದೀಯೆ ! ಬಂದಿರುವೆಯೊ ಇಲ್ಲವೊ ಎಂದು ಬಹಳ ಸಮಯದಿಂದ ಗಮನಿಸುತ್ತಿದ್ದೆ. ನೀನು ಸಮಯಕ್ಕೆ ಸರಿಯಾಗಿ ಬರುವ ವ್ಯಕ್ತಿ ಎಂದು ನಾನು ಬಲ್ಲೆ. ನೋಡಿ ಬಹಳ ಸಂತೋಷವಾಯಿತು.

**ಭಕ್ತ:** ಯಾವುದನ್ನೇ ಅಲಕ್ಷಿಸಿದರೂ ಸ್ವಾಮಿ, ತಮ್ಮ ಆದೇಶವನ್ನು ಅಲಕ್ಷಿಸುವೆನೆ? ನಿಜವಾಗಿ ಪ್ರತಿ ತಿಂಗಳ ಹದಿನಾರನೆಯ ತಾರೀಕನ್ನು ಬಹಳ ಕಾತರದಿಂದ ಎದುರು ನೋಡುತ್ತಿರುತ್ತೇನೆ. ತಮ್ಮನ್ನು ಸಂಧಿಸುವ ಆಸೆಯಿಂದ. ಇದಕ್ಕಿಂತ ದೊಡ್ಡ ಸಂತೋಷ ನನಗೆ ಬೇರೆ ಯಾವುದಿದೆ? ಇದಕ್ಕಿಂತ ಉತ್ತಮ ಆಹಾರ ಬೇರೆ ಯಾವುದು ತಾನೆ ನನಗೆ ದೊರಕುತ್ತದೆ?

**ಸ್ವಾಮಿ:** ತುಂಬಾ ಸಂತೋಷ! ಮನುಷ್ಯನ ಸಾಧನ ಮಾರ್ಗದಲ್ಲಿ ಅಂತಹ ಶ್ರದ್ಧೆ ಮತ್ತು ಭಕ್ತಿಗಳು ತುಂಬಾ ದೊಡ್ಡ ಸಹಾಯವಾಗುತ್ತದೆ. ಅಶಾಶ್ವತವಾದ ಪ್ರಾಪಂಚಿಕ ವಿಷಯಗಳಿಗಾಗಿ ವ್ಯರ್ಥವಾಗಿ ಅರಸುತ್ತಾ ನಿದ್ರಾಹಾರಗಳನ್ನು ಬಿಟ್ಟು ಕಷ್ಟ ಪಡುವುದಕ್ಕಿಂತ ನಿಜವಾದ, ಅರ್ಥಪೂರ್ಣವಾದ, ಪವಿತ್ರವಾದ ಗುರಿಯನ್ನು ಮುಟ್ಟಲು ತವಕಿಸುವುದರಲ್ಲಿ ಎಂತಹ ಆನಂದವಿದೆ! ಸರಿ, ಅದು ಒತ್ತಟ್ಟಿಗಿರಲಿ. ಈಗ ನೀನು ಏನನ್ನು ತಿಳಿದುಕೊಳ್ಳಬಯಸುವೆ ಹೇಳು ನೋಡೋಣ.

**ಭಕ್ತ:** ಸ್ವಾಮಿ, ಕಳೆದ ತಿಂಗಳು ತಾವು 'ಚಿತ್ತ'ದ ಬಗೆಗೆ ಪ್ರಸ್ತಾಪಿಸಿದಿರಿ. ಅದನ್ನು ಕುರಿತು ಈ ತಿಂಗಳು ಹೆಚ್ಚಾಗಿ ವಿವರಿಸುವುದಾಗಿ ಹೇಳಿದ್ದಿರಿ. ಅವತ್ತಿನಿಂದಲೂ ಆ ವಿಷಯವಾಗಿ ತಮ್ಮಿಂದ ತಿಳಿದುಕೊಳ್ಳಲು ದಿನಗಳನ್ನು ಎಣಿಸುತ್ತಿದ್ದೇನೆ. ಕೊನೆಗೆ ಈ ದಿನ ಪ್ರಾಪ್ತವಾಗಿದೆ. ದಯವಿಟ್ಟು ಆ ಬಗ್ಗೆ ಹೇಳಿ.

**ಸ್ವಾಮಿ:** ಇದುವರೆಗೆ ಹೇಳಿದುದೆಲ್ಲ ನಿನಗೆ ಅರ್ಥವಾಗಿದೆಯೆ? ಅರ್ಥವಾಗುವುದೆಂದರೆ ಸುಮ್ಮನೆ ಕಂಠಪಾಠ ಮಾಡುವುದಲ್ಲ. ಆಚರಣೆಯಿಂದ, ಅನುಭವದಿಂದ, ಮನಸ್ಸು–ಮಾತು–ಕೃತಿಗಳಲ್ಲಿ ಪೂರ್ಣ ಸಮಚಿತ್ತದಿಂದ ಜಗತ್ತಿನ ನಿಜವಾದ ಸ್ವರೂಪವನ್ನು, ಜಗತ್ತು ಅವಶ್ಯವೆಂಬುದನ್ನು ಅರಿತುಕೊಂಡಿರುವೆಯಾ?

**ಭಕ್ತ:** ಅದನ್ನು ಅರಿತುಕೊಂಡಮೇಲೆ ಮಾತ್ರವೇ ಅಲ್ಲವೆ ಸ್ವಾಮಿ, ವ್ಯಕ್ತಿಯು ಭಗವಾನ್ ಸಾಯಿ ಚಿಂತನೆಯಲ್ಲಿ ಮುಳುಗುವುದು ಸಾಧ್ಯ? ಬೇರೆಲ್ಲ ಚಟುವಟಿಕೆಗಳನ್ನು ಕರ್ತವ್ಯಗಳನ್ನು ತೊರೆದು ಸದಾ ಆನಂದದಲ್ಲಿ ಮುಳುಗುವುದು ಸಾಧ್ಯ? ಅಷ್ಟನ್ನು ಅರ್ಥ ಮಾಡಿಕೊಳ್ಳದೆ ಈ ಅಮೂಲ್ಯವಾದ ಸಮಯವನ್ನು ಪೋಲು ಮಾಡಿಬಿಡುತ್ತಿದ್ದೆ. ಅದು ನಿಮ್ಮ ಕರುಣೆಯ ಫಲ, ಅದರಲ್ಲಿ ನನ್ನ ಶ್ರಮ ಏನೂ ಇಲ್ಲ.

**ಸ್ವಾಮಿ :** ಒಳ್ಳೆಯದು ಮಗು! ತಾನು ಬಿತ್ತಿದ ಬೀಜಗಳು ಮೊಳಕೆಯೊಡೆದು ಫಸಲು ನೀಡದೆ ಹೋದರೆ ರೈತನಿಗೆ ಎಷ್ಟು ದುಃಖವಾಗುತ್ತದೆ! ಹಾಗೆಯೇ ನಾನು ಬಿತ್ತುವ ನಿಜವಾದ ಜ್ಞಾನದ ಬೀಜಗಳು ಒಳ್ಳೆಯ ಸಸಿಗಳಾಗಿ ಬೆಳೆಯದೆ ಹೋದರೆ, ಒಳ್ಳೆಯ ಫಸಲು ಕೊಡದೆ ಹೋದರೆ ನನಗೂ ದುಃಖವಾಗುತ್ತದೆ. ಅದಕ್ಕೆ ಬದಲು ಅವು ಚೆನ್ನಾಗಿ ಬೆಳೆದು ಆನಂದವೆಂಬ ಫಸಲಾಗಿ ಬಲಿತರೆ ನಾನು ಎಷ್ಟು ಸಂತೋಷಪಡುತ್ತೇನೆ! ಅದೇ ನನ್ನ ಆಹಾರ. ನೀನು ನನಗೆ ಮಾಡಬೇಕಾದ ಸೇವೆ ಇದೇಯೆ. ಇದಕ್ಕಿಂತ ಉತ್ತಮವಾದದ್ದು ಬೇರೆ ಯಾವುದೂ ಇಲ್ಲ. ನಿನಗಾಗಿ ಹೇಳಿರುವ ಒಳ್ಳೆಯ ಹಾಗೂ ಸತ್ಯವಾದ ಮಾತುಗಳನ್ನೂ ಅತ್ತ ಎಸೆಯದೆ ಆಚರಣೆಗೆ ತಂದು, ಅದರಿಂದ ಸಂತೋಷ ಪಟ್ಟರೆ ಆ ಸಂತೋಷದ ಸಾರವೇ ನನ್ನ ಆಹಾರವಾಗುತ್ತದೆ. ಹಾಗೆ ನನ್ನ ಮಾತಿನ ಪ್ರಕಾರ ನೀನು ವರ್ತಿಸಿ, ಕಾರ್ಯರೂಪಕ್ಕೆ ತಂದರೆ, ನನಗೆ ಸಂತೋಷವಾಗಿ ನಾನು ಇನ್ನು ಹೇಳುತ್ತೇನೆ. ನೀನು ಎಷ್ಟನ್ನೇ ಕೇಳಿದರೂ ಹೇಳುತ್ತೇನೆ. ಹೇಳಿದುದನ್ನು ಉಪಯೋಗಕ್ಕೆ ತರದೆ ಹಾಗೆಯೇ ಕ್ಷಯಿಸಿ ಹೋಗಲು ಬಿಟ್ಟುಬಿಟ್ಟರೆ, ಸುಮ್ಮನೆ ಜನರು ಬಂದು ಉಪದೇಶ ಮಾಡಿ, ಅದು ಹೇಳಿ ಇದು ಹೇಳಿ ಎಂದು ಕೇಳುತ್ತಿದ್ದರೆ ನಾನು ಏನನ್ನು ಹೇಳುವುದು? ನೀನು ಮಾಡುತ್ತಿರುವ ಹಾಗೆಯೇ ಎಲ್ಲರೂ ಮಾಡ ತೊಡಗಿದರೆ ಪ್ರಪಂಚದಲ್ಲಿ ಯಾವ ಕಷ್ಟವೂ ಇರುವುದಿಲ್ಲ. ಅಸತ್ಯವು ವ್ಯಕ್ತವಾಗುವುದೇ ಇಲ್ಲ.

**ಭಕ್ತ:** ಸ್ವಾಮಿ ಭಗವದ್ವಾಣಿಯನ್ನು ಆಚರಣೆಗೆ ತರುವುದಕ್ಕೆ ಕೂಡ, ಮಿಕ್ಕೆಲ್ಲವುಗಳಂತೆ, ಭಗವಂತನ ಕೃಪೆ ಅತ್ಯಗತ್ಯ. ಅದಿಲ್ಲದೆ ಏನೊಂದೂ ಸಾಧ್ಯವಾಗುವುದಿಲ್ಲ. ತಾವು ಹೇಳಿದಂತೆ ಅದು ಸದಾ ಸರ್ವದಾ ಇದ್ದೇ ಇದೆ. ಸೂರ್ಯನನ್ನು ಕತ್ತಲು ಮುಸುಕಿಕೊಂಡಿರುವಂತೆ, 'ನಾನು' 'ನನ್ನದು' ಎಂಬ ಕತ್ತಲಿನಿಂದ ಕರುಣೆಯು ಮುಸುಕಿರಬಹುದು. ಆದರೆ ಅಭ್ಯಾಸದಿಂದಲೂ ಸಾಧನೆಯಿಂದಲೂ ಅವನ್ನು ಗೆಲ್ಲಬಹುದು. ಆದ್ದರಿಂದ ನಾವು ಏನನ್ನು ಆಲಿಸುತ್ತೇವೋ ಅದರ ಅರ್ಥವನ್ನು ಚೆನ್ನಾಗಿ ಮಾಡಿಕೊಂಡು ಅದರಂತೆ ನಡೆದರೆ ಅದು ಸುಲಭ. ಇದು ನನ್ನ ಅನುಭವ, ಇತರರ ವಿಚಾರ ನನಗೆ ತಿಳಿಯದು.

**ಸ್ವಾಮಿ:** ನಿಜ ನಿಜ, ನೀನು ಹೇಳುವುದು ಸರಿಯಾಗಿದೆ. ನೀನು ಇದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀಯೆ. ಅರ್ಥವನ್ನು ಗ್ರಹಿಸದೆ, ಹಲವಾರು ವ್ಯಾಖ್ಯಾನ ಗಳನ್ನು ಮಾಡುತ್ತಾ ಹೋದರೆ, ಅದು ಸತ್ಯವನ್ನು ವಿರೂಪಗೊಳಿಸುತ್ತದೆ; ತಪ್ಪು ಗ್ರಹಿಕೆಯುಂಟಾದರೆ, ಅದು ಸತ್ಯವನ್ನು ಸುಳ್ಳಾಗಿಸುತ್ತದೆ. ಆದರೆ ಅದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡ ಪಕ್ಷದಲ್ಲಿ ಆಚರಣೆ ಸುಲಭವಾಗುತ್ತದೆ. ಈಗ ಇದನ್ನು ಯೋಚಿಸು. ಎಲ್ಲರೂ ಒಂದೇ ಸಮಯದಲ್ಲಿ ಹುಟ್ಟುತ್ತಾರೆಯೆ? ಹಾಗೆಯೇ ಜ್ಞಾನವು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಮೂಡುತ್ತದೆ. ಒಂದಾದ ಮೇಲೊಂದರಂತೆ ಹಾಡುಗಳನ್ನು ಹಾಡುತ್ತಾ ಹೋದರೆ ನೀನು ಸಂಗೀತ ವನ್ನು ಕಲಿಯುತ್ತೀಯೆ. ಹಾಗೆಯೇ ನಾನು ಮಾತನಾಡಿದರೆ, ಮಾತನಾಡುತ್ತಲೇ ಹೋದರೆ ಎಲ್ಲರೂ ಸತ್ಯವನ್ನು ಅರ್ಥ ಮಾಡಿಕೊಳ್ಳುತ್ತಾರೆ. ಜನರು ಅರಿತು ಕೊಳ್ಳುತ್ತಿಲ್ಲ ಎಂಬ ಕಾರಣದಿಂದ ಮೌನವಾಗಿ ಕುಳಿತಿರುವುದು ನನ್ನ ಧ್ಯೇಯವಲ್ಲ. ಅಂಥವರಿಗೆ ಒಮ್ಮೆ, ಇನ್ನೊಮ್ಮೆ, ಅಥವಾ ಅಗತ್ಯ ಬಂದರೆ ಇನ್ನೂ ಹೆಚ್ಚು ಸಲ ಹೇಳಬೇಕಾಗುತ್ತದೆ.

**ಭಕ್ತ:** ಸ್ವಾಮಿ, ನಾವು ಕಬ್ಬಿಣದ ಮುದ್ದೆಗಳ ಹಾಗೆ, ಭಗವಂತನು ಆಯಸ್ಕಾಂತದ ಹಾಗೆ. ಎರಡಕ್ಕೂ ಸಂಬಂಧವಿದೆ. ಆ ಕಬ್ಬಿಣದ ಮುದ್ದೆಯನ್ನು ಭಗವಂತನ ಹಸ್ತಗಳಲ್ಲಿ ಉಪಯೋಗಕ್ಕೆ ಬರುವಂತಹ ಉಪಕರಣವನ್ನಾಗಿ ಪರಿವರ್ತಿಸಬೇಕಾ ದರೆ, ಅದನ್ನು ಕಾತರವೆಂಬ ಬೆಂಕಿಯಲ್ಲಿ ಕಾಯಿಸಿ, ನೋವೆಂಬ ಸುತ್ತಿಗೆಯಿಂದ ಬಡಿದು ಅದು ನಾವು ಕೇಳುವ ರೂಪಕ್ಕೆ ಬರುವಂತೆ, ಪ್ರತಿಸ್ಪಂದಿಸುವಂತೆ ಮಾಡ ಬೇಕು. ಆದ್ದರಿಂದ ಕಬ್ಬಿಣದ ಮುದ್ದೆಗಳಾದ ನಮ್ಮನ್ನು ಉಪಕರಣಗಳನ್ನಾಗಿಸಲು ತಾವು ತುಂಬಾ ಕಷ್ಟ ಪಡಬೇಕಾಗುತ್ತದೆ. ಅದು ತಮ್ಮ ಜೀವನ ಧ್ಯೇಯವೆಂದು ಹೇಳಿದ್ದೀರಿ. ಈಗ ದಯವಿಟ್ಟು, ಹೋದ ತಿಂಗಳು ಪ್ರಸ್ತಾಪಿಸಿದ 'ಚಿತ್ತ' ವಿಷಯವಾಗಿ ಹೇಳಬೇಕು.

**ಸ್ವಾಮಿ:** ಹೇಳುತ್ತೇನೆ. ಚಿತ್ತ ಎಂಬುದಕ್ಕೆ ಶುದ್ಧ ಸತ್ವ ಎಂಬ ಇನ್ನೊಂದು ಹೆಸರೂ ಇದೆ. ಅದು ಶುದ್ಧ ಪ್ರಜ್ಞೆ, ಅದು ಅಶುದ್ಧ ಕಣ್ಣಿಗೆ ವಿರುದ್ಧವಾದದ್ದು, ವಿದ್ಯೆ ಅವಿದ್ಯೆಗೆ ಹೇಗೋ ಹಾಗೆ. ಅಶುದ್ಧ ಪ್ರಜ್ಞೆಯು ಶುದ್ಧ ಸತ್ವದಲ್ಲಿ ಅಂತರ್ಗತವಾಗಿಯೇ ಇದೆ, ಬೆಳಕಿನಲ್ಲಿ ಕತ್ತಲಿರುವ ಹಾಗೆ. ಅನೇಕ ಪದಗಳನ್ನು ಹೇಳುತ್ತಿರುವುದರಿಂದ ಗೊಂದಲಕ್ಕೊಳಗಾಗಬೇಡ ಮಗು. ವಿದ್ಯೆ–ಅವಿದ್ಯೆ, ಜ್ಞಾನ–ಅಜ್ಞಾನ, ಶುದ್ಧ ಸತ್ಯ–ಮಲಿನ ಸತ್ಯ ಇವೆಲ್ಲಾ ಒಂದೇ ವಿಚಾರವನ್ನು ಸೂಚಿಸುತ್ತವೆಯೇ ಹೊರತು ಬೇರೆ ಬೇರೆಯದನ್ನಲ್ಲ. ನಾನು ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಪ್ರಕೃತಿ ಎಂಬ ಪದದ ವಿರುದ್ಧ ಪದವನ್ನು ಕೇಳಿರುವೆಯಾ?

**ಭಕ್ತ:** ವ್ಯಾಕರಣವನ್ನು ಓದುವಾಗ ಕೇಳಿದ್ದೇನೆ ಸ್ವಾಮಿ! ಪ್ರಕೃತಿಯ ವಿರುದ್ಧ ಪದ 'ವಿಕೃತಿ' ಎಂದು ಕೇಳಿದ್ದೇನೆ.

**ಸ್ವಾಮಿ :** ವಿಕೃತಿ ಎಂದರೆ ವಿಕಾರ, ಬದಲಾದದ್ದು, ಪರಿವರ್ತಿತವಾದದ್ದು. ವ್ಯುತ್ಪನ್ನ ವಾದದ್ದು, ಅಗ್ನಿಮೂಲ, ಅಗ್ನಿ ವ್ಯುತ್ಪನ್ನ, ಹಾಗೆಯೇ ಜವ ಎನ್ನುವುದು ಯಮ ದಿಂದ ಬಂದಿದೆ. ಯಜ್ಞದಿಂದ ಜನ್ನ, ಹೀಗೆ.

**ಸ್ವಾಮಿ :** ಅದೇ ರೀತಿ ಭಗವಂತನ ಪ್ರಕೃತಿಯನ್ನು ವಿದ್ಯಾ ಎಂದು ಕರೆಯಲಾಗುತ್ತದೆ. ಅದರಿಂದ ವ್ಯುತ್ಪನ್ನವಾದ ಅಥವಾ ಕೆಳಮಟ್ಟ ಅಥವಾ ವಿಕೃತಿ ರೂಪವನ್ನು ಅವಿದ್ಯಾ ಎಂದು ಕರೆಯಲಾಗುತ್ತದೆ. ವಿದ್ಯೆ ಅಥವಾ ಶುದ್ಧ ಸತ್ಯಕ್ಕೆ ಅವಿದ್ಯೆ ಅಥವಾ ಮಲಿನ ಸತ್ಯವು ಕೆಳಮಟ್ಟದ ರೂಪ.

**ಭಕ್ತ:** ಅದು ಹೇಗಾಗುತ್ತದೆ ಸ್ವಾಮಿ? ವಿದ್ಯೆ ಭಗವಂತನಲ್ಲಿ ಕಾಂತಿಯುಕ್ತವಾಗಿರುತ್ತದೆ. ಅವಿದ್ಯೆ ವ್ಯಕ್ತವಾಗುವುದು ವಿಜ್ಞಾನದ ಕಾರಣದಿಂದ ಮಾತ್ರವೆ. ಅಂದರೆ, ವಿಶ್ವ ತತ್ತ್ವವು ಭಗವಂತನಲ್ಲಿದೆ. ಈ ವಿಶ್ವ ತತ್ತ್ವವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ತೋರ್ಪಡಿಸಿಕೊಳ್ಳುತ್ತದೆ. (ನಾಮ–ರೂಪಗಳೆಂಬ ಬಾಹ್ಯ ಲಕ್ಷಣಗಳಿಂದ ವ್ಯಕ್ತಿಗಳು ಬೇರೆ ಬೇರೆಯಾಗಿ ತೋರುತ್ತಾರೆ). ಈ ಅವಿದ್ಯಾಶಕ್ತಿಯು ಅವಿಭಾಜ್ಯವಾದ ವಸ್ತು ವಾಗಿಯೂ ವ್ಯಕ್ತವಾಗುತ್ತದೆ. ಏಕೆಂದರೆ ಭಗವಂತನೊಬ್ಬನೇ ಸತ್ಯ; ಅಸ್ತಿತ್ವದಲ್ಲಿ ರುವುದು. ಆದ್ದರಿಂದ ಆ ಒಂದು ಅಸ್ತಿತ್ವವೇ ವಿಶ್ವಾತ್ಮಕತೆಗೂ ವೈಯಕ್ತಿಕತೆಗೂ ಆಧಾರ ಅಥವಾ ತಳಹದಿ. ಸಮಗ್ರ ಹಾಗೂ ಭಾಗಗಳಿಗೆ ತಳಹದಿ. ತಾವು ಹೇಳುತ್ತಿ ರುವ ಮಾತಿನ ಅರ್ಥ ಇದೇ ಅಲ್ಲವೆ ಸ್ವಾಮಿ?

**ಸ್ವಾಮಿ :** ಈ ಕಾರಣದಿಂದಲೇ ಭಗವಂತನನ್ನು ಸತ್ಯ ಮತ್ತು ಬ್ರಹ್ಮನ್ ಎಂದು ಉಲ್ಲೇಖಿಸಲಾಗುತ್ತದೆ. ಈ ಸತ್ಯವು ಅಖಂಡ ಅಥವಾ ವಿಭಜಿಸಲಾಗದಂಥದ್ದು. ಅದು ಅದ್ವೈತ, ಎರಡಿಲ್ಲದ್ದು. ಅದು ಅನಂತ, ಕೊನೆಯಿಲ್ಲದ್ದು. ಉಪನಿಷತ್ತುಗಳಲ್ಲಿ ಈ ಸತ್ಯವನ್ನು (ಅಪ್ರಕಟಿತ ಮಾಯಾ ಶಕ್ತಿಯೊಂದಿಗೆ ಕೂಡಿದ) ಪೂರ್ಣಂ ಅದಃ ಎಂದೂ (ಪ್ರಕಟಿತ ಮಾಯಾಶಕ್ತಿಯೊಂದಿಗೆ ಕೂಡಿದ) ಸತ್ಯವನ್ನು ಪೂರ್ಣಂ ಇದಃ ಎಂದೂ ಕರೆಯಲಾಗಿದೆ. ಪೂರ್ಣಮದಃ ಪೂರ್ಣಮಿದಂ... ಎಂದು ಹೇಳಲಾಗುವ ಉಪನಿಷತ್ತಿನ ಮಂತ್ರ ರಹಸ್ಯ ಇದೇಯೆ.

**ಭಕ್ತ:** ಆಹಾ, ಎಷ್ಟು ಸೊಗಸಾದ ವಿವರಣೆ! ಹಣ್ಣಿನ ಸಿಪ್ಪೆ ಸುಲಿದು ತೊಳೆಗಳನ್ನು ಬಿಡಿಸಿ, ತಿನ್ನಲು ಸಿದ್ಧಪಡಿಸಿ ಅಂಗೈಯಲ್ಲಿ ಇಟ್ಟಹಾಗೆ! ಈ ವ್ಯಕ್ತ ಬ್ರಹ್ಮಾಂಡ ಅಥವಾ

ಪೂರ್ಣನು ಅವ್ಯಕ್ತ ಅವಿಭಾಜ್ಯ ಸತ್ಯವಾದ ಪೂರ್ಣದಿಂದ ಮೂಡಿಬಂದಿತು. ಸ್ವಾಮಿ, ತಾವು ಹೇಳಿದ್ದು ಇದೇ ಅಲ್ಲವೇ?

**ಸ್ವಾಮಿ :** ಈ ಕಾರಣದಿಂದಲೇ ನಾವು ವಾಸುದೇವಸ್ಸರ್ವಮಿದಂ, ಸರ್ವಂಖಲ್ವಿದಂ ಬ್ರಹ್ಮ ಇತ್ಯಾದಿಯಾಗಿ ಹೇಳುತ್ತೇವೆ. ವಾಸುದೇವ, ಬ್ರಹ್ಮ ಎಂಬ ಪದಗಳು ಬೇರೆ ಬೇರೆ, ಆದರೆ ಅರ್ಥದಲ್ಲಿ ಯಾವ ವ್ಯತ್ಯಾಸವೂ ಇಲ್ಲ, ತಿಳಿಯಿತೆ?

**ಭಕ್ತ:** ಅಹಾ, ಅಮೃತೋಪಮವಿದೆ! ಸ್ವಾಮಿ. ಆದರೆ 'ನಾನು ಯಾರು' ಎಂಬ ವಿಚಾರವಾಗಿ ತಾವು ಇನ್ನೂ ಏನನ್ನು ಹೇಳಿಲ್ಲವಲ್ಲ.

**ಸ್ವಾಮಿ :** ಈಗ ಇಷ್ಟು ಸಾಕು. ಮುಂದಿನ ತಿಂಗಳು ನಿದರ್ಶನಗಳೊಂದಿಗೆ ನಿನ್ನ ಸಂದೇಹಗಳನ್ನು ಪರಿಹರಿಸುತ್ತೇನೆ. ಹೇಳಿದ್ದನ್ನು ಚೆನ್ನಾಗಿ ಗ್ರಹಿಸು, ಅಭ್ಯಾಸ ಮಾಡು; ಮರೆತು ಬಿಡಬೇಡ. ಅದನ್ನು ಕುರಿತು ಚಿಂತನೆ ಮಾಡು. ಒಳ್ಳೆಯದು, ಈಗ ಹೋಗಿ ಬಾ.

# ಅಧ್ಯಾಯ ೫

**ಸ್ವಾಮಿ :** ಒಳ್ಳೆಯದು ಮಗು, ನೀನು ಬಂದಿರುವುದನ್ನು ನೋಡಿ ನನಗೆ ಸಂತೋಷ ವಾಗಿದೆ. ಕಳೆದ ಸಾರಿ ನಾನು ಕೊಟ್ಟ ಉತ್ತರಗಳನ್ನು ಮನನ ಮಾಡುತ್ತಿರುವೆಯಾ? ಹೇಳಿದುದನ್ನು ದೃಢವಾದ ಶ್ರದ್ಧೆಯಿಂದ ನಂಬಿಕೆಯಿಂದ ಆಚರಿಸುತ್ತಿರುವೆಯಾ? ಅದರಿಂದ ಆನಂದವನ್ನು ಪಡೆಯುತ್ತಿರುವೆಯಾ?

**ಭಕ್ತ:** ಸ್ವಾಮಿ, ನನ್ನಂತಹ ಯಾವನೇ ಭಕ್ತನು ತಮ್ಮ ಅಮೃತೋಪಮವಾದ ಮಾತುಗಳನ್ನು ಪೋಲಾಗಲು ಬಿಡುತ್ತಾನೆಯೆ? ನಿಜವಾದ ಆನಂದವನ್ನು ಪಡೆಯ ಬೇಕೆಂದು ಆಶಿಸುವ ಯಾವನೊಬ್ಬನೂ ತಾವು ಕೃಪೆಯಿಂದ ಅನುಗ್ರಹಿಸುವ ಬೋಧನೆಯನ್ನು ಕಡೆಗಣಿಸುವುದಿಲ್ಲ. ನನಗೆ ಇತರರ ವಿಚಾರ ಗೊತ್ತಿಲ್ಲ. ಆದರೆ ನಾನು ಮಾತ್ರ ಹಗಲು ರಾತ್ರಿ ತಾವು ಆಡಿದ ಮಾತುಗಳನ್ನೇ ನೆನೆಯುತ್ತಿದ್ದೇನೆ, ಧೈರ್ಯದಿಂದಲೂ ನಂಬಿಕೆಯಿಂದಲೂ ಅವುಗಳನ್ನು ಆಚರಿಸುತ್ತಿದ್ದೇನೆ. ಮತ್ತೆ ತಮ್ಮನ್ನು ಸಂಧಿಸುವ ದಿನವನ್ನು ಎದುರು ನೋಡುತ್ತಾ ಸದಾಕಾಲವೂ ಜಾಗರೂಕ ನಾಗಿದ್ದೇನೆ.

**ಸ್ವಾಮಿ :** ಈ ಜಾಗೃತ ಸ್ಥಿತಿಯನ್ನೇ ಭಕ್ತರು ಬೆಳೆಸಿಕೊಳ್ಳಬೇಕಾದುದು. ಪ್ರಪಂಚದ ಚಂಚಲವೂ ಅಲ್ಪವೂ ಆದ ಅವಿವೇಕಯುತವಾದ ವಸ್ತುಗಳಿಗೆ ಮೋಹಿತನಾಗಿ, ಅವುಗಳ ಬೆನ್ನಟ್ಟುತ್ತಾ, ಅವು ಕೈಯಿಂದ ಜಾರಿಹೋದಾಗ ದುಃಖಿಸುತ್ತಾ, ಕೈಗೂಡಿದಾಗ ಸಂತೋಷದಿಂದ ಹಲ್ಲು ಕಿರಿಯುತ್ತಾ ಇರುವುದು ಇದೆಲ್ಲಾ ಅವಿದ್ಯಾಮಾಯೆ. ಆದರೆ ನೀನು ದಿನಗಳನ್ನೆಣಿಸುವುದು, ಅವಕಾಶಕ್ಕಾಗಿ ಕಾಯುವುದು, ಜಾಗೃತನಾಗಿರುವುದು, ಭಗವಂತನ ವಾಣಿಯನ್ನು ಆಲಿಸಲು, ಅವುಗಳ ಸಾರವನ್ನು ಮೈಗೂಡಿಸಿಕೊಳ್ಳಲು ಕಾತರನಾಗಿರುವುದು ಇವೆಲ್ಲಾ ವಿದ್ಯಾಮಾಯೆ. ಭಕ್ತರು ಈ ಮಾಯೆಗೆ ವಶವಾದರೆ, ಅವರು ಒಂದಲ್ಲ ಒಂದು ದಿನ ತಪ್ಪದೆ ಗುರಿಯನ್ನು ಮುಟ್ಟುತ್ತಾರೆ. ಆದ್ದರಿಂದ ಈ ವಿದ್ಯಾಮಾಯೆಯು ನಿನ್ನನ್ನು ಬೆಳಗಿರುವುದರಿಂದ ನೀನು ಸುದೈವಿ. ಇದನ್ನೇ ಬೆಳೆಸಿಕೊ. ಯಾವುದೇ ಕಾರಣಕ್ಕೂ ಅದನ್ನು ಎಷ್ಟು ಮಾತ್ರಕ್ಕೂ ಬಿಡಬೇಡ, ಅಥವಾ ತಗ್ಗಿಸಬೇಡ. ನೀನು ಖಂಡಿತವಾಗಿ ಪವಿತ್ರನಾಗುವೆ. ಪರಿಪೂರ್ಣತೆಯನ್ನು ಪಡೆದು ಗುರಿ ಮುಟ್ಟುವೆ.

**ಭಕ್ತ:** ಸ್ವಾಮಿ, ಕಳೆದ ತಿಂಗಳು 'ನಾನು' ಎನ್ನುವುದು ಯಾರು ಎಂಬ ವಿಚಾರವಾಗಿ ಹೇಳುತ್ತೇನೆ ಎಂದು ತಿಳಿಸಿದ್ದಿರಿ. ಅದನ್ನು ನಾನು ತಿಳಿದುಕೊಂಡು, ನನ್ನಲ್ಲಿರುವ ಭ್ರಮೆಯನ್ನು ಹೋಗಲಾಡಿಸಿಕೊಳ್ಳಬೇಕು. ಸಂದೇಹದ ಅತಿ ಸಣ್ಣ ಎಳೆಯೂ ಇಲ್ಲದೆ ತಮ್ಮನ್ನು ಧ್ಯಾನಿಸಿ ಅನುಗ್ರಹೀತನಾಗಬೇಕು. ಅದಕ್ಕಿಂತ ದೊಡ್ಡ ಅದೃಷ್ಟ ನನಗೆ ಬೇರೆ ಯಾವುದಿದೆ?

**ಸ್ವಾಮಿ :** ಒಳ್ಳೆಯದು, ಮಗು! 'ನಾನು'ವಿನ ನಿಜವಾದ ಸ್ವರೂಪವನ್ನು ಕುರಿತು ಮಾತನಾಡುವುದು, ತುಂಬಾ ಸುಲಭ; ಆದರೆ ಅದನ್ನು ಅನುಭವಕ್ಕೆ ತಂದುಕೊಂಡ, ಹೊರತು ಪೂರ್ಣ ತೃಪ್ತಿ ಅಸಾಧ್ಯವಾಗುತ್ತದೆ. ನನಗೆ ತೃಪ್ತಿಯಾಗುವಷ್ಟು ಮಟ್ಟಿಗೆ ಅದನ್ನು ಕುರಿತು ಹೇಳುವುದಕ್ಕಾಗಲಿ, ನಿನಗೆ ಆದ ಪೂರ್ಣ ಅರ್ಥವನ್ನು ಗ್ರಹಿಸುವುದಕ್ಕಾಗಲಿ ಸ್ವಲ್ಪ ಸಮಯ ಅಗತ್ಯವಾಗುತ್ತದೆ. ಈ ತಿಂಗಳು ನನಗಿರುವ ಸಮಯ ಏನೇನು ಸಾಲದು. ಎಲ್ಲಾ ಸಮಯನ್ನು ಭಕ್ತರ ಆನಂದಕ್ಕಾಗಿಯೇ ನಾನು ಉಪಯೋಗಿಸುತ್ತಿದ್ದೇನೆ. ನನ್ನ ಸ್ವಂತದ್ದೆನ್ನುವುದು ಏನೂ ಇಲ್ಲ. ನನ್ನ ಭಕ್ತರಿಗೆ ಉಪಯೋಗವಾಗುವಂತಿರುವುದೇ ನನ್ನ ಸ್ವಾರ್ಥಪೂರಿತ ಉದ್ದೇಶ. ಹೋದ ತಿಂಗಳು ಪೂರ್ತಿಯಾಗಿ ನೆಲ್ಲೂರು, ಗೂಡೂರು, ವೆಂಕಟಗಿರಿ ಮತ್ತು ಸುತ್ತಲಿನ ಹಳ್ಳಿಗಳಿಗೆ ಹೋಗಿದ್ದೆ. ಆಮೇಲೆ ಬೆಂಗಳೂರಿಗೆ ಹೋಗಿ ಹಿಂದಿರುಗಿ ಬಂದೆ. ದೊರಕಿದ ಅಲ್ಪ ಅವಕಾಶವನ್ನು ಪ್ರೇಮವಾಹಿನಿಗೆ ಉಪಯೋಗಿಸಿದೆ! ಈ ತಿಂಗಳು ಹೈದರಾಬಾದ್, ರಾಜಮಂಡ್ರಿ, ಸಮರ್‌ಕೋಟ್, ಚೆಬ್ರೋಲು, ನೂಜವೀಡು ಮೊದಲಾದ ಸ್ಥಳಗಳಿಗೆ ಹೋಗಬೇಕು. ಸಮಯ ದೊರಕುವುದಿಲ್ಲ. ಹಾಗೂ ಮುಂದಿನ

ತಿಂಗಳು 'ನೀನು' ಯಾರು ಎನ್ನುವುದನ್ನು ನಿನಗೆ ತೃಪ್ತಿಯಾಗುವಂತೆ ಹೇಳುತ್ತೇನೆ. ಸದ್ಯಕ್ಕೆ ಜಾನಪದ ಗೀತೆಯಂತಿರುವ ಈ ಹಾಡಿನ ಅರ್ಥವನ್ನು ಗ್ರಹಿಸಲು ಪ್ರಯತ್ನಿಸು. 'ನೀನು' ಎನ್ನುವ ಇದು ಯಾರು ಎಂಬುದು ಇದರಿಂದ ಬಹುಮಟ್ಟಿಗೆ ಅರ್ಥವಾಗುತ್ತದೆ. ಇದರಿಂದ ನಿನಗೆ ಬಹುವಾದ ವೈರಾಗ್ಯವೂ ದೊರಕಬಹುದು. ಆಗ ನಾನು ಹೇಳುವುದನ್ನು ಹೆಚ್ಚು ಸ್ಪಷ್ಟವಾಗಿಯೂ ಸುಲಭವಾಗಿಯೂ ನೀನು ಅರ್ಥ ಮಾಡಿಕೊಳ್ಳುವೆ. ಈ ಹಾಡನ್ನು ಸುಮ್ಮನೆ ಓದಿಬಿಡಬೇಡ. ಪ್ರತಿಯೊಂದು ಪದದ ಅರ್ಥವನ್ನು ಕುರಿತು ಆಲೋಚನೆ ಮಾಡು. ಈ ಹಾಡು ನಿಜವಾಗಿಯೂ ನಿನ್ನ ಬುದ್ಧಿಯನ್ನು ಕಲಕುತ್ತದೆ.

**ಭಕ್ತ:** ಸರಿ ಸ್ವಾಮಿ, ಅದನ್ನಾದರೂ ಅನುಗ್ರಹಿಸಿ, ನನ್ನ ಆಸೆಯನ್ನು ಪೂರೈಸಿಕೊಳ್ಳುತ್ತೇನೆ. ಆ ಅಮೃತವನ್ನು ಪಾನ ಮಾಡಿ ಅರಗಿಸಿಕೊಳ್ಳುತ್ತೇನೆ.

ಸ್ವಾಮಿ: ಗಮನವಿಟ್ಟು ಕೇಳು

ಥೈ ಥೈ ಥೈ ಥೈ! ಥೈ
ಈ ಗೊಂಬೆಯ ತಮಾಷೆ ಆಟವನ್ನು ನೋಡು.
ಓ ಜೀವ, ಅದರ ಭೂತ, ಭವಿಷ್ಯತ್ತುಗಳ
ದೀರ್ಘ ಕತೆಯ ಕೇಳು, ಹಿಂದು ಮುಂದುಗಳನ್ನು ಆಲಿಸು! ॥೧॥

ಮೊದಲಿದು ತಾಯಗರ್ಭದ ಮಾಂಸಲ ಜವುಗಿನಲ್ಲಿ
ಹೊರಳಾಡಿತು. ಆ ಜೈಲು ಕಗ್ಗತ್ತಲು.
ಅದು ಅಳುತ್ತಾ ಹೊರ ಬಂದಿತು, ಆದರೆ ಸುತ್ತಲಿದ್ದ
ಜನರೆಲ್ಲ ನಕ್ಕರು, ಸಂತೋಷಪಟ್ಟರು, ಹಬ್ಬವನ್ನಾಚರಿಸಿದರು ॥೨॥

'ಅಯ್ಯೋ ದುರಂತವೆ! ಮತ್ತೆ ಹುಟ್ಟಿದೆನಲ್ಲಾ'
ಅದಕ್ಕೆ ತಿಳಿದಿತ್ತು. ಜೋರಾಗಿ ದೀರ್ಘವಾಗಿ ಅತ್ತಿತು.

ಆದರೆ ಉದ್ದಕ್ಕೂ ಅವರು ಮುದ್ದಾಡಿದರು
ನಗಿಸುವ ಸಲುವಾಗಿ ನಕ್ಕರು! ॥೩॥

ನಾಚಿಕೆಯಿಲ್ಲದೆ ಅದು ತನ್ನ ಗಲೀಜಿನಲ್ಲಿ ತಾನೇ
ಹೊರಳಾಡಿತು. ಎದ್ದಿತು, ಬಿದ್ದಿತು, ಪ್ರತಿ ಹೆಜ್ಜೆಯಲ್ಲೂ
ದಿನಕ್ಕೊಂದು ಬಾಲ ಸಹಜ ಆಟವನ್ನು ತೋರಿಸಿತು ॥೪॥

ಓಡುತ್ತದೆ, ನೆಗೆಯುತ್ತದೆ, ಓರಗೆಯವರೊಂದಿಗೆ
ಕುಣಿದು ನೂರಾರು ಕೌಶಲಗಳನ್ನು ವ್ಯವಹಾರಗಳನ್ನು
ಕಲಿಯುತ್ತದೆ; ಎತ್ತರವಾಗಿ, ದಪ್ಪವಾಗಿ, ಅಗಲವಾಗಿ
ವರ್ಷದಿಂದ ವರ್ಷಗಳು ಬೆಳೆದು ವೇಗವಾಗಿ...
ಸುಂದರವಾಗಿ ನಿಲ್ಲುತ್ತದೆ ॥೫॥

ಜೊತೆಗೂಡಿ ನಡೆಯುತ್ತದೆ, ನಗುತ್ತದೆ ಸಲ್ಲಪಿಸುತ್ತದೆ
ಗುಲಾಬಿ ಮಳೆಬಿಲ್ಲ ಶೈಲಿಯಲಿ; ಮೊದಲು
ಕೇಳಿರದ ರಾಗಗಳಲ್ಲಿ ಹಾಡುತ್ತದೆ
ವಿಶಿಷ್ಟವೂ, ವಿಚಿತ್ರವೂ ಆದ ರೀತಿಯಲ್ಲಿ ಬಟ್ಟಲು ತುಂಬುತ್ತದೆ ॥೬॥

ಬ್ರಹ್ಮ ಈ ಗೊಂಬೆಗಳ ಜೋಡಿಯಲ್ಲಿ ಸೃಷ್ಟಿಸುವ,
ಲಕ್ಷ ಲಕ್ಷೋಪಲಕ್ಷ ಗೊಂಬೆಗಳ ಮೂಡಿಸುವ
ಆದರೇನು ನಮ್ಮ ಗೊಂಬೆಗೆ ಇದು ತಿಳಿಯದೆ
ಇತರ ಗೊಂಬೆಗಳೊಡನೆ ಕುಣಿಯುತ್ತದೆ ಧಿಂ! ಧಿಂ! ಧಿಂ! ॥೭॥

ಈ ಮಾಯಾ ಗೊಂಬೆಯು ಪವಿತ್ರ ನದಿಯಂತೆ
ತಮಸ್ಸಿನ ಮೂಗುದಾರವಿದೆ ಇದಕ್ಕೆ
ಕಾಮ ಕ್ರೋಧಗಳ ಚಾವಟಿಗಳು
ಗುಲಾಮರ ಬೆನ್ನು ಸುಲಿಯುತ್ತವೆ ॥೮॥

ಇತರರು ಕಂಪಿಸುತ ತನ್ನೆದುರು ನಿಂತಾಗ
ಹಲ್ಲು ಕಿರಿದು ಬೀಗುತ್ತದೆ;
ಅವರಿಗೆ ನೋವು ಕೊಡುತ್ತದೆ; ನೋವಿನ ಕಣ ಮಾತ್ರ
ತಾನು ಹಂಚಿಕೊಳ್ಳದು! ॥೯॥

ಬಯ್ಯುತ್ತದೆ, ಕಿರಿಚುತ್ತದೆ, ಕೋಲೆತ್ತಿ ಕೂಗುತ್ತದೆ
ಕೆಂಡಗಣ್ಣಾಗಿ ಬುಸುಗುಟ್ಟುತ್ತದೆ.
ಅಹಂಕಾರದ ದೆವ್ವ ಹತ್ತಿ ಅದು ಕುಣಿಯುವುದು
ಆಶ್ಚರ್ಯದ ದೃಶ್ಯ! ॥೧೦॥

ಅಲೆಯುತ್ತದೆ, ಮಾತಾಡುತ್ತದೆ, ಬರೆಯುತ್ತದೆ,
ಯಾವ ಕಾರಣಕಾಗಿ ತಿಳಿಯದು,
ಹೊಟ್ಟೆಗೆ, ನಲಿವಿಗೆ ಬಾಚಿಕೊಳ್ಳಲು
ಅಲೆದಾಡುತ್ತದೆ ॥೧೧॥

ಅಷ್ಟೊಂದು ಪುಸ್ತಕಗಳ ಹೊಟ್ಟೆಯಲಿ ಹೊತ್ತ
ಈ ವಿಚಿತ್ರ ಪುಟ್ಟ ಗೊಂಬೆಯ ನೋಡು
ವಿದ್ಯಾವಂತ ಗೊಂಬೆಯೊಂದು ಇದಿರಾದರೆ
ಹೊಟ್ಟೆ ಕಿಚ್ಚಿನಲಿ ನುಲಿಯುವುದು ॥೧೨॥

ನಾಚಿಕೆಗೇಡಿನ ಕಾಮವು ಕೆರಳಿದಾಗ
ಅದು ರಹಸ್ಯವಾಗಿ ಉಸುರುವುದ ನೀ ಕೇಳಬೇಕು.
ದುಷ್ಟ ಲೋಭದ ಪಾಪ ಕಾರ್ಯದಲ್ಲಿ
ತೃಪ್ತಿ ಪಡೆಯುವುದ ನೋಡಬೇಕು! ॥೧೩॥

ಗರ್ವದಲಿ ತನ್ನ ಬೆನ್ನ ತಾನೇ ತಟ್ಟುವುದು!
ಸೌಂದರ್ಯ, ಸಾಮರ್ಥ್ಯ, ದೇಹದಾರ್ಢ್ಯ
ಅದರುದ್ದಕೂ ಹೆಜ್ಜೆ ಹೆಜ್ಜೆಯಲಿ
ಸಾಗುತಿದೆ ಮುಪ್ಪಿನ ತೆರೆ ॥೧೪॥

ಸುಕ್ಕುಗಳು, ಮಡಿಕೆಗಳ ನಡುವೆ ತತ್ತರಿಸುವುದು
ಕಣ್ಣ ಪಿಳುಕಿಸುವುದು; ಮಕ್ಕಳೇನಾದರೂ 'ಮುದಿಕಪಿ'
'ಮುದಿಕಪಿ!' ಎಂದು ಕೂಗಿದಾಗ ಹಲ್ಲಿರದ ಬಾಯಿಂದ
ನಗುವುದು, ಮೂಳೆಗಳನು ಕರಕರನೆ ಸದ್ದು ಮಾಡುವುದು! ॥೧೫॥

ಕೊಟ್ಟ ಕೊನೆಯವರೆಗೂ ಹೆದರಿಕೆಯಲಿ,
... ಸವೆತದಲಿ, ದುಃಖ ಕಣ್ಣೀರುಗಳಲಿ ಮುಳುಗುವುದು!
ಯಾತಕ್ಕಾಗಿ ಓ ಡಮ್ಮಿ ಗೊಂಬೆಯೆ ನಿನ್ನ ನರಳಿಕೆ ಏಕೆ!
ಕೊನೆಯ ಮುಟ್ಟಲೇಬೇಕಲ್ಲ ॥೧೬॥

ಆಹಾ! ರೆಕ್ಕೆಗಳ ಬಡಿಯುತಿದೆ!
ಹಾರುತಿದೆ ಬರ್‌ರ್‌ರ್... ಚರ್ಮದ ಪಂಜರದಿನಾಚೆ!
ಖಾಲಿಯಾಯಿತು ಬಿಗಿಯುತ್ತದೆ; ತೆರವಾಯಿತು ಸೆಳೆಯುತ್ತದೆ;
ಆಚೆಗೆಳೆದು ಹಾಕಿ ಇಲ್ಲದಿರೆ ಊದಿಕೊಳುವುದು,
ಕೊಳೆತು ನಾರುವುದು ॥೧೭॥

ಪಂಚಭೂತಗಳು ತಮ್ಮ ಮೂಲಗಳ ಸೇರುವುವು;
ಗೊಂಬೆ ಬಯಕೆಗಳು ಧೂಳಾಗುವುವು ಬೂದಿಯಾಗುವುವು;
ಅಳುವಿರೇಕೆ ಮೂರ್ಖರಿರ, ತುಂಬಿದ ರಂಗಮಂಚದ ಮೇಲೆ
ನಿಮ್ಮಲೇ ಒಬ್ಬ ಕುಸಿದು ಬಿದ್ದಾಗ? ॥೧೮॥

ಚಿಕ್ಕಪ್ಪಗಳು, ದಾಯಾದಿಗಳು, ಚಿಕ್ಕಮ್ಮಗಳು, ಮಿತ್ರರು
ಎಲ್ಲರೂ ಕೊಠಡಿಯ ಬಾಗಿಲವರೆಗೆ ತಲೆತಗ್ಗಿಸಿ ನಡೆವರು.
ಮಾಯಾಗೊಂಬೆಯೋ ತನ್ನ ನಿಜ ಬಂಧುವನು
ದಿವ್ಯನಾಮದ ನಿಜದ ಮೋಕ್ಷದಾಯಕನ ಮರೆಯಿತೆ? ॥೧೯॥

ಓ ಜೀವ, ಈ ತೆಳುವು ಕೊಳವೆಗೆ ಆತು ನಿಲ್ಲದಿರು;
ಒಮ್ಮೆ ಸೀನಿದರೆ ಸಾಕು! ಈ ದುರ್ಬಲ ಚರ್ಮದ ದೋಣಿ
ಒಂಬತ್ತು ಬಿರುಕುಗಳ ದೋಣಿ
ನದಿಯ ನಡುವೆಯೇ ಮುಳುಗಿಸುವುದು ನಿನ್ನ! ॥೨೦॥

ಅಗೋಚರ ಹಸ್ತದ ಸೂತ್ರ ಎಳೆದಾಗ
ಈ ಗೊಂಬೆ ಅಳುವುದು, ನಿದ್ರಿಸುವುದು–ಎಚ್ಚರುವುದು
ಹಿಂದೆ ನಿಂತು ಸೂತ್ರ ಎಳೆವವನು ಭಗವಂತ.
ಆದರೇನೀಗೊಂಬೆ ಸಾರಿಹೇಳುವುದು ನಾನು, ನಾನು, ನಾನು! ॥೨೧॥

ಧರ್ಮಕರ್ಮಗಳು ಗಟ್ಟಿ ನೂಲುಗಳು
ಅವನು ಬಿಗಿಪಡಿಸುವನು ಅಥವಾ ಸಡಲಗೊಳಿಸುವನು.
ಇದನರಿಯದೆಯೇ ಗೊಂಬೆ ಹಲಗೆಗಳ ಮೇಲೆ ಕುಣಿಯುವುದು
ಅಡ್ಡ–ತಿಡ್ಡ ತತ್ತರಿಸುವುದು ॥೨೨॥

ಜಗವು ಸ್ಥಿರವೆಂದು ಭಾವಿಸುವುದೀ ಅವಿವೇಕಿ ಗೊಂಬೆ!
ಒಂದೇ ಸಾರಿ ಕಣ್ಣು ಮಿಟುಕು, ಅಷ್ಟರಲಿ ಅವ ಆಟವನು
ಮುಗಿಸುವನು! ಗರ್ವ–ಆಡಂಬರಗಳು ಕಣ್ಮರೆಯಾದಾವು! ॥೨೩॥

ಓ ಜೀವ, ಇರುವೆ, ಹಾವು, ಹಕ್ಕಿಗಳ ನಡುವೆ
ಅಲೆದಾಡಿರುವೆ; ತಡಮಾಡದಲೆ ಶಾಶ್ವತ ಆನಂದದ
ದಾರಿಯನು ಹುಡುಕು, ಕಂಡುಹಿಡಿ ॥೨೪॥

ನಿನ್ನ ಸುದೈವ! ಈಗ ನೀನು ನೋಡುವೆ
ಸಾಯಿಕೃಷ್ಣನ, ಆತ ಬಂದಿಹನು
ಅವನ ಬಳಿ ಸಾಗಿ, ನಿನ್ನ
ಏನು, ಏಕೆ, ಹೇಗೆಗಳ ನೀನರಿಯುವೆ ॥೨೫॥

ಜಾಣತನದ ಲಕ್ಷಲಕ್ಷ ಮಾತುಗಳು ನಿನ್ನ
ಹಸಿವೆಯ ಕೂಗ ತಣಿಸುವವೆ?
ಬದಲು ಆತ್ಮ ದೀಪವ ಬೆಳಗು
ಬಂಧನವ ಕಳಚಿ ಓಡಿ–ಆಡು ॥೨೬॥

ಈ ಡಮ್ಮಿ ಗೊಂಬೆಯ ಹಾಡು ಜೀವನ
ದುಃಖಿಯಾಗೂ ಜಾಣನಾಗೂ ಬದಲಿಸುವುದು! ನಾ ಬಲ್ಲೆ;
ಆದರೆ, ಜೀವ! ಸತ್ಯಸಾಯಿನಾಥನ ದಿವ್ಯಲೀಲೆಯ ನೊಡು
... ನಿನ್ನನ್ನೇ ನೀ ಕಾಣು ॥೨೭॥

**ಭಕ್ತ:** ಆಹಾ! ಅರ್ಥವಾಯಿತು! ಸ್ಪಷ್ಟವಾಗಿ ನನಗೆ ಅರ್ಥವಾಯಿತು. 'ನಾನು' ದೇಹವಲ್ಲ, ಬುದ್ಧಿಯಲ್ಲ, ಮನಸ್ಸಲ್ಲ ಅಥವಾ ಚಿತ್ತವಲ್ಲ. ಈ ಯಾವುದೇ ಒಂದು

ಅಲ್ಲದಾಗ 'ನಾನು' ಆತ್ಮವೇ ಆಗಿರಬೇಕು. 'ನಾನು' ಆತ್ಮವಾದರೆ, ಆಗ 'ನಾನು' ಪರಮಾತ್ಮ ಕೂಡ. ಸಮಸ್ತವೂ ಪರಮಾತ್ಮನೇ! ಇದೆಲ್ಲವನ್ನೂ ಅರ್ಥಮಾಡಿ ಕೊಂಡೆ. ಅಜ್ಞಾನವಶನಾಗಿ 'ನಾನು' ಎನ್ನುವುದು ಈ ದೇಹ, ಈ ಬುದ್ಧಿ ಎಂದು ಭ್ರಮಿಸಿ ಎಷ್ಟೆಲ್ಲಾ ದುಃಖ ಸಂಕಟಗಳನ್ನು ಅನುಭವಿಸುತ್ತಿದ್ದೇವೆ. ನಿಜ, ನಿಜ. ತಾವು ಹೇಳಿದ ಎಲ್ಲಾ ಹಂತಗಳನ್ನು ಒಂದಾದ ಮೇಲೊಂದರಂತೆ, ಸರದ ಮಣಿಗಳಂತೆ ಸರಿಸಿ ದಾಟಿಹೊಗುತ್ತಿದ್ದೇವೆ. ಓಹ್! ಎಂತಹ ಸತ್ಯ! ಎಂತಹ ಸತ್ಯ! ಇದೊಂದು ಹಾಡನ್ನು ಕೇಳಿದರೆ ಸಾಕು, ಬುದ್ಧಿಯು ತಾವು ಹೇಳಿದ ಹಾಗೆ ವೈರಾಗ್ಯದತ್ತ ತಿರುಗುತ್ತದೆ... ಸ್ವಾಮಿ, ಮೊದಲು ತಾವು ಸಮಯವಿಲ್ಲ ಎಂದು ಹೇಳಿದಾಗ ನನಗೆ ತುಂಬಾ ನಿರಾಶೆಯಾಗಿತ್ತು. ಆದರೆ ಅದು ನನ್ನ ಅಜ್ಞಾನ. ಸ್ವಾಮಿಯು ಯಾರನ್ನೂ, ಎಂದಿಗೂ ನಿರಾಶೆಗೊಳಿಸುವುದಿಲ್ಲ ಎಂದು ನನಗೆ ಗೊತ್ತಿತ್ತು. ಈಗ ನೀವು ಇನ್ನೂ ಹೆಚ್ಚಿನ ಆನಂದವನ್ನು ನನಗೆ ಅನುಗ್ರಹಿಸಿದ್ದೀರಿ, ಸಿಕ್ಕಬಹುದೆಂದು ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಿನ ಆನಂದ ದೊರೆತಿದೆ. ತಮ್ಮ ಕೃಪೆಯನ್ನು ಏನೆಂದು ವರ್ಣಿಸಲಿ? "ಒಂದು ಹನಿ ಕಣ್ಣೀರಿಗೆ ಸಾಯಿ ಕರಗುವನು" ಎಂದು ಹಾಡುತ್ತಾರೆ. ಆ ಮಾತುಗಳ ಸತ್ಯದ ಸಮರ್ಥನೆ ನನಗೆ ಕಂಡಿದೆ. ಈಗ ನಾನು ಹೋಗಿಬರಲೆ?

**ಸ್ವಾಮಿ:** ಒಳ್ಳೆಯದು ಹೋಗಿ ಬಾ. ನನಗೂ ಬಿಡುವಿಲ್ಲ. ಅವರವರ ಸ್ಥಳಗಳಿಗೆ ಹೊರಟಿರುವವರನ್ನು ನೋಡಿ ಕಳುಹಿಸಿಕೊಡಬೇಕು.

# ಅಧ್ಯಾಯ ೬

**ಭಕ್ತ:** ನಮಸ್ತೆ, ಸ್ವಾಮಿ !

**ಸ್ವಾಮಿ:** ಶುಭಮಸ್ತು.

**ಭಕ್ತ:** ತಮ್ಮ ಕೃಪೆಯಿಂದ ಎಲ್ಲವೂ ಶುಭ; ಅದಿಲ್ಲದೆ ಎಲ್ಲವೂ ಅಶುಭ.

**ಸ್ವಾಮಿ:** ಒಳ್ಳೆಯದು, ಇವೆರಡೂ ಭಗವತ್ಕರುಣೆಯನ್ನು ಹೇಗೆ ಅವಲಂಬಿಸಿ ಕೊಂಡಿವೆ ಎನ್ನುವುದು ನಿನಗೆ ಅರ್ಥವಾಗಿದೆಯೆ? ಒಂದರಲ್ಲಿ ಎರಡೂ ಇವೆ; ಎರಡನ್ನೂ ಅನುಗ್ರಹಿಸುವುದು ಅದೇ ಭಗವತ್ಕರುಣೆಯೇ. ಇರಲಿ, ಆ ವಿಚಾರವನ್ನು ಬದಿಗಿರಿಸೋಣ. ಕಳೆದ ಸಾರಿ ನೀನೊಂದು ಜಾನಪದ ಹಾಡನ್ನು ಕೇಳಿದೆ. ಅದು

ನಿನ್ನ ಚಿಂತನೆಯ ಮೇಲೆ ಆಳವಾಗಿ ಪರಿಣಾಮವನ್ನು ಉಂಟುಮಾಡಿರಬಹುದು. ಈಗ ನಿನ್ನ ಬುದ್ಧಿ ಸಮಸ್ಥಿತಿಯ ಯಾವ ಹಂತದಲ್ಲಿದೆ?

**ಭಕ್ತ:** ನನಗೀಗ ಎಲ್ಲವೂ ಗೊಂಬೆಯಾಟದಂತೆ ತೋರುತ್ತಿದೆ ಸ್ವಾಮಿ. ಆದರೆ ಆಗಾಗ ಅಷ್ಟೆ. ಮನಸ್ಸು ಅದನ್ನು ಮರೆತು ವಸ್ತುಮೋಹಕ್ಕೆ ವಶವಾಗಿಬಿಡುತ್ತದೆ. ಇದೆಂಥ ವಿಚಿತ್ರ ರಹಸ್ಯ ಸ್ವಾಮಿ?

**ಸ್ವಾಮಿ :** ಮನಸ್ಸಿಗೆ ಎಲ್ಲಾ ಬಗೆಯ ಚಟುವಟಿಕೆಗಳು ಅಥವಾ ವೃತ್ತಿಗಳು ಇವೆ. ಅದು ಯಾವಾಗಲೂ ವಾಸನೆಗಳ ಅಥವಾ ಹುಟ್ಟರಿವು ಮತ್ತು ಆವೇಗಗಳ ಜಾಡು ಹಿಡಿದು ಹೋಗುತ್ತದೆ. ಇದು ಅದರ ಪ್ರಭಾವವೇ ಆಗಿದೆ.

**ಭಕ್ತ:** ಅಂದರೆ ಅದನ್ನು ಸರಿಪಡಿಸಲು ಸಾಧ್ಯವಿಲ್ಲ ಎಂದು ತಾನೆ? ಹಾಗಾದರೆ ಆಸೆಯೇ ಇಲ್ಲವೆ? ಅಂತಿಮವಾಗಿ ನಾವು ವಾಸನೆಗಳಲ್ಲಿ ಮುಳುಗಿ ಅವನತಿ ಹೊಂದಬೇಕೆ?

**ಸ್ವಾಮಿ :** ಆಸೆಯಿದೆ ಮಗು! ಅದರಲ್ಲಿ ಮುಖ್ಯವಾಗಿ ಕಳೆದು ಹೋಗುವ ಅಗತ್ಯವಿಲ್ಲ. ಅದು ಮನಸ್ಸಿನ ಸ್ವರೂಪವಾದರೂ ಅದನ್ನು ಬದಲಾಯಿಸಬಹುದು. ಏನು ತಗುಲಿದರೂ ಅದನ್ನು ಕಪ್ಪಾಗಿಸುವ ಗುಣ ಇದ್ದಲಿಗೆ ಇದೆ. ಆದರೆ ಅದೇ ಅಂತಿಮವಲ್ಲ. ಅದಕ್ಕೆ ಬೆಂಕಿ ತಾಗಿದಾಗ ಇದ್ದಿಲು ಕಾದು ಕೆಂಡವಾಗುತ್ತದೆ. ಹಾಗೆಯೇ ಮನಸ್ಸು ಯಾವಾಗಲೂ ಭ್ರಮೆಯ ಕತ್ತಲಲ್ಲಿ ಅಲೆದಾಡುತ್ತಿದ್ದರೂ ಭಗವಂತನ ಕೃಪೆಯಿಂದ ಜ್ಞಾನವು ಅವನಲ್ಲಿ ಪ್ರವೇಶಿಸಿದರೆ ಅದರ ಸ್ವರೂಪ ಬದಲಾಗುತ್ತದೆ. ದೈವತ್ವಕ್ಕೆ ಸೇರಿದ ಸಾತ್ವಿಕ ಗುಣವು ಅದಕ್ಕೆ ಬರುತ್ತದೆ.

**ಭಕ್ತ:** ಸ್ವಾಮಿ, ಅಂತಃಕರಣ ಎಂಬುದನ್ನು ಕುರಿತು ಮಾತನಾಡುತ್ತಾರೆ. ಅದೇನು?

**ಸ್ವಾಮಿ :** ಮನಸ್ಸನ್ನೇ ಆ ಹೆಸರಿನಿಂದ ಉಲ್ಲೇಖಿಸುತ್ತಾರೆ. ಕರಣ ಎಂದರೆ ಇಂದ್ರಿಯ. ಅಂತಃಕರಣ ಎಂದರೆ ಒಳಗಿರುವ ಇಂದ್ರಿಯ.

**ಭಕ್ತ:** ಹಾಗಾದರೆ ಒಳಗಿನ ಇಂದ್ರಿಯಗಳು ಹೊರಗಿನ ಇಂದ್ರಿಯಗಳು ಎಂದು ಎರಡು ಬಗೆಯಾಗಿವೆಯೆ ಸ್ವಾಮಿ?

**ಸ್ವಾಮಿ :** ಹೌದು, ಹೊರಗಿನ ಇಂದ್ರಯಗಳನ್ನು ಕರ್ಮೇಂದ್ರಿಯಗಳೆಂದು ಕರೆಯುತ್ತಾರೆ; ಒಳಗಿನ ಇಂದ್ರಿಯಗಳನ್ನು ಜ್ಞಾನೇಂದ್ರಿಯಗಳೆಂದು ಕರೆಯುತ್ತಾರೆ.

**ಭಕ್ತ:** ಸ್ವಾಮಿ, ಕರ್ಮೇಂದ್ರಿಯಗಳು ಯಾವುವು, ಜ್ಞಾನೇಂದ್ರಿಯಗಳು ಯಾವುವು ಎಂಬುದನ್ನು ದಯವಿಟ್ಟು ಹೇಳಿ.

**ಸ್ವಾಮಿ:** ಒಳ್ಳೆಯದು, ದೈಹಿಕವಾದ ಎಲ್ಲಾ ಕೆಲಸಗಳು ಕರ್ಮೇಂದ್ರಿಯಗಳ ಮೂಲಕ ನಡೆಯುತ್ತವೆ. ಅವು ಐದು. ಒಳಗಿನಿಂದ ಜ್ಞಾನವನ್ನು ನೀಡುವಂಥವು ಜ್ಞಾನೇಂದ್ರಿಯಗಳು. ಇವು ಶ್ರವಣ, ಸ್ಪರ್ಶ, ದೃಷ್ಟಿ, ರುಚಿ ಮತ್ತು ವಾಸನೆ. ಇವಿಷ್ಟೂ ಸೇರಿ ದಶೇಂದ್ರಿಯಗಳೆನಿಸುತ್ತವೆ.

**ಭಕ್ತ:** ಇವೆರಡೂ ಸೇರಿ ಯಾವ ಕೆಲಸ ಮಾಡುತ್ತವೆ? ಅವುಗಳ ಚಟುವಟಿಕೆಗಳಿಗೂ ಮನಸ್ಸಿಗೂ ಇರುವ ಸಂಬಂಧವೇನು?

**ಸ್ವಾಮಿ:** ನಿಜವಾಗಿ ಹೇಳುವುದಾದರೆ, ಅವು ಏನನ್ನೇ ಮಾಡಿದರೂ ಮನಸ್ಸಿನ ಮಧ್ಯಸ್ಥಿಕೆಯಿಲ್ಲದೆ ಮಾಡಲಾರವು. ಕರ್ಮೇಂದ್ರಿಯಗಳು ಈ ಪ್ರಪಂಚದಲ್ಲಿ ಕೆಲಸ ಮಾಡಿ ಅರಿವನ್ನು ಪಡೆಯುತ್ತವೆ. ಜ್ಞಾನೇಂದ್ರಿಯಗಳು ಒಳಿತು ಕೆಡುಕುಗಳನ್ನು ವಿವೇಚಿಸಿ ಮನಸ್ಸಿನ ಮೂಲಕ ಆತ್ಮಕ್ಕೆ ಒಪ್ಪಿಸುತ್ತವೆ. ಮನಸ್ಸು ಇರದಿದ್ದರೆ ಅವು ಸಂವಹಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಪ್ರವಾಹ ಉಕ್ಕಿ ಹರಿಯುತ್ತಿರುವ ನದಿಯನ್ನು ದಾಟಿ ಆಚೆ ದಡ ಸೇರಬೇಕಾದರೆ ಒಂದು ದೋಣಿ ಅಥವಾ ತೆಪ್ಪ ನಮಗೆ ಅಗತ್ಯವಾಗುತ್ತದೆ. ಅದರ ಮಾಧ್ಯಮವನ್ನು ನಾವು ಅವಲಂಬಿಸುತ್ತೇವೆ. ಪ್ರಕೃತಿಗೆ ಸಂಬಂಧ ಪಟ್ಟ ಕರ್ಮೇಂದ್ರಿಯಗಳೂ ಜ್ಞಾನೇಂದ್ರಿಯಗಳೂ ಆತ್ಮವನ್ನು ಪಡೆ ಯಲು ಬಯಸಿದಾಗ ಮನಸ್ಸೆಂಬ ದೋಣಿಯ ನೆರವನ್ನು ಅವು ಒಪ್ಪಿಕೊಳ್ಳಲೇ ಬೇಕು. ಇಲ್ಲವಾದರೆ ಆತ್ಮದ ಬಳಿಗೆ ಅವು ಹೋಗಲಾರವು.

**ಭಕ್ತ:** ಹಾಗಾದರೆ ತಾವು ಹೇಳಿದ ಬುದ್ಧಿ, ಚಿತ್ತ, ಅಹಂಕಾರ ಇವೆಲ್ಲ ಎಲ್ಲಿವೆ?

**ಸ್ವಾಮಿ:** ಅವೂ ಇಲ್ಲೇ ಇವೆ. ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳು ಒಟ್ಟಾಗಿ ದಶೇಂ ದ್ರಿಯಗಳು ಎನಿಸುತ್ತವೆ. ಇವುಗಳಲ್ಲಿ ನಾಲ್ಕನ್ನು ವಿಶೇಷವಾಗಿ ಅಂತಃ ಚತುಷ್ಟಯ, ಒಳಗಿನ ನಾಲ್ಕು ಇಂದ್ರಿಯಗಳು ಎಂದು ಕರೆಯುತ್ತಾರೆ ಅವೇ ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರ.

**ಭಕ್ತ:** ತುಂಬಾ ಚೆನ್ನಾಗಿದೆ. ಅಂದರೆ ಇವೆಲ್ಲಾ ಒಂದೇ. ಜೀವನವೇ ತಮಾಷೆ ಯಾಗಿದೆ. ಸ್ವಾಮಿ ಈ ನಾಲ್ಕರ ಕರ್ತವ್ಯಗಳಾವುವು?

**ಸ್ವಾಮಿ :** ಮನಸ್ಸು ವಸ್ತುವನ್ನು ಹಿಡಿಯುತ್ತದೆ; ಬುದ್ಧಿಯು ಪರ ಮತ್ತು ವಿರುದ್ಧವಾದ ವಾದಗಳನ್ನು ಪರೀಕ್ಷಿಸುತ್ತದೆ; ಆತ್ಮವು ಇವುಗಳ ಮೂಲಕವಾಗಿ ವಸ್ತುವನ್ನು ಅರ್ಥ ಮಾಡಿಕೊಳ್ಳುತ್ತದೆ; ಅಹಂಕಾರವು ಪರವಾಗಿಯೋ ವಿರುದ್ಧವಾಗಿಯೋ ನಿರ್ಣಯವನ್ನು ಬದಲಾಯಿಸುತ್ತದೆ ಮತ್ತು ಮೋಹದಿಂದ ಜ್ಞಾನದ ಹಿಡಿತವನ್ನು ಸಡಿಲಗೊಳಿಸುತ್ತದೆ. ಅವುಗಳ ಕೆಲಸ ಹೀಗೆ.

**ಭಕ್ತ:** ಸ್ವಾಮಿ, ಕ್ಷಮಿಸಬೇಕು. ನಾನು ತಿಳಿದುಕೊಳ್ಳುವುದಕ್ಕಾಗಿ ಕೇಳುತ್ತಿದ್ದೇನೆ. ದೇಹದಲ್ಲಿ ಇವು ಎಲ್ಲಿರುತ್ತವೆ?

**ಸ್ವಾಮಿ :** ನನಗೆ ಸಂತೋಷ; ಚಿಂತಿಸಬೇಡ. ಮನಸ್ಸು ತಲೆಬುರುಡೆಯೊಳಗಿದೆ, ಬುದ್ಧಿ ನಾಲಿಗೆಯಲ್ಲಿದೆ, ಚಿತ್ತ ಹೊಕ್ಕುಳಿನಲ್ಲಿದೆ, ಅಹಂಕಾರ ಹೃದಯದಲ್ಲಿದೆ.

**ಭಕ್ತ:** ಹಾಗಾದರೆ ಬುದ್ಧಿ ಮತ್ತು ಅಹಂಕಾರ ಅತ್ಯಂತ ಮುಖ್ಯವಾದ ಸ್ಥಳಗಳು! ಜಗತ್ತಿನ ಎಲ್ಲಾ ದುಃಖಗಳಿಗೂ ಇವು ಮುಖ್ಯ ಕಾರಣಗಳು. ತಾವು ಹೇಳಿರುವ ಮಾತುಗಳಿಗೆ ಸಂಬಂಧಿಸಿದಂತೆ ಅದನ್ನು ಪರಿಶೀಲಿಸಿದರೆ, ಈ ಎರಡು ಸ್ಥಳಗಳನ್ನು ಪರಿಶುದ್ಧಗೊಳಿಸಿದರೆ ದುಃಖವೆನ್ನುವುದೇ ಇರುವುದಿಲ್ಲ!

**ಸ್ವಾಮಿ :** ಅಂದರೆ ನಾನು ಹೇಳುವುದನ್ನು ನೀನು ಗಮನವಿಟ್ಟು ಕೇಳಿದ್ದೀಯೆ ಎಂದಾಯಿತು. ಹೌದು, ನೀನು ಹೇಳಿದ್ದು ಸರಿ. ಮೊದಲನೆಯದಾಗಿ ಮಾತುಗಳನ್ನು ಶುದ್ಧವಾದ, ನಿರ್ಮಲವಾದ ರೀತಿಯಲ್ಲಿ ಆಡಿದರೆ ಅದು ಬುದ್ಧಿಯು ಸರಿಯಾದ ದಾರಿ ಹಿಡಿದಿರುವುದಕ್ಕೆ ಸಾಕ್ಷಿ. ಅಹಂಕಾರವನ್ನು ದಮನ ಮಾಡಿ, ಗೆದ್ದರೆ ಅದು ಹೃದಯವು ಪರಿಶುದ್ಧವಾಗುತ್ತಿರುವುದಕ್ಕೆ ಸಾಕ್ಷಿ. ಆದ್ದರಿಂದ ಈ ಎರಡರ ವಿಷಯದಲ್ಲಿ ಬಹು ಜಾಗರೂಕತೆಯಿಂದಿರಬೇಕು. ಆಗ ನಿನ್ನ ಮನಸ್ಸು ಮತ್ತು ಚಿತ್ತ ಎರಡೂ ತಾವಾಗಿ ಒಳ್ಳೆಯ ಪ್ರವೃತ್ತಿ ಪಡೆಯುತ್ತವೆ. ಆಗ ಮಾತ್ರವೇ ನಿನಗೆ ದುಃಖ, ಸಂಕಟಗಳಿಂದ ಬಿಡುಗಡೆ ದೊರಕುತ್ತದೆ. ಅವು ನಿನ್ನನ್ನು ಎಂದೂ ಬಾಧೆಗೊಳಿಸವು.

**ಭಕ್ತ:** ಸ್ವಾಮಿ, ಹಾಗಾದರೆ ಇವುಗಳಲ್ಲೆಲ್ಲ 'ನಾನು' ಎನ್ನುವುದು ಯಾವುದು? ಇವೆಲ್ಲವನ್ನೂ ಅನುಭವಿಸುವವನು ಯಾರು?

**ಸ್ವಾಮಿ :** ಈಗ ನಾವು ಸರಿಯಾದ ಹಂತಕ್ಕೆ ಬಂದಿದ್ದೇವೆ. 'ನೀನು' ಈ ಯಾವುದೂ ಅಲ್ಲ! 'ಈ ದೇಹ ನನ್ನದು' ಎಂಬ ಭಾವನೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಇವು ಅಸ್ತಿತ್ವದಲ್ಲಿರುತ್ತವೆ. ಇವೆಲ್ಲ ಒಂದಿಲ್ಲೊಂದು ಚಟುವಟಿಕೆಗೆ ಅಥವಾ ವೃತ್ತಿಗೆ ಸಂಬಂಧಿಸಿರುತ್ತವೆ. ಇವೆಲ್ಲವನ್ನೂ ವೀಕ್ಷಿಸುತ್ತಿರುವುದು ಆತ್ಮ, ಅದೇ

ನೀನು. ಸಂತೋಷ–ದುಃಖ, ನಷ್ಟ–ಲಾಭ, ಈ ಚಟುವಟಿಕೆಗಳ ಒಳಿತು–ಕೆಡುಕು ಇವೆಲ್ಲಾ ದೇಹಕ್ಕೆ ಮಾತ್ರ ಸಂಬಂಧಿಸಿವೆ. ಆದ್ದರಿಂದ ಅವು ನಿನ್ನವಲ್ಲ; ಅವು ನಿನ್ನವಾಗುವುದಿಲ್ಲ. ನೀನು ಆತ್ಮ. ಈ ಸತ್ಯವು ಅರ್ಥವಾಗುವವರೆಗೂ 'ನಾನು' 'ನನ್ನದು' ಎಂಬ ನಿದ್ದೆಯಲ್ಲಿ ಮುಳುಗಿರುತ್ತೀಯೆ. ಆ ನಿದ್ದೆಯಲ್ಲಿ ನಷ್ಟ, ಯಾತನೆ, ದುಃಖ, ಸಂತೋಷ ಇವುಗಳ ಕನಸು ಬೀಳುತ್ತವೆ. ಕನಸು ಇರುವುದು ಎಚ್ಚರವಾಗುವವರೆಗೆ ಮಾತ್ರ. ಎಚ್ಚೆತ್ತ ಮೇಲೆ ನೀನು ಕನಸಿನಲ್ಲಿ ದುಃಖ ಬಂದಾಗ ಅನುಭವಿಸಿದ ಭೀತಿ ಎಲ್ಲವೂ ಮಾಯವಾಗುತ್ತವೆ. ಅವೆಲ್ಲ ಸತ್ಯವಾಗಿ ಉಳಿಯುವುದಿಲ್ಲ. ಹಾಗೆಯೇ ಭ್ರಮೆಯನ್ನು ಕಳಚಿ ಎಸೆದಾಗ, ಜ್ಞಾನದಲ್ಲಿ ಜಾಗ್ರತನಾದಾಗ ಇವೆಲ್ಲ 'ನೀನು' ಅಲ್ಲ; ನೀನು ಆತ್ಮ ಎಂದು ನಿನಗೆ ಅರ್ಥವಾಗುತ್ತದೆ.

**ಭಕ್ತ:** ಹಾಗಾದರೆ ಸ್ವಾಮಿ, ಈ ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರಗಳು ಯಾರಿಗೋಸ್ಕರ ಈ ಕೆಲಸಗಳನ್ನು ಮಾಡುತ್ತವೆ?

**ಸ್ವಾಮಿ :** ಯಾರಿಗೋಸ್ಕರವಾಗಿಯೂ ಅಲ್ಲ! ಅವು ತಮ್ಮ ಕೆಲಸ ತಾವು ಮಾಡುತ್ತಿವೆ! ಆತ್ಮವು ಎಲ್ಲವನ್ನೂ ವೀಕ್ಷಿಸುತ್ತಿರುತ್ತದೆ. ಅದರ ನೆರಳೇ ಜೀವ. ದೇಹ ಪ್ರಜ್ಞೆಯ ಸಹವಾಸದಿಂದ ಭ್ರಮೆಗೊಳಗಾಗಿರುವ ಜೀವವು ಈ ಎಲ್ಲ ಚಟುವಟಿಕೆಗಳ ಮೂಲಕ ನಾಟಕವನ್ನು ಆಡುತ್ತದೆ.

# ಅಧ್ಯಾಯ ೭

**ಭಕ್ತ:** ಸ್ವಾಮಿ, ನಮಸ್ಕರಿಸುತ್ತೇನೆ.

**ಸ್ವಾಮಿ :** ಓಹ್! ನೀನು ಬಂದಿದ್ದೀಯೆ. ಏನು, ದಸರಾಕ್ಕೆ ಬರಲಿಲ್ಲವಲ್ಲ!

**ಭಕ್ತ:** ಆಗ ಭಕ್ತರ ಸಂಖ್ಯೆ ತುಂಬಾ ಇರುತ್ತದೆ, ಸ್ವಾಮಿ. ನನಗೆ ತೃಪ್ತಿಯಾಗುವಷ್ಟು ಮಾತನಾಡಲು ಆಗ ಸಾಧ್ಯವಾಗುವುದಿಲ್ಲ ಅನ್ನಿಸಿತು, ಆದ್ದರಿಂದ ತಮ್ಮ ಜನ್ಮದಿನೋತ್ಸವಕ್ಕೆ ಕೆಲವು ದಿನ ಮುಂಚಿತವಾಗಿ ಬಂದುಬಿಟ್ಟೆ. ತಮ್ಮ ಅನುಗ್ರಹದಿಂದ ತಾವು ಬೋಧಿಸುವ ಆದರ್ಶವನ್ನು ಸಾಧಿಸುವಂತಾಗಲಿ, ಭಕ್ತಿ ಮತ್ತು ಜ್ಞಾನಗಳು ತಮ್ಮ ನಿತ್ಯಾಗಮನದ ಆ ಪವಿತ್ರ ದಿನದಂದು ನನ್ನ ಹೃದಯದಲ್ಲಿ ಬೆಳೆಯಲಿ ಎಂದು ಆಸೆಪಡುತ್ತೇನೆ.

**ಸ್ವಾಮಿ :** ಒಳ್ಳೆಯದು! ಬಹಳ ಒಳ್ಳೆಯ ಉದ್ದೇಶ. ಆದರೆ ನನ್ನ ಜನ್ಮದಿನವಲ್ಲದ ಬೇರೆ ದಿನಗಳಲ್ಲಿ ಭಕ್ತಿ–ಜ್ಞಾನಗಳು ನಿನ್ನಲ್ಲಿ ಹುಟ್ಟುವುದಿಲ್ಲವೆಂದು ಭಾವಿಸಿದೆಯಾ? ನಿನ್ನ ಯೋಚನೆ ಹಾಗಿದೆಯೆ?

**ಭಕ್ತ:** ಅಲ್ಲ, ಅಲ್ಲ! ಹಾಗಲ್ಲ ಸ್ವಾಮಿ! ತಾವು ಒಂದು ಶುಭದಿನದಂದು ಶುಭ ಮುಹೂರ್ತದಲ್ಲಿ ಅತ್ಯಂತ ಶುಭಕರವಾದ ರೂಪದಲ್ಲಿ ಈ ಧರೆಗೆ ಬಂದಿರಿ, ಅಲ್ಲವೆ! ಕೊನೆಯ ಪಕ್ಷ ಅಂತಹ ದಿನವಾದರೂ ತಮ್ಮ ದಿವ್ಯವಾಣಿಯನ್ನು ನನ್ನ ಹೃದಯದಲ್ಲಿ ನೆಲೆಗೊಳಿಸಿಕೊಂಡು, ಅದನ್ನು ಪರಿಶುದ್ಧಗೊಳಿಸಿಕೊಳ್ಳಬಹುದು. ಆ ದಿನ ಪವಿತ್ರವಾದದ್ದು, ಆ ಗಳಿಗೆ ಮಂಗಳಕರವಾದದ್ದು.

**ಸ್ವಾಮಿ :** ಭೇಷ್! ಇಂದು ಯಾವ ಸಂದೇಹವನ್ನು ತಂದಿರುವೆ?

**ಭಕ್ತ:** ಇಂದು ತಮ್ಮ ದಿವ್ಯವಾದ ಮಾತುಗಳನ್ನು ಕೇಳಿ ಅವನ್ನು ಆಚರಣೆಯಲ್ಲಿ ತರಬೇಕೆಂಬ ನಿರ್ಧಾರದಿಂದ ಬಂದಿದ್ದೇನೆ. "ಕಾಡಿಗೆ ಹೋದರೂ ಶನೀಶ್ವರ ಬಿಡ!" ಅದಕ್ಕೇ ನಾನು ಇವತ್ತು ಸಂದೇಹದ ಭೂತವನ್ನು ತರಲಿಲ್ಲ; ಅದು ನನ್ನ ತಲೆಯ ಮೇಲೆ ಹತ್ತಿಕೊಂಡು ಬಂದೂ ಇಲ್ಲ. ಎಲ್ಲವೂ ನಿಮ್ಮ ಕೃಪೆ.

**ಸ್ವಾಮಿ :** ಬಹಳ ಸಂತೋಷ! ಈ ಸಂದೇಹಗಳು ತಾವಾಗಿ ಕಾಡದೆ ಹೋದಾಗ, ಅಥವಾ ನೀನು ಅವುಗಳಿಗೆ ಎಡೆಕೊಡದೆ ಹೋದಾಗ ನಿಜವಾಗಿ ಮನಸ್ಸು ಶುದ್ಧವಾಗಿರುತ್ತದೆ. ಈ ಎರಡೂ ಘಟಿಸಿದಾಗ ಅದನ್ನು ಏಕಾಗ್ರತೆ ಎಂದು ಕರೆಯ ಬಹುದು. ಯಾವಾಗ... ಅದಿರಲಿ ಬಿಡು. ನಿನ್ನಲ್ಲಿ ಸಂದೇಹಗಳಿಲ್ಲದಾಗ ನಾನೇಕೆ ಅವುಗಳ ನೆನಪು ಮಾಡಬೇಕು? ಹಾಗಾದರೆ ಏನು ಮಾತನಾಡಲಿ ಹೇಳು.

**ಭಕ್ತ:** ಸ್ವಾಮಿ, ನಾವು ಸಾಮಾನ್ಯವಾಗಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೇಳಿ, ನಮ್ಮಲ್ಲಿ ಯಾವ ಗುಣಗಳಿರಬೇಕು? ಯಾವ ಬಗೆಯ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಿಸಬೇಕು? ಭಗವದನುಗ್ರಹವನ್ನೂ ತಮ್ಮ ಸಾನ್ನಿಧ್ಯವನ್ನೂ ಪಡೆಯಬೇಕಾದರೆ ನಾವು ಯಾವ ಕೆಲಸಗಳನ್ನು ಮಾಡಬೇಕು? ಇವುಗಳಲ್ಲಿ ತುಂಬಾ ಮುಖ್ಯವಾದವನ್ನು, ಅತ್ಯಗತ್ಯವಾದವನ್ನು ಆರಿಸಿದ ರತ್ನ ಗಳಂಥವನ್ನು ಹೇಳಿ.

**ಸ್ವಾಮಿ :** ಪಾರ್ವತಿಯು ಈಶ್ವರನನ್ನು ಒಮ್ಮೆ ಕೇಳಿದಳು. "ಸಹಸ್ರನಾಮವನ್ನು, ಭಗವಂತನ ಸಾವಿರ ನಾಮಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಕಷ್ಟ; ಅವುಗ ಳನ್ನು ಕಲಿತು ಜಪಿಸುತ್ತಾ ಹೊಗಲು ಬಹಳ ಕಾಲ ಹಿಡಿಯುತ್ತದೆ. ಆದ್ದರಿಂದ

ಸಾವಿರ ನಾಮಗಳ ಸಾರರೂಪವಾದ ಒಂದು ನಾಮವನ್ನು ದಯವಿಟ್ಟು ಹೇಳಿ.” ಹಾಗೆಯೇ ನಾನು ಬರೆಯುವ, ವಿವರಿಸುವ ಎಲ್ಲವನ್ನೂ ಗ್ರಹಿಸಲು ನಿನಗೆ ಕಷ್ಟವಾಗಿ ಅವುಗಳಲ್ಲಿ ಅತ್ಯಂತ ಮುಖ್ಯವಾದುದನ್ನು ಕೇಳುತ್ತಿರುವೆಯಲ್ಲವೆ? ಆದರೆ ನೋಡು, ಹೆಸರುಗಳು ಸಾರವತ್ತಾದವು. ನೀನು ಕೇಳಲಿರುವ ವಿಷಯಗಳ ಪರಿ ಬೇರೆ. ಅವೆರಡರ ಉದ್ದೇಶ ಮತ್ತು ಅಂತಿಮ ಫಲ ಒಂದೇ ಆದರೂ ಆಚರಣೆ, ಕಾರ್ಯವಿಧಾನ ಒಂದಾಗಿರಲು ಸಾಧ್ಯವಿಲ್ಲ. ಅವೆಲ್ಲವನ್ನೂ ಒಂದು ಪದದಲ್ಲಿ ಅಡಕವಾಗಿ ಹೇಳುವುದು ಸಾಧ್ಯವಿಲ್ಲ! ಆದರೂ ಆರಿಸಿದ ಕೆಲವು ರತ್ನಗಳನ್ನು ನಿನಗೆ ನಾನು ಕೊಡುತ್ತೇನೆ. ಈ ರತ್ನಗಳಿಂದ ನಿನ್ನನ್ನು ಅಲಂಕರಿಸಿಕೋ.

**ಭಕ್ತ:** ನನಗೆ ಬೇಕಾಗಿದ್ದದ್ದೇ ಇದು! ನಾನೆಂಥ ಅದೃಷ್ಟಶಾಲಿ!

**ಸ್ವಾಮಿ:** ಹಾಗಾದರೆ ಹೇಳುತ್ತೇನೆ ಕೇಳು.

೧. ಪ್ರೇಮವು ಜೀವನದ ಉಸಿರು ಎಂದು ಭಾವಿಸಬೇಕು.

೨. ಎಲ್ಲ ವಸ್ತುಗಳಲ್ಲೂ ಸಮಾನವಾಗಿ ವ್ಯಕ್ತವಾಗುವ ಈ ಪ್ರೇಮವೇ ಪರಮಾತ್ಮನೆಂದು ನಂಬು.

೩. ಒಬ್ಬನೇ ಪರಮಾತ್ಮನು ಪ್ರತಿಯೊಬ್ಬರಲ್ಲೂ ಪ್ರೇಮದ ರೂಪದಲ್ಲಿ ಇದ್ದಾನೆ.

೪. ಪ್ರೇಮದ ಮಿಕ್ಕೆಲ್ಲಾ ರೂಪಗಳಿಗಿಂತಲೂ ಮನುಷ್ಯನ ಮೊದಲ ಪ್ರಯತ್ನ ತನ್ನ ಪ್ರೇಮವನ್ನು ಭಗವಂತನ ಮೇಲೆ ನೆಲೆಗೊಳಿಸುವುದಾಗಬೇಕು.

೫. ಭಗವಂತನ ಕಡೆಗೆ ತಿರುಗಿಸಿದ ಆ ಪ್ರೇಮವೇ ಭಕ್ತಿ; ಭಕ್ತಿಯ ಸಂಪಾದನೆ ಮೂಲಭೂತವಾದ ಪರೀಕ್ಷೆ.

೬. ಆತ್ಮಾನಂದವನ್ನು ಪಡೆಯಬಯಸುವವರು ಇಂದ್ರಿಯ ವಸ್ತುಗಳು ಕೊಡುವ ಸಂತೋಷವನ್ನು ಅರಸಿ ಹೋಗಬಾರದು.

೭. ಸತ್ಯವು, ಉಸಿರಾಟವು ಹೇಗೋ ಹಾಗೆ, ಜೀವದಾಯಕವೆಂದು ಪರಿಗಣಿಸಬೇಕು.

೮. ಉಸಿರಾಟವಿಲ್ಲದ ದೇಹವು ಹೇಗೆ ಕೆಲವೇ ನಿಮಿಷಗಳಲ್ಲಿ ಕೊಳೆತು ನಾರಲು ತೊಡಗುತ್ತದೆಯೋ ಹಾಗೆಯೇ ಸತ್ಯವಿಲ್ಲದ ಬದುಕು ನಿಷ್ಪ್ರಯೋಜಕವಾಗುತ್ತದೆ, ಕಲಹ ಮತ್ತು ದುಃಖಗಳಿಂದ ಕೊಳೆತು ನಾರುತ್ತದೆ.

೯. ಸತ್ಯಕ್ಕಿಂತ ದೊಡ್ಡದು, ಹೆಚ್ಚು ಅಮೂಲ್ಯವಾದುದು, ಹೆಚ್ಚು ಮಧುರವಾದುದು, ಹೆಚ್ಚು ಶಾಶ್ವತವಾದುದು ಬೇರೆ ಯಾವುದೂ ಇಲ್ಲ ಎಂಬುದನ್ನು ನಂಬು.

೧೦. ಸತ್ಯವೇ ಸಕಲ–ಸಂರಕ್ಷಕ ಭಗವಂತ. ಸತ್ಯಕ್ಕಿಂತ ಬಲಿಷ್ಠವಾದ ಪೋಷಕ, ರಕ್ಷಕ ಬೇರೆ ಯಾವುದೂ ಇಲ್ಲ.

೧೧. ಯಾರು ಸತ್ಯವನ್ನಾಡುತ್ತಾರೋ ಪ್ರೇಮ ಹೃದಯಿಗಳಾಗಿರುತ್ತಾರೋ ಅವರಿಗೆ ಸತ್ಯ ಸ್ವರೂಪನಾದ ಭಗವಂತನು ದರ್ಶನವನ್ನು ಅನುಗ್ರಹಿಸುತ್ತಾನೆ.

೧೨. ಸಕಲ ಜೀವಿಗಳ ಬಗೆಗೆ ಎಂದಿಗೂ ಕುಂದದ ದಯೆಯನ್ನು, ತ್ಯಾಗ ಮನೋಭಾವವನ್ನು ಬೆಳೆಸಿಕೊ.

೧೩. ಇಂದ್ರಿಯಗಳ ನಿಯಂತ್ರಣವಿರಬೇಕು, ಕಲಕದ ಚಾರಿತ್ರ್ಯವೂ ನಿರ್ಮೋಹವೂ ಇರಬೇಕು.

೧೪. ನಾಲಗೆಯು ಸಾಮಾನ್ಯವಾಗಿ ಮಾಡುವ ಈ ನಾಲ್ಕು ಪಾಪಕೃತ್ಯಗಳನ್ನು ಮಾಡದಂತೆ ಸದಾ ಎಚ್ಚರದಿಂದಿರು: ೧) ಸುಳ್ಳಾಡುವುದು, ೨)ಇತರರನ್ನು ಕುರಿತು ಕೆಟ್ಟ ಮಾತಾಡುವುದು, ೩) ಚಾಡಿ ಹೇಳುವುದು, ೪) ವಿಪರೀತವಾಗಿ ಮಾತನಾಡುವುದು. ಈ ಪ್ರವೃತ್ತಿಗಳನ್ನು ನಿಯಂತ್ರಿಸಲು ಪ್ರಯತ್ನಿಸುವುದು ಅತ್ಯುತ್ತಮ.

೧೫. ದೇಹವು ಮಾಡುವ ಐದು ಪಾಪ ಕಾರ್ಯಗಳನ್ನು ನಿವಾರಿಸಲು ಪ್ರಯತ್ನಿಸಬೇಕು. ಕೊಲೆ, ಹಾದರ, ಕಳವು, ಮಾದಕಗಳ ಪಾನ ಹಾಗೂ ಮಾಂಸ ಭಕ್ಷಣ. ಇವುಗಳನ್ನು ಸಾಧ್ಯವಾದಷ್ಟು ದೂರದಲ್ಲಿ ಇಡಬೇಕು.

೧೬. ಮನಸ್ಸು ಮಾಡುವ ಎಂಟು ಪಾಪಗಳ ವಿರುದ್ಧವಾಗಿ ಒಂದು ಕ್ಷಣವೂ ಅಜಾಗರೂಕತೆಯಿಲ್ಲದಂತೆ ಸದಾ ಕಾಯಬೇಕು. ಕಾಮ ಅಥವಾ ಹಂಬಲಿಸುವುದು; ಕ್ರೋಧ ಅಥವಾ ಕೋಪ; ಲೋಭ ಅಥವಾ ದುರಾಸೆ; ಮೋಹ ಅಥವಾ ಅತ್ಯಾಸಕ್ತಿ; ಅಸಹನೆ; ದ್ವೇಷ; ಅಹಂಕಾರ; ಗರ್ವ. ಇವೆಲ್ಲವನ್ನೂ ತನ್ನಿಂದ ದೂರದಲ್ಲಿ ಇಟ್ಟಿರುವುದೇ ಮನುಷ್ಯನ ಪ್ರಥಮ ಕರ್ತವ್ಯ.

೧೭. ಮನುಷ್ಯನ ಮನಸ್ಸು ಆ ಕಾರ್ಯಗಳನ್ನು ಬೆನ್ನಟ್ಟಿ ಮಹಾ ವೇಗದಲ್ಲಿ ಧಾವಿಸುತ್ತದೆ. ಹಾಗೆ ಓಡಲು ಅವಕಾಶ ಕೊಡದೆ, ಆ ಸಮಯದಲ್ಲಿ ಭಗವಂತನನ್ನು ಧ್ಯಾನಿಸು ಅಥವಾ ಯಾವುದಾದರೂ ಒಂದು ಒಳ್ಳೆಯ ಕೆಲಸ ಮಾಡಲು ಪ್ರಯತ್ನಿಸು. ಹೀಗೆ ಮಾಡುವವರು ಖಂಡಿತವಾಗಿಯೂ ಭಗವಂತನ ಅನುಗ್ರಹಕ್ಕೆ ಅರ್ಹರಾಗುತ್ತಾರೆ.

೧೮. ಮೊದಲು ಇತರರ ಏಳಿಗೆಯನ್ನು ನೋಡಿ ಅಸಹನೆಪಡುವ ದುಷ್ಟ ಪ್ರವೃತ್ತಿಯನ್ನು ಬಿಡು. ಅವರಿಗೆ ಕೆಡುಕು ಮಾಡುವ ಆಸೆಯನ್ನು ತೊರೆ. ಇತರರು ಸಂತೋಷವಾಗಿರುವುದನ್ನು ನೋಡಿ ನೀನು ಸಂತೋಷಪಡು. ಕಷ್ಟದಲ್ಲಿರುವವರನ್ನು ಕುರಿತು ಸಹಾನುಭೂತಿ ತೋರಿಸು, ಅವರಿಗೆ ಏಳಿಗೆಯನ್ನು ಬಯಸು. ಭಗವತ್ ಪ್ರೇಮವನ್ನು ಬೆಳೆಸುವ ವಿಧಾನವೇ ಅದು.

೧೯. ಸಹನೆಯೇ ಮನುಷ್ಯನಿಗೆ ಅಗತ್ಯವಾದ ಬಲ.

೨೦. ಸಂತೋಷವಾಗಿ ಬದುಕಬೇಕೆಂದು ಕಾತರರಾಗಿರುವವರು ಸದಾ ಸತ್ಕಾರ್ಯಗಳನ್ನು ಮಾಡುತ್ತಿರಬೇಕು.

೨೧. ಪ್ರೇಮದ ಮೂಲಕ ಕ್ರೋಧವನ್ನು, ವಿಚಾರದ ಮೂಲಕ ಮೋಹವನ್ನು, ಸತ್ಯದ ಮೂಲಕ ಲೋಭವನ್ನು ಗೆಲ್ಲುವುದು ಸುಲಭ.

೨೨. ದುರ್ಜನರ ಮಾತುಗಳಿಗೆ ಉತ್ತರ ಕೊಡಬಾರದು. ಅವರಿಂದ ದೂರವಿರು; ಅದೇ ನಿನಗೆ ಒಳ್ಳೆಯದು. ಅಂತಹ ಜನರೊಂದಿಗೆ ಎಲ್ಲಾ ಸಂಬಂಧಗಳನ್ನು ಕಡಿದುಕೊ.

೨೩. ನಿನ್ನ ಸರ್ವಸ್ವವನ್ನೂ ತ್ಯಾಗ ಮಾಡಿಯಾದರೂ ಸಜ್ಜನರ ಸಂಗವನ್ನು ಬಯಸು. ಆದರೆ ಸಜ್ಜನರನ್ನೂ ದುರ್ಜನರನ್ನೂ ಬೇರೆಯಾಗಿ ತಿಳಿದುಕೊಳ್ಳಲು ಅಗತ್ಯವಾದ ವಿವೇಚನಾ ಶಕ್ತಿಯನ್ನು ಅನುಗ್ರಹಿಸುವಂತೆ ಭಗವಂತನಲ್ಲಿ ಮೊರೆಯಿಡು. ನಿನಗೆ ಕೊಡಲಾಗಿರುವ ಬುದ್ಧಿ ಶಕ್ತಿಯನ್ನು ಉಪಯೋಗಿಸಿ ಶ್ರಮಿಸಬೇಕು.

೨೪. ಪ್ರಪಂಚದಲ್ಲಿ ರಾಜ್ಯಗಳನ್ನು ಗೆದ್ದು ಕೀರ್ತಿ ಪಡೆಯುವವರನ್ನು ವೀರರೆನ್ನುತ್ತಾರೆ. ಸಂದೇಹವಿಲ್ಲ; ಆದರೆ ಇಂದ್ರಿಯಗಳನ್ನು ಗೆದ್ದವರನ್ನು ವಿಶ್ವವನ್ನೇ ಗೆದ್ದ ಜಯಶಾಲಿಗಳೆಂದು ಪ್ರಶಂಸಿಸಬೇಕು.

೨೫. ಒಬ್ಬ ಒಳ್ಳೆಯ ಮನುಷ್ಯ ಅಥವಾ ಕೆಟ್ಟ ಮನುಷ್ಯ ಏನೇ ಮಾಡಲಿ, ಅದರ ಫಲವು ಅವನ ಬೆನ್ನಟ್ಟುತ್ತದೆ, ಹಿಂಬಾಲಿಸದೆ ಬಿಡುವುದೇ ಇಲ್ಲ.

೨೬. ದುರಾಸೆಯು ಕೇವಲ ದುಃಖವನ್ನು ಕೊಡುತ್ತದೆ; ತೃಪ್ತಿಪಡೆಯುವುದು ಅತ್ಯುತ್ತಮ. ತೃಪ್ತಿಗಿಂತಲೂ ದೊಡ್ಡ ಸಂತೋಷ ಬೇರೆಯಾವುದೂ ಇಲ್ಲ.

೨೭. ದುಷ್ಕೃತ್ಯವೆಸಗುವ ಪ್ರವೃತ್ತಿಯನ್ನು ಬೇರು ಸಮೇತ ಕಿತ್ತೆಸೆಯಬೇಕು. ಅದು ಸ್ವಲ್ಪ ಉಳಿಯಲು ಬಿಟ್ಟರೂ ಬದುಕನ್ನೇ ಕೊರೆದು ನಾಶ ಮಾಡಿಬಿಡುತ್ತದೆ.

೨೮. ನಷ್ಟವನ್ನು, ದುಃಖವನ್ನು ಧೈರ್ಯವಾಗಿ ಸಹಿಸಿಕೊ; ಲಾಭವನ್ನೂ ಸಂತೋಷವನ್ನೂ ಸಾಧಿಸಲು ಮಾರ್ಗೋಪಾಯಗಳನ್ನು ಹುಡುಕು.

೨೯. ಕೋಪ ಬಂದಾಗ ಮೌನವಾಗಿರು ಮತ್ತು ಭಗವಂತನ ನಾಮವನ್ನು ಸ್ಮರಿಸು. ಅದಕ್ಕೆ ಬದಲಾಗಿ, ಕೋಪವನ್ನು ಇನ್ನಷ್ಟು ಹೆಚ್ಚಿಸುವಂತಹ ವಿಷಯಗಳನ್ನು ನೆನೆಯಬೇಡ, ಅದರಿಂದ ಲೆಕ್ಕವಿಲ್ಲದಷ್ಟು ಹಾನಿಯಾಗುತ್ತದೆ.

೩೦. ಈ ಗಳಿಗೆಯಿಂದ ಎಲ್ಲಾ ದುರಭ್ಯಾಸಗಳನ್ನು ತೊಡೆದುಹಾಕು. ತಡ ಮಾಡಬೇಡ ಅಥವಾ ಮುಂದಕ್ಕೆ ಹಾಕಬೇಡ. ಅವು ಅತ್ಯಲ್ಪ ಸಂತೋಷವನ್ನೂ ಕೊಡಲಾರವು.

೩೧. ಸಾಧ್ಯವಾದ ಮಟ್ಟಿಗೆ, ನಿನ್ನ ಅಳವಿನಲ್ಲಿಯೇ ಬಡವರ ಅಗತ್ಯಗಳನ್ನು ಪೂರೈಸಲು ನೆರವಾಗು. ಅವರೇ ನಿಜವಾಗಿ ದರಿದ್ರ ನಾರಾಯಣ. ನಿನ್ನ ಬಳಿ ಇರುವ ಆಹಾರವನ್ನು ಅವರೊಂದಿಗೆ ಹಂಚಿಕೊ ಒಂದು ಸಲವಾದರೂ ಅವರಿಗೆ ಸಂತೋಷವನ್ನುಂಟುಮಾಡು.

೩೨. ಇತರರು ನಿನಗೆ ಏನು ಮಾಡಬಾರದೆಂದು ನೀನು ಬಯಸುವೆಯೋ ಅದನ್ನು ನೀನು ಇತರರಿಗೆ ಮಾಡಕೂಡದು.

೩೩. ತಿಳಿಯದೆ ಮಾಡಿದ ತಪ್ಪುಗಳಿಗಾಗಿ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಡು; ಅವೇ ತಪ್ಪುಗಳನ್ನು, ಪಾಪ ಕಾರ್ಯಗಳನ್ನು ಮತ್ತೆ ಮಾಡಬೇಡ; ಸರಿಯಾದ ಮಾರ್ಗದಲ್ಲಿ ಸ್ಥಿರವಾಗಿ ನಿಲ್ಲಲು ಅಗತ್ಯವಾದ ಶಕ್ತಿಯನ್ನು ಧೈರ್ಯವನ್ನು ಅನುಗ್ರಹಿಸುವಂತೆ ಭಗವಂತನಲ್ಲಿ ಮೊರೆಯಿಡು.

೩೪. ಭಗವಂತನಿಗಾಗಿ ನಿನ್ನ ಆಸಕ್ತಿಯನ್ನು ಉತ್ಸಾಹವನ್ನು ಹಾಳು ಮಾಡುವಂತಹ ಏನೊಂದೂ ನಿನ್ನ ಬಾಳಿಗೆ ಸುಳಿಯಲು ಅವಕಾಶ ಕೊಡಬೇಡ. ಈ ಕಾತರವಿಲ್ಲದೆ ಹೋದರೆ ಅದು ಮನುಷ್ಯನ ಶಕ್ತಿಯನ್ನು ಕುಂದಿಸುತ್ತದೆ.

೩೫. ಹೇಡಿತನಕ್ಕೆ ಬಲಿಯಾಗಬೇಡ; ಆನಂದವನ್ನು ಬಿಡಬೇಡ.

೩೬. ಜನರು ಹೊಗಳಿದಾಗ ಉಬ್ಬಬೇಡ.; ಜನರು ನಿಂದಿಸಿದಾಗ ಕುಗ್ಗಿ ಕುಸಿಯಬೇಡ.

೩೭. ನಿನ್ನ ಮಿತ್ರರಲ್ಲಿ ಒಬ್ಬರು ಇನ್ನೊಬ್ಬರನ್ನು ದ್ವೇಷಿಸಿ ಜಗಳ ತೆಗೆದರೆ, ಅವರನ್ನು ಮತ್ತಷ್ಟು ಕೆರಳಿಸಲು ಪ್ರಯತ್ನ ಮಾಡಬೇಡ, ಪರಸ್ಪರ ಇನ್ನಷ್ಟು ದ್ವೇಷಿಸಲು ಅವಕಾಶ ಕೊಡಬೇಡ. ಅದಕ್ಕೆ ಬದಲು ಪ್ರೇಮ ಮತ್ತು ಸಹಾನುಭೂತಿಯಿಂದ ಅವರು ಮತ್ತೆ ಹಿಂದಿನ ಗೆಳೆತನವನ್ನುಳಿಸಿಕೊಳ್ಳುವಂತೆ ಮಾಡಲು ಪ್ರಯತ್ನಿಸು.

೩೮. ಇತರರ ದೋಷಗಳನ್ನು ಹುಡುಕುವುದಕ್ಕೆ ಬದಲು, ನಿನ್ನ ದೋಷಗಳನ್ನೇ ನೀನು ಹುಡುಕು; ಅವುಗಳನ್ನು ಬೇರು ಸಹಿತ ಕಿತ್ತು ಎಸೆ. ನಿನ್ನ ಒಂದೇ

ಒಂದು ದೋಷವನ್ನು ಹುಡುಕಿ ಕಂಡುಹಿಡಿದರೂ ಸಾಕು; ಇತರರ ಸಾವಿರ ದೋಷಗಳನ್ನು ಹುಡುಕುವುದಕ್ಕಿಂತಲೂ ಅದು ಮೇಲು.

೩೯. ಯಾವುದೇ ಪುಣ್ಯಕಾರ್ಯ ಅಥವಾ ಸತ್ಕಾರ್ಯವನ್ನು ಮಾಡದಿದ್ದರೂ ಮಾಡಲು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ; ಯಾವುದೇ ಪಾಪ ಕಾರ್ಯ ಅಥವಾ ದುಷ್ಕಾರ್ಯ ನಡೆಸಲು ಯೋಚಿಸಬೇಡ, ಮಾಡಬೇಡ. ಅದು ಎಷ್ಟೋ ಉತ್ತಮ.

೪೦. ನಿನ್ನಲ್ಲಿ ಇಲ್ಲವೆಂದು ಗೊತ್ತಿರುವ ದೋಷಗಳು ನಿನ್ನಲ್ಲಿವೆ ಎಂದು ಯಾರಾದರೂ ಹೇಳಬಹುದು, ಅದಕ್ಕಾಗಿ ದುಃಖಿಸಬೇಡ; ಇರುವ ದೋಷಗಳನ್ನು ನೀನೇ ತಿದ್ದಿಕೊಳ್ಳಲು ಪ್ರಯತ್ನಿಸು, ಇತರರು ಬೊಟ್ಟು ಮಾಡಿ ತೋರಿಸುವುದಕ್ಕೆ ಮೊದಲೇ ಆ ಕೆಲಸ ಮಾಡು. ನಿನ್ನ ದೋಷಗಳನ್ನು ತೋರಿಸಿಕೊಡುವವರನ್ನು ಕುರಿತು ಕೋಪವನ್ನಾಗಲಿ ಪ್ರತೀಕಾರ ಭಾವನೆಯನ್ನಾಗಲಿ ಬೆಳೆಸಿಕೊಳ್ಳಬೇಡ. ಅವರ ದೋಷಗಳನ್ನು ತೋರಿಸಿಕೊಟ್ಟು ಪ್ರತಿಭಟಿಸಬೇಡ, ಅದಕ್ಕೆ ಬದಲು ಅವರಿಗೆ ಕೃತಜ್ಞತೆ ತೋರಿಸು. ಅವರ ದೋಷಗಳನ್ನು ಬೆದಕುವುದು ಇನ್ನೂ ದೊಡ್ಡ ತಪ್ಪು. ನಿನ್ನ ದೋಷಗಳನ್ನು ನೀನೇ ತಿಳಿದುಕೊಳ್ಳುವುದು ಒಳ್ಳೆಯದು; ಇತರರ ದೋಷಗಳನ್ನು ತಿಳಿದುಕೊಳ್ಳುವುದು ಒಳ್ಳೆಯದಲ್ಲ.

೪೧. ಸ್ವಲ್ಪ ಬಿಡುವು ದೊರೆತಾಗಲೆಲ್ಲಾ, ಏನೇನೋ ಕೆಲಸಕ್ಕೆ ಬಾರದ ವಿಚಾರಗಳನ್ನು ಮಾತನಾಡುತ್ತಾ ಕಳೆಯಬೇಡ. ಭಗವಂತನ ಧ್ಯಾನ ಮಾಡುತ್ತಲೋ ಇತರರಿಗೆ ಏನಾದರೂ ಸೇವೆ ಮಾಡುತ್ತಲೋ ಅದನ್ನು ಉಪಯೋಗಿಸು.

೪೨. ಭಗವಂತನನ್ನು ಭಕ್ತನು ಮಾತ್ರವೇ ಅರ್ಥಮಾಡಿಕೊಳ್ಳುವನು; ಭಕ್ತನನ್ನು ಭಗವಂತನು ಮಾತ್ರವೇ ಅರಿಯುವನು. ಇತರರು ಅವನನ್ನು ಅರಿತುಕೊಳ್ಳಲಾರರು. ಆದ್ದರಿಂದ ಭಕ್ತಿಯಿಲ್ಲದವರೊಂದಿಗೆ ಭಗವಂತನ ವಿಷಯವಾಗಿ ಮಾತನಾಡಬೇಡ. ಅಂತಹ ಮಾತುಕತೆಗಳಿಂದ ನಿನ್ನ ಭಕ್ತಿ ಕ್ಷೀಣವಾಗಬಹುದು.

೪೩. ಯಾರಾದರೂ ಒಂದು ವಿಷಯವನ್ನು ತಪ್ಪಾಗಿ ಅರ್ಥ ಮಾಡಿಕೊಂಡು ನಿನ್ನೊಂದಿಗೆ ಮಾತನಾಡಿದರೆ ಅವರ ನಿಲುವನ್ನು ಬೆಂಬಲಿಸುವಂತಹ ಇನ್ನಷ್ಟು ತಪ್ಪು ಅಭಿಪ್ರಾಯಗಳನ್ನು ಹುಡುಕಲು ಪ್ರಯತ್ನಿಸಬೇಡ, ಅದಕ್ಕೆ ಬದಲು ಅವರು ಹೇಳುವ ಮಾತುಗಳಲ್ಲಿ ಒಳ್ಳೆಯದು ಮತ್ತು ಸಿಹಿಯಾದದ್ದು ಏನಿದೆಯೋ ಅದನ್ನು ಗ್ರಹಿಸು. ನಿಜವಾದ ಅರ್ಥವು ಅಪೇಕ್ಷಣೀಯವೇ

ಹೊರತು ತಪ್ಪು ಅರ್ಥವಲ್ಲ, ಅಥವಾ ಅರ್ಥವನ್ನೇ ಕೊಡದೆ ಕೇವಲ ಆನಂದವನ್ನು ಕೆಡಿಸಿ ಹಾಳುಮಾಡುವಂತಹ ಹಲವು ಅರ್ಥಗಳೂ ಅಲ್ಲ.

೪೪. ಏಕಾಗ್ರತೆಯನ್ನು ಬೆಳೆಸಿಕೊಳ್ಳಲು ಬಯಸುವಿಯಾದರೆ, ಜನರ ಗುಂಪಿನಲ್ಲಿರಲಿ, ಬಜಾರಿನಲ್ಲಿರಲಿ ನಿನ್ನ ದೃಷ್ಟಿಯನ್ನು ಹತ್ತು ಕಡೆಗೆ, ಎಲ್ಲಾ ವಸ್ತುಗಳ ಕಡೆಗೆ ಹೊರಳಿಸುತ್ತಿರದೆ ನಿನ್ನೆದುರಿಗಿರುವ ರಸ್ತೆಯನ್ನೆ ನೋಡುತ್ತಿರಬೇಕು. ಅಪಘಾತಗಳಾಗದಂತೆ ನಿನ್ನನ್ನು ರಕ್ಷಿಸಿಕೊಳ್ಳಲು ಅದಷ್ಟು ಸಾಕು. ರಸ್ತೆಯಿಂದ ದೃಷ್ಟಿಯನ್ನು ಹೊರಳಿಸದೆ, ಇತರರನ್ನು ನೋಡುತ್ತಾ ಸಾಗದೆ ಅಪಾಯಗಳನ್ನು ನಿವಾರಿಸಿಕೊಂಡು ಹೋದರೆ ಏಕಾಗ್ರತೆಯು ಸ್ಥಿರಪಡುವುದು.

೪೫. ಗುರುವನ್ನೂ ಭಗವಂತನನ್ನೂ ಕುರಿತ ಸಂದೇಹಗಳೆಲ್ಲವನ್ನೂ ತೊರೆ. ನಿನ್ನ ಪ್ರಾಪಂಚಿಕ ಆಸೆಗಳು ನೆರವೇರದೆ ಹೋದರೆ ಅದಕ್ಕಾಗಿ ನಿನ್ನ ಭಕ್ತಿಯನ್ನು ಬಯ್ಯಬೇಡ; ಅಂತಹ ಲೌಕಿಕ ಆಕಾಂಕ್ಷೆಗಳಿಗೂ ಭಗವದ್ಭಕ್ತಿಗೂ ಯಾವ ಸಂಬಂಧವೂ ಇಲ್ಲ. ಅವುಗಳನ್ನು ಒಂದಲ್ಲ ಒಂದು ದಿನ ತೊರೆಯಬೇಕಾಗುತ್ತದೆ. ಎಂದಾದರೂ ಭಕ್ತಿ ಭಾವವನ್ನು ಸಂಪಾದಿಸಲೇ ಬೇಕಾಗುತ್ತದೆ. ಇದನ್ನು ದೃಢವಾಗಿ ತಿಳಿದುಕೋ.

೪೬. ನಿನ್ನ ಧ್ಯಾನವಾಗಲಿ ಜಪವಾಗಲಿ ಸರಿಯಾಗಿ ಪ್ರಗತಿ ಹೊಂದದೆ ಹೋದರೆ, ಅಥವಾ ನೀನು ಬೆಳೆಸಿಕೊಂಡು ಬಂದಿದ್ದ ಆಸೆಗಳು ಫಲ ನೀಡದೆ ಹೋದರೆ ಅದರಿಂದ ಭಗವದ್ವಿಷಯದಲ್ಲಿ ಅಸಮಾಧಾನಗೊಳ್ಳಬೇಡ. ಅದು ನಿನ್ನ ಉತ್ಸಾಹವನ್ನಿನ್ನಷ್ಟು ಕುಗ್ಗಿಸುತ್ತದೆ. ಸ್ವಲ್ಪವೋ ಹೆಚ್ಚಾಗಿಯೋ ನೀನು ಸಂಪಾದಿಸಿಕೊಂಡಿರಬಹುದಾದ ಮನಶ್ಶಾಂತಿಯನ್ನು ಕಳೆದುಕೊಳ್ಳುವಿ. ಧ್ಯಾನ ಮತ್ತು ಜಪ ಮಾಡುವಾಗ ವಿಷಣ್ಣರಾಗಬಾರದು, ಹತಾಶರಾಗಬಾರದು ಅಥವಾ ನಿರುತ್ಸಾಹಿತರಾಗಬಾರದು. ಅಂತಹ ಭಾವನೆಗಳು ಬಂದಾಗ ಅದು ನಿನ್ನ ಸಾಧನೆಯ ದೋಷ, ಅವುಗಳನ್ನು ಸರಿಯಾಗಿ ಮಾಡಲಾಗದ ದೋಷವೇ ಅದಕ್ಕೆ ಕಾರಣ ಎಂದು ಭಾವಿಸಬೇಕು.

ನಿನ್ನ ದೈನಂದಿನ ಜೀವನದಲ್ಲಿಯೂ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿಯೂ ನೀನು ಈ ರೀತಿಯಾಗಿ ನಡೆದುಕೊಂಡ ಪಕ್ಷದಲ್ಲಿ ಸುಲಭವಾಗಿ ದೈವ ಶಕ್ತಿಯನ್ನು ಸಾಧಿಸುವೆ. ಆದ್ದರಿಂದ ಈ ಸೂತ್ರಗಳನ್ನು ಬಿಗಿಯಾಗಿ ಹಿಡಿದುಕೋ. ನಿನ್ನ ಸ್ವಾಮಿಯ ಜನ್ಮ ದಿನೋತ್ಸವದಂದು ಹಂಚಿದ ಈ ಮಾತುಗಳ ರೂಪದ ಸಿಹಿಯನ್ನು ತಿಂದು ಅರಗಿಸಿಕೊ ಸಂತೋಷದಿಂದಿರು! ಅರ್ಥವಾಯಿತೆ!

**ಭಕ್ತ:** ನಿಮ್ಮ ಮಾತುಗಳು ಅಮೃತೋಪಮವಾಗಿವೆ ಸ್ವಾಮಿ. ಹೌದು, ಅವು ಅಮೃತ! ಬದುಕಿನ ಸಾಮಾನ್ಯ ವ್ಯವಹಾರಗಳಲ್ಲಿ ಮನುಷ್ಯನು ಸರಿಯಾದ ದಾರಿಯನ್ನು ತಿಳಿದುಕೊಂಡಿಲ್ಲ; ಅವನು ತಪ್ಪು ದಾರಿಯನ್ನು ಹಿಡಿದಿದ್ದಾನೆ. ಸಂತೋಷಕರವಾದ ಪ್ರಯಾಣವನ್ನು ಹೇಗೆ ತೊಡಗಬೇಕೆಂದು ಹೇಳುವ ಪುಸ್ತಕಗಳೂ ಯಾವುವೂ ಇಲ್ಲ. ನನ್ನ ಹಾಗೆ ಹೋರಾಡುವವರಿಗೆ ತಾವು ಹೇಳಿದುದು ಪ್ರಾಣ, ಉಸಿರಿದ್ದ ಹಾಗೆ! ನಾನು ನಿಜವಾಗಿ ಧನ್ಯ. ನನ್ನ ಹೃದಯದಲ್ಲಿ ಈ ಮಾತುಗಳು ಮುದ್ರಿತವಾಗುವಂತೆ, ಪ್ರತಿದಿನವೂ ಅವುಗಳನ್ನು ಆಚರಣೆಯಲ್ಲಿ ತರಲು ನನಗೆ ಸಾಧ್ಯವಾಗುವಂತೆ ಅನುಗ್ರಹಿಸಬೇಕು. ಅವುಗಳನ್ನು ಸುಮ್ಮನೆ ಓದುವುದರಿಂದ ಅಥವಾ ಆಲಿಸುವುದರಿಂದ ಏನೂ ಪ್ರಯೋಜನವಿಲ್ಲ. ಅವುಗಳ ಜೊತೆಗೆ ತಮ್ಮ ಕರುಣೆಯೂ ಹರಿದು ಬಂದಾಗ ಮಾತ್ರ ನನ್ನಲ್ಲಿ ನಿಜವಾಗಿ ಶಕ್ತಿಯು ಕೊಡುತ್ತದೆ. ನಾನಿನ್ನು ಹೋಗಿಬರುತ್ತೇನೆ, ಸ್ವಾಮಿ!

**ಸ್ವಾಮಿ:** ಒಳ್ಳೆಯದು, ಈಗ ಹೋಗಿ ಹುಟ್ಟಿದ ಹಬ್ಬಕ್ಕೆ ಬಾ. ಇನ್ನು ಏಳು ದಿನಗಳ ಅವಕಾಶವಿದೆಯಲ್ಲವೆ? ಇವತ್ತು ೧೬ನೆಯ ತಾರೀಕು. ಹುಟ್ಟಿದ ಹಬ್ಬ ೨೩ನೆಯ ತಾರೀಕು. ಏಳು ದಿನಗಳು ಉಳಿದಿವೆ. ಅಲ್ಲಿಯವರೆಗೆ ಈ ಮಾಧುರ್ಯವು ನಿನ್ನ ಹೃದಯವನ್ನು ತುಂಬಿ ಹರಿಯಲಿ.

# ಅಧ್ಯಾಯ ೮

**ಸ್ವಾಮಿ:** ಓಹ್! ಇದೇನಿದು? ಈ ಸಾರಿ ಇಷ್ಟು ಬೇಗನೆ ಬಂದುಬಿಟ್ಟಿದ್ದೀಯೆ!

**ಭಕ್ತ:** ತಾವು ಬರಮಾಡಿದಿರಿ, ನಾನು ಬಂದಿದ್ದೇನೆ ಸ್ವಾಮಿ!

**ಸ್ವಾಮಿ:** ಅದು ನಿಜ; ಕಾರಣವಿಲ್ಲದೆ ಒಂದು ಕಾಗದದ ತುಂಡು ಕೂಡ ಚಲಿಸಲಾರದಷ್ಟೆ? ಹಾಗೆಯೇ ನೀನು ಇಷ್ಟು ಬೇಗ ಬಂದಿರುವುದಕ್ಕೂ ಒಂದು ಕಾರಣವಿರಲೇಬೇಕು.

**ಭಕ್ತ:** ಬೇರೇನೂ ಇಲ್ಲ ಸ್ವಾಮಿ; ಕೇರಳದ ಗವರ್ನರ್ ಶ್ರೀ ರಾಮಕೃಷ್ಣರಾವ್ ಅವರ ಆಹ್ವಾನದಂತೆ ತಾವು ೧೬ನೆಯ ತಾರೀಕೇ ತ್ರಿವೇಂಡ್ರಂಗೆ ಹೋಗುತ್ತಿದ್ದೀರಿ ಎಂದು ಕೇಳಿದೆ. ಅಂದು ಬಂದರೆ ಮಾತನಾಡಲು ಹೆಚ್ಚು ಅವಕಾಶ ದೊರಕಲಾರದು ಎನಿಸಿತು. ಅದಕ್ಕೆ ಬಂದು ಬಿಟ್ಟೆ. ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಬೇಕು.

**ಸ್ವಾಮಿ:** ಒಳ್ಳೆಯದನ್ನೇ ಮಾಡಿದೆ! ಆದರೆ ಅದಕ್ಕೆ ಕ್ಷಮೆಯನ್ನೇಕೆ ಕೇಳುತ್ತೀಯೆ? ನಿಜವಾಗಿ ಹೇಳಬೇಕೆಂದರೆ ಕ್ಷಮೆಯಾಚಿಸಬಾರದು, ತಪ್ಪು ಮಾಡಿದಾಗಲೂ! ಇನ್ನು ಸರಿಯಾದುದನ್ನೇ ಮಾಡಿದ್ದರೆ ಕ್ಷಮೆಯ ಪ್ರಶ್ನೆಯೇ ಇಲ್ಲವಲ್ಲ!

**ಭಕ್ತ:** ಸ್ವಾಮಿ, ನಾವು ತಪ್ಪು ಮಾಡಿದಾಗ ಅದಕ್ಕೆ ಕ್ಷಮೆ ಕೋರಬೇಡವೆ? ಏಕೆ?

**ಸ್ವಾಮಿ:** ಕೂಡದು. ನ್ಯಾಯವಾದುದನ್ನು ಮಾಡಿದಾಗ ಮೆಚ್ಚಿಗೆಯನ್ನು ಕೋರಬಾರದು, ತಪ್ಪು ಮಾಡಿದಾಗ ಕ್ಷಮೆಯನ್ನೂ ಕೋರಬಾರದು. ಸರಿಯಾದ್ದನ್ನು ಮಾಡುವುದು ವ್ಯಕ್ತಿಯ ಕರ್ತವ್ಯ; ಅದೇ ಅದರ ಪ್ರತಿಫಲ. ಬೇರೆ ಪ್ರತಿಫಲ ಯಾವುದಿದೆ ಅದಕ್ಕೆ? ನಿನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವುದೇ ನಿನಗೆ ಸಲ್ಲುವ ಪುರಸ್ಕಾರ. ತಪ್ಪು ಮಾಡುವುದು ಮನುಷ್ಯನ ಕರ್ತವ್ಯಕ್ಕೆ ವಿರುದ್ಧವಾದದ್ದು. ಇಷ್ಟರ ಮೇಲೆ ಅವನು ಶಿಕ್ಷಿಸಿ ಕಾಪಾಡುತ್ತಾನೋ ಅಥವಾ ಕ್ಷಮಿಸಿ ತಿದ್ದುತ್ತಾನೋ ಅದು ಅವನ ಕರುಣೆಗೆ ಬಿಟ್ಟಿದ್ದು.

**ಭಕ್ತ:** ಸಾಧ್ಯವಾದಷ್ಟು ಮಟ್ಟಿಗೆ, ತಾವೇ ಅನುಗ್ರಹಿಸಿರುವ ಬುದ್ಧಿಯನ್ನು ಉಪಯೋಗಿಸಿ ಸಾಧ್ಯವಿರುವಷ್ಟು ಮಟ್ಟಿಗೆ ಅವುಗಳನ್ನು ಆಚರಣೆಯಲ್ಲಿ ತರುತ್ತಿದ್ದೇನೆ.

**ಸ್ವಾಮಿ:** 'ಸಾಧ್ಯವಿರುವ ಮಟ್ಟಿಗೆ' ಎಂದರೆ ಏನರ್ಥ? ನಿನ್ನಂತಹ ಭಕ್ತರಿಗೆ ಇದಕ್ಕಿಂತ ದೊಡ್ಡ ಕೆಲಸ ಬೇರೆ ಏನಿದೆ? ಏಕೆ ಸಾಧ್ಯವಿಲ್ಲ? ಶ್ರದ್ಧೆ ಮತ್ತು ಸಂಕಲ್ಪ ಬೇಕು ಅಷ್ಟೆ. ಆಗ ಕರ್ತವ್ಯವನ್ನು ನಿರ್ವಹಿಸಲು ಕಷ್ಟವಾಗಬಾರದು.

**ಭಕ್ತ:** ಶ್ರದ್ಧೆ-ಸಂಕಲ್ಪಗಳಿದ್ದರೂ ಹಿತಕರವಾದ ಪರಿಸ್ಥಿತಿಗಳಿಲ್ಲದೆ ಹೋದರೆ ಅಥವಾ ವಿಷಯಗಳನ್ನು ಸ್ಪಷ್ಟವಾಗಿ ಗ್ರಹಿಸಿಕೊಂಡಿಲ್ಲವಾದರೆ ಆಚರಣೆಯಲ್ಲಿ ತರುವುದು ಕಷ್ಟವಾಗುತ್ತದೆ ಎಂದು ತಾವೇ ಹೇಳಿದ್ದೀರಿ.

**ಸ್ವಾಮಿ:** ಓಹ್! ಅಂದರೆ, ಅನುಕೂಲಕರ ಪರಿಸ್ಥಿತಿಯಿಲ್ಲದ್ದು ಮತ್ತು ಸ್ಪಷ್ಟವಾಗಿ ಗ್ರಹಿಸದುದು ಈ ಎರಡೂ ನಿನಗೆ ಈಗ ತೊಂದರೆ ಕೊಡುತ್ತಿವೆ ಎಂದಂತಾಯಿತು. ಅರ್ಥವಾಗದಿದ್ದರೆ, ಕೇಳು; ಪರಿಸ್ಥಿತಿ ಸರಿಯಾಗಿಲ್ಲವೆಂದೆ, ಏನು ಅಡ್ಡಿ ಹೇಳು.

**ಭಕ್ತ:** ಸಂದೇಹವೇ ದೊಡ್ಡ ಅಡ್ಡಿ, ಅದಕ್ಕಿಂತ ದೊಡ್ಡದಾದುದು ಬೇರೆ ಯಾವುದಿದೆ? ಇಷ್ಟೆಲ್ಲಾ ಕೇಳಿದ ಮೇಲೆ ಕೂಡ ಈ ಸಂದೇಹ ಪಿಶಾಚಿಯು ಆಗಾಗ ನನ್ನನ್ನು ಹಿಡಿದುಬಿಡುತ್ತದೆ. ಯಾಕೆ ಎಂದು ನನಗೆ ತಿಳಿಯದು ಸ್ವಾಮಿ!

**ಸ್ವಾಮಿ :** ಅದಕ್ಕೆ ಮೊದಲನೆಯ ಕಾರಣ ನಿನಗೆ ನಿನ್ನ ಮೇಲೆಯೇ ವಿಶ್ವಾಸವಿಲ್ಲದುದು; ನೀನು ನಿಜವಾಗಿ ಆತ್ಮಸ್ವರೂಪ ಎಂಬ ದೃಢ ನಂಬಿಕೆಯಿಂದ ಆ ವಿಶ್ವಾಸವು ಮೂಡಿಲ್ಲದ್ದು. ಎರಡನೆಯ ಕಾರಣ ಮಾನವ ರೂಪದಲ್ಲಿರುವ ಭಗವತ್ ಶಕ್ತಿಯನ್ನು ಮನುಷ್ಯನದೆಂದು ಭಾವಿಸಿ, ಇಂದ್ರಿಯ ಸುಖಗಳ ಬೆನ್ನಟ್ಟಿ ಹೋಗುವುದು. ಈ ಪಿಶಾಚಿಗಳು ನಿನ್ನನ್ನು ಆಕ್ರಮಿಸುವುದಕ್ಕೆ ಇರುವ ಕಾರಣಗಳು ಈ ಎರಡೇ. ನೀನು ಭಗವದ್ವಿಷಯದಲ್ಲಿಯೇ ಸ್ಥಿರವಾಗಿ ನಿಂತರೆ, ಮನುಷ್ಯನಲ್ಲಿರುವ ದೈವತ್ವವು ಸಾಕ್ಷಾತ್ ದೇವರೇ ಎಂದು ತಿಳಿದುಕೊಂಡರೆ ನಿನಗೆ ಈ ಬಾಧೆಯಿರುವುದಿಲ್ಲ. ವಿಷಯಗಳನ್ನು ಒಂದಕ್ಕೊಂದು ಬೆರೆಸಿಬಿಡುವ ಈ ಅಧ್ಯಾಸವನ್ನು ನೀನು ತೊರೆಯಬೇಕು.

**ಭಕ್ತ:** ಹಾ! ಹೀಗೆಯೇ ಸ್ವಾಮಿ. ಅರ್ಥವಾಗದ ಪದಗಳನ್ನು ತಾವು ಉಪಯೋಗಿಸಿ ಬಿಡುತ್ತೀರಿ! ಇದರಿಂದ ನನಗೆ ಇನ್ನಷ್ಟು ಗೊಂದಲವಾಗುತ್ತದೆ.

**ಸ್ವಾಮಿ :** ಅರ್ಥವಾಗದ ಪದಗಳನ್ನು ನಾನು ಎಂದೂ ಹೇಳುವುದಿಲ್ಲ. ನಿನಗೆ ಅರ್ಥ ಮಾಡಿಕೊಳ್ಳುವ ಶಕ್ತಿಯಿಲ್ಲ. ಕಷ್ಟ ಪಡುತ್ತೀಯೆ. ಅವುಗಳ ಅರ್ಥವನ್ನು ನಿನಗೆ ಸ್ಪಷ್ಟಪಡಿಸಲೆಂದೇ ನಾನು ಅವುಗಳನ್ನು ಉಪಯೋಗಿಸುತ್ತೇನೆ. ಹೇಳು, ನಾನು ಉಪಯೋಸಿದ್ದರಲ್ಲಿ ನಿನಗೆ ಕಷ್ಟವಾದದ್ದು ಯಾವುದು?

**ಭಕ್ತ:** ತಾವು ಅಧ್ಯಾಸ ಎಂಬ ಪದವನ್ನು ಬಳಸಿದಿರಿ ಸ್ವಾಮಿ. ಅದರ ಅರ್ಥವೇನು?

**ಸ್ವಾಮಿ :** ಏನು? ನಿನಗೆ ಆ ಪದ ಅರ್ಥವಾಗಿಲ್ಲವೆ? ಒಂದು ರೂಪವನ್ನು ನೋಡಿ ಇನ್ನೊಂದು ಎಂದು ಭಾವಿಸುವುದು, ಒಂದನ್ನು ಇನ್ನೊಂದರೆ ಮೇಲೆ ಹೇರುವುದು ಅಧ್ಯಾಸ.

**ಭಕ್ತ:** ಅದು ಹೇಗೆ ಸಾಧ್ಯ? ಯಾವ ವಸ್ತುವಿನ ಮೇಲ ಯಾವ ವಸ್ತುವನ್ನು ಹೇರುತ್ತೇವೆ?

**ಸ್ವಾಮಿ :** ಒಂದು ಹಗ್ಗವನ್ನು ನೋಡಿ ಅದು ಹಾವು ಎಂದು; ಬಿಸಿ ಗಾಳಿಯ ಅಲೆಗಳನ್ನು ನೊಡಿ ಅವು ಕುದುರೆಗಳು ಎಂದು ಭಾವಿಸುವುದು. ಬಿಸಿಲಲ್ಲಿ ಹೊಳೆಯುವ ಕನ್ನಡಿಯನ್ನು ನೋಡಿ ಅದನ್ನು ದೀಪವೆಂದು ಭ್ರಮಿಸುವುದು, ಹೀಗೆ ಎಷ್ಟೋ ಇವೆ.

**ಭಕ್ತ:** ಹಾಗಾದರೆ ನಾನು ಯಾವುದನ್ನು ನೋಡಿ ಏನೆಂದು ಭ್ರಮಿಸುತ್ತಿರುವೆನು?

**ಸ್ವಾಮಿ:** ಪ್ರಕೃತಿ ಸ್ವರೂಪದಲ್ಲಿರುವ ಪರಮಾತ್ಮನನ್ನು ನೋಡಿ, ಇದು ಕೇವಲ ಪ್ರಪಂಚವೆಂದು ಭಾವಿಸಿ ಭಯಪಡುತ್ತಿರುವೆ. ಆ ಭ್ರಮೆಯಿಂದಲೇ ನೀನು ನಾನಾ ರೀತಿಯ ದೌರ್ಬಲ್ಯಗಳಿಗೆ ತುತ್ತಾಗುತ್ತಿದ್ದೀಯ ಮತ್ತು ಭ್ರಾಂತಿ, ಸಂದೇಹಗಳಿಂದ ಕ್ಷೀಣಿಸುತ್ತಿದ್ದೀಯ. ಅದರ ಯಥಾರ್ಥವನ್ನು ತಿಳಿದುಕೊಂಡಾಕ್ಷಣ ಭ್ರಾಂತಿ ಹೋಗಿ, ಭಯವು ದೂರವಾಗಿ ಧೈರ್ಯ ಬಂದು ಪರಮಾತ್ಮ ಎಂಬ ಧೃಡತ್ವವು ನೆಲೆಗೊಳ್ಳು ವುದು. ಅಂಥ ಧೃಡತ್ವವನ್ನು ಹೊಂದುವುದಕ್ಕೆ ವಿವೇಕವೆಂಬ ದೀಪವು ಅವಸರವು. ಹಗ್ಗವು ಹಾವೆಂಬ ಸಂಶಯವಿರುವವರೆಗೂ ಎಷ್ಟು ಬಾಧೆ? ಎಷ್ಟು ಭಯ? ಎಷ್ಟು ಭ್ರಾಂತಿ? ಆ ಹಗ್ಗವನ್ನು ಬೆಳಕಿನಲ್ಲಿ ನೋಡಿದ ತಕ್ಷಣವೇ ಆ ಭಯ ಭ್ರಾಂತಿಗಳು ಹೊರಟು ಹೋಗುವುದೋ ಹಾಗೆಯೇ ಈ ಭ್ರಾಂತಿಗಳೂ ಸಹ. ಪ್ರಕೃತಿಯನ್ನು ಪರಮಾತ್ಮನೆಂದು ಅರ್ಥೈಸಿಕೊಂಡ ತಕ್ಷಣವೇ ಅರಿವಿಲ್ಲದೆಯೇ ಅವು ಅದೃಶ್ಯವಾಗಿ ಹೋಗುವುದು. ಇಂತಹ ಭ್ರಾಂತಿಯಲ್ಲಿ, ಭ್ರಾಂತಿಯನ್ನು ಕಲ್ಪಿಸಿ, ಒಂದು ವಸ್ತುವಿನಲ್ಲಿ ಮತ್ತೊಂದು ವಸ್ತುವನ್ನು ನಿರೂಪಿಸುವಂತಹ ವಿಚಾರವನ್ನೇ 'ಅಧ್ಯಾಸ' ಎನ್ನುವರು.

**ಭಕ್ತ:** ಸ್ವಾಮಿ! ಪ್ರಕೃತಿಯನ್ನು ಪರಮಾತ್ಮನೆಂದು ಹೇಗೆ ಹೇಳಲು ಸಾಧ್ಯ? ಮಾನವರ ದೃಷ್ಟಿಯಲ್ಲಿ ಸಹಜವಾಗಿ ಗೋಚರಿಸುತ್ತಿರುವ ಈ ಪ್ರಪಂಚವನ್ನು ಪರಮಾತ್ಮ ಎಂದು ಭಾವಿಸಬೇಕಾದರೆ ಸಂದೇಹ ಬಾರದಿರುವುದೇ?

**ಸ್ವಾಮಿ:** ಅದು ನಿಜವೇ! ಆದರೆ ವಿಚಾರಣೆಮಾಡಿ ನಿಜಸ್ಥಿತಿ ತಿಳಿದಾಗ, ಈ ದೃಶ್ಯವೂ ಸಹ ಪರಮಾತ್ಮನಂತೆಯೇ ಕಾಣಿಸುವುದು. ನೂಲಿಲ್ಲದೆ ಬಟ್ಟೆಯುಂಟೆ? ಆದರೆ ಆ ಬಟ್ಟೆಗೆ ನೂಲಲ್ಲವೆ ಪ್ರಧಾನ? ಆದರೆ ಬಟ್ಟೆಯನ್ನು ನೂಲೆಂದು ಹೇಳುವುದಿಲ್ಲ. ಅಂತೆಯೇ ನೂಲನ್ನು ಬಟ್ಟೆಯೆಂದು ಹೇಳುವುದಿಲ್ಲ. ಇದೇ ಸಂಬಂಧ ಪ್ರಕೃತಿಗೂ ಪರಮಾತ್ಮನಿಗೂ ಸಹ. ಪರಮಾತ್ಮ ಎಂಬ ನೂಲಿಂದಲೇ ಪ್ರಕೃತಿ ಎಂಬ ಬಟ್ಟೆ ತಯಾರಾಗಿದೆ. ಹಾಗಿರುವಾಗ ನೂಲೇ ಬೇರೆ ಬಟ್ಟೆ ಬೇರೆಯಾಗಿದೆಯಾ? ಇಲ್ಲ! ನೂಲನ್ನು ಒಂದು ರೀತಿಯಾಗಿ ಬಳಸಿದರೆ ಬಟ್ಟೆಯನ್ನು ಮತ್ತೊಂದು ರೀತಿ ಬಳಸುವರು. ಅಂದ ಮಾತ್ರಕ್ಕೆ ದಾರ ಬೇರೆಯೆಂದೂ ಬಟ್ಟೆ ಬೇರೆಯೆಂದೂ ಭಾವಿಸಬಾರದು.

**ಭಕ್ತ:** ಸರಿ ಸ್ವಾಮಿ, ಪರಮಾತ್ಮನಿಂದ ಪ್ರಕೃತಿಯನ್ನು ತಿಳಿದುಕೊಂಡರೆ, ಪರಮಾತ್ಮ ಬೇರೆ ಪ್ರಕೃತಿ ಬೇರೆಯಲ್ಲವೆಂದು ತಿಳಿಯುತ್ತದೆ. ಇವೆರಡೂ ಒಂದೇ ಆದಲ್ಲಿ ಜೀವವೆಂಬುವುದೇನು ಇದರಲ್ಲಿ?

**ಸ್ವಾಮಿ :** ಅದಾ ನಿನಗಿರುವ ಸಂದೇಹ. 'ನಾನು' ಎಂಬುದಕ್ಕೆ ಸ್ಥಳಕೊಟ್ಟವನೇ ಜೀವಿ. ಜೀವಿಯು ದೇಹೇಂದ್ರಿಯಗಳೆಂಬ ಉಪಾಧಿಗಳಿಂದ ಕೂಡಿ ಇರುವನು. ಆದರೆ ಆತ್ಮ, ಜೀವಾತ್ಮ, ಪ್ರತ್ಯಗಾತ್ಮ, ಚಿದಾತ್ಮ, ಕರ್ತ, ಭೋಕ್ತ ಇವೆಲ್ಲವೂ ಜೀವಿಯೇ.

**ಭಕ್ತ:** ಇನ್ನು ಜಡವೆಂಬ ಒಂದು ಪದವನ್ನು ಉಪಯೋಗಿಸುವರಲ್ಲ? ಯಾವುದು ಜಡ? ಅದು ಹೇಗೆ ಕಾರ್ಯ ಮಾಡುತ್ತದೆ. ದಯವಿಟ್ಟು ತಿಳಿಸಿಕೊಡಿ.

**ಸ್ವಾಮಿ :** ಬುದ್ಧಿಯಿಂದ ಹಿಡಿದು ಶರೀರದವರೆಗೆ ಆಗುವ ಪ್ರಕೃತಿಯ ಪರಿಣಾಮ ವೆಲ್ಲವೂ ಜಡವೆ. ಇದೇ ಅಸತ್, ಅಚೇತನ. ಸಚ್ಚಿತ್ ಸ್ವರೂಪನಿಗಿಂತ ಬೇರೆಯೆಲ್ಲ ವನ್ನು ಜಡವೆಂದು ಭಾವಿಸಬಹುದು. ನಿಜವಾಗಿ ಹೇಳಬೇಕೆಂದರೆ ಪ್ರಪಂಚವು ಜಡವಲ್ಲದೆ ಬೇರೆಯಲ್ಲ. ಚೈತನ್ಯದ ಸಂಯೋಗವಿಲ್ಲದೆ ಜಡವು ಅಸ್ತಿತ್ವದಲ್ಲಿರದು. ಆಕಾಶದ ಸಂಯೋಗವಿಲ್ಲದೆ ಗಾಳಿ ಹೇಗೆ ಬೇರೆಯಾಗಿಲ್ಲವೊ, ಹಾಗೆಯೇ ಇದೂ ಕೂಡ. ಚರಾಚರ ಸೃಷ್ಟಿಯೆಲ್ಲವೂ ಪ್ರಕೃತಿ ಪುರುಷ ಸಂಯೋಗದಿಂದ ಎಂದು ಗೀತೆಯಲ್ಲಿ ಈ ಹಿಂದೆ ಹೇಳಿಲ್ಲವೆ?

**ಭಕ್ತ:** ಆದರೆ ಬುದ್ಧಿಗೆ, ಮನಸ್ಸಿಗೆ, ಆತ್ಮಕ್ಕೆ ಇರುವ ಸಂಬಂಧವೇನು?

**ಸ್ವಾಮಿ :** ಮಗೂ! ಆತ್ಮಕ್ಕೂ ಬುದ್ಧಿಗೂ ಪ್ರತ್ಯೇಕ ಸಂಬಂಧವಿಲ್ಲದಿದ್ದರೂ ಆತ್ಮವು ಪರಿಶುದ್ಧ, ನಿರ್ಮಲ; ಬುದ್ಧಿಯೂ ಪರಿಶುಭ್ರ, ನಿರ್ಮಲ. ಕನ್ನಡಿಯ ಮೇಲೆ ಸೂರ್ಯನು ಪ್ರತಿಬಿಂಬಿಸುವ ಹಾಗೆ ಬುದ್ಧಿಯಲ್ಲಿ ಆತ್ಮಚೈತನ್ಯ ಪ್ರಕಾಶವಾಗುವುದು. ಆಗ ಬುದ್ಧಿಯ ಪ್ರಕಾಶ ಮನಸ್ಸಿನ ಮೇಲೂ ಮನೋಪ್ರಕಾಶ ಇಂದ್ರಿಯಗಳ ಮೇಲೂ ಇಂದ್ರಿಯಗಳ ಪ್ರಕಾಶ ದೇಹದ ಮೇಲೂ ಆಗುವುದು. ಆತ್ಮ ಪ್ರಕಾಶವುಳ್ಳ ದಲ್ಲವೇ? ಆದರೆ ಆ ಪ್ರಕಾಶವನ್ನು ಆಕರ್ಷಿಸುವ ಕನ್ನಡಿಯಂತೆ ಬುದ್ಧಿಯಿರುವು ದಲ್ಲವೇ? ಈಗ ಬುದ್ಧಿಯ ಸಂಯೋಗ :– ಈ ಕಡೆ ಇಂದ್ರಿಯಗಳಿಗೆ, ಆಕಡೆ ಆತ್ಮಕ್ಕೆ ಇರುವುದನ್ನು ನೋಡು.

**ಭಕ್ತ:** ಆದರೆ, ಆ 'ನಾನು' ಎಂಬ ಜೀವಿಗೂ ಇಂದ್ರಿಯಗಳಿಗೂ ದೇಹಕ್ಕೂ ಇರುವ ಸಂಬಂಧ ಎಂತಹುದು?

**ಸ್ವಾಮಿ :** ಅವಕ್ಕೆ ಸಂಬಂಧವಿಲ್ಲ. 'ನಾನು' ಎಂಬುವುದು ಇಂದ್ರಿಯಗಳು, ದೇಹ, ಮನಸ್ಸು ಇವುಗಳಿಂದ ಬೇರೆಯಾಗಿಯೇ ಇದೆ. ದೇಹ ಧರ್ಮ, ಇಂದ್ರಿಯ ಧರ್ಮ, ಅಂತಃ ಧರ್ಮಗಳನ್ನು ಈ ಜೀವಿ(ನಾನು)ಯ ಮೇಲೆ ಆರೋಪಿಸಲಾಗುತ್ತದೆ. ನೋಡು! ನಾನು ಕೆಂಪಗಿದ್ದೇನೆ ಎಂಬ ದೇಹಧರ್ಮವನ್ನು ಆರೋಪಿಸಿಕೊಳ್ಳುತ್ತಿ

ದ್ದಾನೆಯೇ ವಿನಃ ಜೀವಿಗೆ ಇದು ಸಂಬಂಧಿಸಿದ್ದಲ್ಲ. ನಾನು ಗಂಡಸು ಎಂಬ ಇಂದ್ರಿಯ ಧರ್ಮವನ್ನು ಆರೋಪಿಸಿಕೊಳ್ಳುತ್ತಿದ್ದಾನೆ; ಆಸೆ(ಕಾಮ)ಯೆಂಬ ಅಂತಃ ಕರಣ ಧರ್ಮವನ್ನು ಆರೋಪಿಸಿಕೊಳ್ಳುತ್ತಿದ್ದಾನೆ, ತಿಳಿಯಿತೇ? ಎಲ್ಲವೂ ಆರೋಪ ಣೆಗಳೇ. ಯಥಾರ್ಥವೇನೆಂದರೆ ಪರಮಾತ್ಮನು ಒಬ್ಬನೇ ಆ ಪರಂಜ್ಯೋತಿ ಒಂದೇ. ಆ ನಿತ್ಯ, ಸತ್ಯ ಒಂದೇ ಚೆನ್ನಾಗಿ ಅರ್ಥಮಾಡಿಕೋ.

**ಭಕ್ತ:** ಅದು ಎಂತಹ ಸುಬೋಧೆ! ಚಿಕ್ಕಮಕ್ಕಳಿಗೂ ಸಹ ಆತ್ಮತತ್ತ್ವವನ್ನು ಅರ್ಥ ಮಾಡಿಕೊಳ್ಳುವಷ್ಟು ಸುಲಭವಾಗಿ ತಿಳಿಸಿದಿರಿ. ಈ ವಿಷಯವು ಲೋಕಕ್ಕೆಲ್ಲಾ ತಿಳಿಸಿ ದರೆ ಲೋಕದಲ್ಲಿರುವ ಕತ್ತಲು ಹೋಗಿ ಪ್ರಕಾಶದಿಂದ ಬೆಳಗುವುದು, ಸ್ವಾಮಿ!

**ಸ್ವಾಮಿ:** ಅದಕ್ಕೆ ನಿನ್ನೊಡನೆ ಸಂಭಾಷಿಸುತ್ತಿರುವುದು. ಇದು ಪ್ರತಿಯೊಬ್ಬರಿಗೂ ತಲುಪಿ ಎಲ್ಲರೂ ಯಥಾರ್ಥವನ್ನು ತಿಳಿದುಕೊಳ್ಳಲೆಂದು. ಸೂರ್ಯನ ಕಿರಣಗಳು ಕನ್ನಡಿಯ ಮೇಲೆ ಬಿದ್ದು ಪ್ರತಿಫಲಿಸಿದ ಅದು ಕಟ್ಟಡದ ಮೇಲೆ ಬಿದ್ದು ಮತ್ತೆ ಅದು ನೇತ್ರಗಳ ಮೇಲೆ ಬಿದ್ದಹಾಗೆ, ನನ್ನ ಸುಬೋಧ ಪ್ರಕಾಶವು ಭಕ್ತನೊಡನೆ ಸಂಭಾಷಣ ಎನ್ನುವ ನೆಪದಲ್ಲಿ, ಆ ಸಂಭಾಷಣೆ 'ಸನಾತನ ಸಾರಥಿ' ಎಂಬ ಕಟ್ಟಡದ ಮೇಲೆ ಬಿದ್ದು, ಆ ಕಾಂತಿ ಲೋಕಕ್ಕೆಲ್ಲಾ ಶಾಂತಿ ಮತ್ತು ಸೌಹಾರ್ದಗಳನ್ನು ನೀಡಲೆಂದೇ ಈ 'ಸಂದೇಹ ನಿವಾರಿಣಿ' ಎಂಬ ಸಂಕಲ್ಪವನ್ನು ನಾನು ಸಂಕಲ್ಪಿಸಿದ್ದು.

# ಅಧ್ಯಾಯ ೯

**ಸ್ವಾಮಿ:** ಬಂದೆಯಾ? ಸಂತೋಷ? ಏನು ಸಮಾಚಾರ?

**ಭಕ್ತ:** ತಮ್ಮ ಸಮಾಚಾರ ಬಿಟ್ಟು, ನಮಗೇ ಬೇರೆ ಏನಿದೆ ಸ್ವಾಮಿ. ತಮ್ಮ ಕೇರಳ ಪ್ರವಾಸ ಅತ್ಯಂತ ಆನಂದವಾಗಿಯೂ ಅದ್ಭುತವಾಗಿಯೂ ಇತ್ತೆಂದು ಕೇಳಿದೆ. ಆದರೆ, ಪ್ರಾಪ್ತಿಯಿಲ್ಲದೆ ಹೋಯಿತಲ್ಲ ಎಂಬ ಚಿಂತೆ ಬಿಟ್ಟು ಮತ್ತೇನಿಲ್ಲ.

**ಸ್ವಾಮಿ:** ಅದಕ್ಕೆ ಚಿಂತೆ ಏತಕ್ಕೆ? ಕೇಳಿ ಸಂತೋಷಪಡಬಹುದಲ್ಲವೆ? ಮತ್ತೆ ಅಂತಹ ಅವಕಾಶ ದೊರಕಿದಾಗ ನಾನೂ ಸಹ ಹೊಂದಬೇಕೆಂಬ ದೃಢತ್ವ, ಉತ್ಸಾಹ ಇರಬೇಕೇ ಹೊರತು ಆಗಿಹೋದದ್ದನ್ನು ಕುರಿತು ಚಿಂತಿಸಬಾರದು.

**ಭಕ್ತ:** ಪ್ರಾಪ್ತಿಯಿಲ್ಲದಿದ್ದಾಗ ಎಷ್ಟು ದೃಢತೆ, ಉತ್ಸಾಹಗಳು ಇದ್ದರೂ ಪ್ರಯೋಜನ ವೇನು? ಅಂತಹ ಆಸೆ ಮತ್ತಷ್ಟು ನಿರಾಸೆಗೊಳಿಸುವುದಲ್ಲವೆ?

**ಸ್ವಾಮಿ:** ಪ್ರಾಪ್ತಿಗೆ ಒಂದು ರೂಪವಿದೆಯೆ ಅದನ್ನು ಮುಂಚೆಯೆ ತಿಳಿದುಕೊಳ್ಳು ವುದಕ್ಕೆ. ಪ್ರಾಪ್ತಿ, ಪ್ರಾಪ್ತಿ ಎಂದು ಪ್ರಾಪ್ತಿಗಾಗಿ ಕಾದು ಕೂಡಬಾರದು. ಇಚ್ಛೆ, ಪ್ರಯತ್ನ ಗಳು ಕರ್ಮರೂಪದಲ್ಲಿ ಆಚರಿಸದಿದ್ದರೆ ಪ್ರಾಪ್ತಿ ಇದ್ದರೂ ಹೇಗೆ ಸಿದ್ಧಿಸುವುದು? ಎಷ್ಟೇ ಪ್ರಾಪ್ತಿ ಇದ್ದರೂ ಕರ್ಮವೆನ್ನಾಚರಿಸುವುದು ಅವಸರವು ಕರ್ಮ ಸಹಾಯ ವಿಲ್ಲದೆ ಪ್ರಾಪ್ತಿ ಸಿದ್ಧಿಸುವುದಿಲ್ಲ ಅಲ್ಲವೆ?

**ಭಕ್ತ:** ಪ್ರಾಪ್ತಿಯಿದ್ದರೆ ಎಲ್ಲವೂ ತನಗೆ ತಾನಾಗಿಯೇ ಲಭಿಸುವುದಿಲ್ಲವೆ?

**ಸ್ವಾಮಿ:** ಅದೇ ದೊಡ್ಡ ಪ್ರಮಾದ. ಹಣ್ಣನ್ನು ಅಂಗೈಯಿಲ್ಲಟ್ಟುಕೊಂಡು ಪ್ರಾಪ್ತಿಯಿದ್ದರೆ ಹಣ್ಣಿನ ತಿರುಳು ನನ್ನ ಹೊಟ್ಟೆಯಲ್ಲಿ ಸೇರುತ್ತದೆಯೆಂದು ಸುಮ್ಮನಿದ್ದರೆ, ಅದು ಹೇಗೆ ಸೇರುವುದು? ಹಣ್ಣನ್ನು ನುಂಗುವಂತಹ ಕರ್ಮವನ್ನು ಆಚರಿಸದೆ ಆ ತಿರುಳು ನನಗೆ ಪ್ರಾಪ್ತಿಯಿಲ್ಲವೆಂದು ಹಲುಬುವುದು ಎಂತಹ ಹುಚ್ಚುತನ! ಪ್ರಾಪ್ತಿಯಿದ್ದಿದ್ದರಿಂದಲೇ ಈ ಹಣ್ಣು ನನಗೆ ಸಿಕ್ಕಿತು; ಕರ್ಮಫಲದಿಂದ ಅದನ್ನು ನಾನು ಅನುಭವಿಸಬಹುದು. ಕರ್ಮವಿಲ್ಲದೇ ಯಾವುದನ್ನೇ ಆಗಲಿ ಅನುಭವಿಸಲಾಗದು. ಕರ್ಮ ಕರ್ತವ್ಯ ವಾದರೆ ಪ್ರಾಪ್ತಿ ಕರ್ಮಫಲವು. ಕರ್ಮವಿಲ್ಲದೇ ಫಲವು ದೊರಕದು.

**ಭಕ್ತ:** ಸ್ವಾಮಿ, ಆದರೆ ಪ್ರಾಪ್ತಿ, ಪ್ರಾಪ್ತಿಯೆಂದು ಹೇಳುತ್ತಾ ಅದರ ಮೇಲೆ ಭಾರವನ್ನು ಹಾಕಿ ಸುಮ್ಮನಿರಬಾರದಲ್ಲವೆ?

**ಸ್ವಾಮಿ:** ನಿನ್ನ ಶಕ್ತಿ ಲೋಪವಾಗದಂತೆ, ಅದಕ್ಕೆ ತಕ್ಕ ಕರ್ಮವನ್ನಾಚರಿಸುತ್ತಾ ಪ್ರಾಪ್ತಿಯ ಮೇಲೆ ಭಾರಹಾಕಿ ಇರುವುದು ಉತ್ತಮವೇ ಹೊರತು; ಸರಿಯಾದ ಕರ್ಮವನ್ನಾಚರಿಸದೆ ಪ್ರಾಪ್ತಿ ಪ್ರಾಪ್ತಿ ಎಂದು ಸುಮ್ಮನೆ ಕುಳಿತುಕೊಳ್ಳುವುದು ದೊಡ್ಡ ತಪ್ಪು. ಫಲವೂ ಕೈಗೆ ದೊರಕದು, ಪ್ರಾಪ್ತಿಯೂ ಸಿದ್ಧಿಸದು. ಕರ್ಮವನ್ನು ಎಂತಹವ ರಾದರೂ ಆಚರಿಸಿಯೇ ತೀರಬೇಕು.

**ಭಕ್ತ:** ಹೌದೌದು ಸ್ವಾಮಿ! ಗೀತೆಯಲ್ಲೂ ಕೃಷ್ಣಪರಮಾತ್ಮ ಒಂದಾನೊಂದು ಸಮಯ ದಲ್ಲಿ ಅರ್ಜುನನಿಗೆ, ಹುಚ್ಚನೇ ನಾನೇ ಕರ್ಮವನ್ನಾಚರಿಸದಿದ್ದರೆ ಫಲವೆಲ್ಲಿ ಸಿದ್ಧಿಸು ವುದು ಎಂದು ಆಜ್ಞಾಪಿಸಿದನು. ಆದರೆ, ಕರ್ಮ ಪುರುಷ ಲಕ್ಷಣವೆಂಬುದರ ಅರ್ಥವೇನು?

**ಸ್ವಾಮಿ :** ಆದರೆ ಸ್ತ್ರೀಲಕ್ಷಣವೆಂಬುದಿದೆಯೇ? ಹುಚ್ಚನೆ! ಕರ್ಮ ಪುರುಷ ಲಕ್ಷಣವಲ್ಲ; ಪ್ರಕೃತಿ ಲಕ್ಷಣ, ಪುರುಷರಾಗಲೀ ಸ್ತ್ರೀಯರಾಗಲೀ ಕ್ರಿಮಿಕೀಟಗಳಾಗಲೀ ವೃಕ್ಷ ಜಂತುಗಳಾಗಲೀ ಲೋಕದಲ್ಲಿರುವ ಸಮಸ್ತವೂ ಕರ್ಮವನ್ನಾಚರಿಸತಕ್ಕದ್ದು. ಅದರ ತತ್ಫಲಿತವೇ ಪ್ರಾಪ್ತಿ, ಅಪ್ರಾಪ್ತಿ. ಅಷ್ಟೇ ಅಲ್ಲ, ಕರ್ಮ ಪ್ರಕೃತಿ ಲಕ್ಷಣವೆಂದು ತಿಳಿದುಕೊ. ಪುರುಷ ಲಕ್ಷಣವೆಂದು ಹೇಳುವರು. ಪುರುಷನು ಪರಮಾತ್ಮನೊಬ್ಬನೆ. ಪ್ರಕೃತಿಯೆಲ್ಲವೂ ಶಕ್ತಿ (ಸ್ತ್ರೀ). ನೀವೆಲ್ಲರೂ ಪುರುಷರಲ್ಲ, ಜಾಗ್ರತೆ!

**ಭಕ್ತ:** ಹಾಗಾದರೂ ಸ್ತ್ರೀ ಪುರುಷರ ಪ್ರಕೃತಿ ಸಂಬಂಧದಲ್ಲಿ ಕೂಡ ಒಂದು ಬದಲಾವಣೆ ಕಾಣಿಸುವುದಷ್ಟೆ ಅಲ್ಲ, ಅದನ್ನು ಆಚರಿಸುತ್ತಾ ಅನುಭವಿಸುತ್ತಾ ಇರುವೆವಲ್ಲ. ಹಾಗಿರುವಾಗ ಎಲ್ಲರು ಸ್ತ್ರೀಯರೇ ಎಂಬುದು ಹೇಗೆ ಸಾಧ್ಯ ಸ್ವಾಮಿ? ಹೇಳಬೇಕೆಂದರೂ ಕಷ್ಟ ಸಾಧ್ಯ.

**ಸ್ವಾಮಿ :** ಮಗೂ! ಪ್ರಕೃತಿ ಸಂಬಂಧಗಳಿಗೆ ನೀವು ಹಾಗೆ ಭಾವಿಸಬಹುದೇ ಹೊರತು ಯಥಾರ್ಥದಲ್ಲಿ ಹಾಗಲ್ಲ. ಇವೆಲ್ಲವೂ ಲೋಕಾನುಭವಕ್ಕೋಸ್ಕರ, ಲೋಕಾರೂಢಿ ಗೋಸ್ಕರ ಅರ್ಥ ನಾಮಗಳೇ ಹೊರತು ಯಥಾರ್ಥ ನಾಮಗಳು ಅಲ್ಲ. ಇವು ಬರೇ ವೇಷಗಳು. ಪುರುಷನು ಕೆಲವು ನಾಟಕಗಳಲ್ಲಿ ಸ್ತ್ರೀ ವೇಷವನ್ನು ಹಾಕುವನು. ಅಷ್ಟು ಮಾತ್ರಕ್ಕೆ ಅವನನನ್ನು ಸ್ತ್ರೀ ಎನ್ನಲಾಗುವುದೇ? ಕೆಲವು ಸಮಯಗಳಲ್ಲಿ ಸ್ತ್ರೀ ಪುರುಷನ ವೇಷ ಹಾಕುವಳು ಅಷ್ಟಕ್ಕೇ ಆ ಸ್ತ್ರೀ ಪುರುಷನಾಗುವಳೇ? ಇವೆಲ್ಲವೂ ಪ್ರಕೃತಿ ನಾಟಕಕ್ಕೆ ಧರಿಸಿದ ವೇಷಗಳು, ಇಟ್ಟ ಹೆಸರುಗಳೇ ಹೊರತು ಪ್ರಕೃತಿಯೆಲ್ಲವು ಶಕ್ತಿಮಯವಾದಾಗ ಎಷ್ಟು ವೇಷಗಳು ಹಾಕಿದರೂ ಶಕ್ತಿಯೇ ಹೊರತು ಪುರುಷನಲ್ಲ. ಅಸಲು, ಪುರುಷನೊಬ್ಬನೇ. ಆತನೇ ಶಿವನು. ಆತನೇ ಆತ್ಮ. ಅಂತಹ ಆತ್ಮ ಎಲ್ಲರಲ್ಲೂ ಸೇರಿ ಇರುವುದೇ ಹೊರತು, ಎಲ್ಲರಲ್ಲೂ ಸೇರಿ ಇರುವುದ ರಿಂದ ಪುರುಷತ್ವವನ್ನು ಹೊಂದರು. ಇದೆಲ್ಲವೂ ಒಂದು ನಾಟಕರಂಗ. ಅದರಲ್ಲಿ, ವೇಷಗಳು, ಕಥೆಗಳು ಬೇರೆ ಬೇರೆ. ನೋಡು ಬಾಲಕಿಯರ ಪಾಠಶಾಲೆಯಲ್ಲಿ ಹೆಣ್ಣು, ಗಂಡು ವೇಷಗಳೆರಡನ್ನು ಬಾಲಕಿಯರೇ ಹಾಕಿದಂತೆ ಪ್ರಕೃತಿ ರಂಗದಲ್ಲಿ ಶಕ್ತಿ ಇಷ್ಟು ವೇಷಗಳನ್ನು ಹಾಕಿ, ನಟಿಸಿ, ಅನುಭವಿಸುತ್ತಿರುವುದೇ ಹೊರತು, ಯಥಾರ್ಥ ಇದಲ್ಲ ಮಗೂ!

**ಭಕ್ತ :** ಏನು ಸ್ವಾಮಿ! ಇವೆಲ್ಲವೂ ಕೇಳುತ್ತಿದ್ದರೆ ಪ್ರಪಂಚವು ಅರ್ಥವೇ ಆಗದು. ಒಂದು ಕಡೆ ನೋಡಿದರೆ ಸತ್ಯವೆಂದೂ ಮತ್ತೊಂದು ಕಡೆ ಅಸತ್ಯವೆಂದೂ ಯಾವುದೂ ದೃಢವಾಗದೇ ಇದೆ.

**ಸ್ವಾಮಿ :** ಅದಕ್ಕೇ ಯಾವುದೂ ಸತ್ಯವಲ್ಲ, ಅಸತ್ಯವಲ್ಲ ಆದ್ದರಿಂದಲೇ ಈ ಜಗತ್ತನ್ನು ಮಿಥ್ಯೆಯೆಂದು ಹೇಳುವರು. ಈ ಮಿಥ್ಯಾ ಲೋಕದಲ್ಲಿ ಜನಿಸಿದ್ದರಿಂದ ನಿನ್ನ ಮನಸ್ಸೂ ಸಹ ಇದನ್ನು ನಂಬದೆ ಅದನ್ನು ನಂಬದೆ, ಮಿಥ್ಯಾಗುಣಗಳಿಂದಲೇ ಪ್ರವರ್ತಿಸುತ್ತಿದೆ, ಮಗೂ.

**ಭಕ್ತ:** ಹಾಗಾದರೆ, ಈ ಮಿಥ್ಯೆ ವಿಷಯವನ್ನು ಬಿಟ್ಟು, ಸತ್ಯದ ವಿಷಯವನ್ನೆ, ಆ ಪುರುಷನು ಯಾರೋ ಅದನ್ನು ಕೊಂಚ ತಿಳಿಸಿಕೊಡಿ, ಸ್ವಾಮಿ.

**ಸ್ವಾಮಿ :** ನಿಜ ಪುರುಷನಿಗೆ ಹುಟ್ಟು ಸಾವುಗಳಿಲ್ಲ, ಅವನಿಗೆ ರೂಪಾಂತರವೂ ಇಲ್ಲ. ಈತನು ಚಿತ್ ಸ್ವರೂಪನು, ಜ್ಞಾನ ಸ್ವರೂಪನು. ಜ್ಞಾನವು ಆತನ ಸ್ವರೂಪವೇ ಹೊರತು, ಧರ್ಮವಲ್ಲ. ಈ ಜ್ಞಾನವು ಸ್ವಲ್ಪ ಸಮಯ ಇದ್ದು ಸ್ವಲ್ಪ ಸಮಯ ಇಲ್ಲದೆ ಹೋಗುವಂತಹುದಲ್ಲ. ಬೆಳಕಿನ ಸ್ವಭಾವವೇನೆಂದರೆ ಅದರಲ್ಲಿ ಕತ್ತಲು ಸ್ವಲ್ಪವೂ ಇರದು. ಪ್ರಪಂಚದಿಂದ ಸೂರ್ಯನು ಪ್ರಕಾಶಗೊಳ್ಳುತ್ತಿಲ್ಲ. ಪ್ರಪಂಚವಿರಲಿ ಬಿಡಲಿ ಸೂರ್ಯನು ಪ್ರಕಾಶಿಸುತ್ತಲೇ ಇರುವನು. ಯಾವುದಕ್ಕೆ ಏನು ಸ್ವಭಾವವೋ ಎಂದೂ ಹೋಗದು. ಪುರುಷನು ಸ್ವಪ್ರಕಾಶನು. ಆತನು ಬಲ್ಲವನು, ಸದಾ ಎಚ್ಚರದಲ್ಲಿರುವವನು. ಚಿತ್ತದಲ್ಲಿ ಏನು ವೃತ್ತಿ ಆದರೂ ಆತನಿಗೆ ತಿಳಿಯದಿರದು. ಚಿತ್ತಕ್ಕೆ ಒಮ್ಮೆ ತಿಳಿಯುವುದು ಮತ್ತೊಮ್ಮೆ ತಿಳಿಯದಿರುವುದು ಉಂಟು. ಆದರೆ, ಪುರುಷನು ಹಾಗಲ್ಲ. ಆತನು ಅಪರಿಣಾಮಿ. ಪರಿಣಾಮಿಗೆ ಬದಲಾಗುವ ಸ್ವಭಾವ, ಆದ್ದರಿಂದ ಚಿತ್ತವು ಪರಿಣಾಮಿ. ಪುರುಷನು ಜ್ಞಾನ ಸ್ವರೂಪನು ಆದ್ದ ರಿಂದ ಆತನ ಜ್ಞಾನಕ್ಕೆ ಎಂದೂ ಬದಲಾವಣೆಬಾರದು. ಪುರುಷನಲ್ಲಿ ವ್ಯಾಪಾರದ ಸಂಚಾರವಿರುದಿಲ್ಲ. ಕ್ರಿಯೆಯಿಲ್ಲದೆಯೂ ಪ್ರಕಾಶತೆಯೇ ಪುರುಷನ ಸ್ವರೂಪ. ನೆಲದಲ್ಲಿ ಹೂತಿದ್ದ ಬೀಜ ವೃಕ್ಷವಾಗಿ ಪರಿಣಮಿಸುವುದು. ವೃಕ್ಷವು ಬೀಜದ ಒಂದು ವಿಕಸಿತರೂಪ. ಬೀಜವು ವೃಕ್ಷದ ಅಪ್ರಕಟಿತರೂಪ. ಈ ಪರಿಣಾಮದ ಮೂಲ ನೋಡಿದರೆ ಬೀಜ ಶಕ್ತಿಯ ಕ್ರಿಯೆ ಕಂಡುಬರುವುದು. ಬೀಜವು ವೃಕ್ಷವಾಗಿ ಹೊಮ್ಮುವುದು. ಇದು ಪರಿಣಾಮ. ಪುರುಷನು ಮಾರ್ಪಾಟಾಗದ ದೃಷ್ಟ. ಈತನ ಸ್ವಬೋಧೆಗೆ, ಕಿರಣಗಳ ಅಪೇಕ್ಷೆ ಇಲ್ಲದವನು. ಪ್ರಕೃತಿ ಸಂಬಂಧಕ್ಕಿಂತ ಪೂರ್ತಿ ಯಾಗಿ ಬೇರೆಯಾಗಿರುವವನು ಪುರುಷನು. ಪುರುಷನ ಯಾವ ಕ್ರಿಯೆಯ ಅರ್ಥ ಮಾಡಿಕೊಳ್ಳಲಾಗದು.

**ಭಕ್ತ:** ಇದರಲ್ಲಿ ಪ್ರಕೃತಿ ಯಾವುದು? ಪುರುಷನು ಯಾರು ಸ್ವಾಮಿ?

**ಸ್ವಾಮಿ :** ಪ್ರಕೃತಿ ಪುರುಷರು ಮೂಲ ತತ್ತ್ವಗಳು. ದೃಶ್ಯ ಭಾವಕ್ಕೆಲ್ಲ ಮೂಲ, ಪ್ರಕೃತಿ. ದೃಷ್ಟ ಭವಕ್ಕೆಲ್ಲ ಮೂಲ, ಪುರುಷ. 'ಅಮೂಲವೇ' ಮೂಲ. ನ್ಯಾಯವಾಗಿ ಇವನಿಗೆ ಕಾರಣಾಂತರಗಳು ಇಲ್ಲ. ಕಾರಣವಿಲ್ಲದ್ದು ಅನಾದಿ. ಆದ್ದರಿಂದ ಪ್ರಕೃತಿಯು ಅನಾದಿ, ಪುರುಷನೂ ಅನಾದಿ.

**ಭಕ್ತ:** ಪ್ರಕೃತಿಯೂ ಅನಾದಿ, ಪುರುಷನೂ ಅನಾದಿ. ಆದರೆ ಪ್ರಕೃತಿ ಪುರುಷರ ಸಂಯೋಗದಿಂದ ಆದ ಸಂಸಾರವು ಯಾತಕ್ಕೆ ಅನಾದಿಯಾಗುವುದಿಲ್ಲ?

**ಸ್ವಾಮಿ :** ಸಂಸಾರವು ಸಕಾರಣವೇ ಹೊರತು ನಿಷ್ಕಾರಣವಲ್ಲ. ಸಂಯೋಗವು ಅವಿವೇಕದ ಕಾರಣದಿಂದಾಗುತ್ತದೆ. ಅವಿವೇಕಾದಿಗಳಿಂದ ಸಂಯೋಗ, ಸಂಯೋಗದಿಂದ ಮತ್ತೆ ಅವಿವೇಕ. ಹೀಗೆ ಸಂಯೋಗವು ಅವಿವೇಕಿಗಳ ಅನಾದಿತ್ವ ಬೀಜ ವೃಕ್ಷಗಳ ನ್ಯಾಯ.

**ಭಕ್ತ:** ಸಂಯೋಗವೆಂದರೇನು? ಅದರ ಸ್ಥಿತಿ ಎಂತಹುದು?

**ಸ್ವಾಮಿ :** ಪ್ರಕೃತಿಯ ಪರಿಣಾಮದಿಂದಾಗುವ ಗುಣಗಳಲ್ಲಿ ಪುರುಷನ ಪ್ರತಿಬಿಂಬವನ್ನು ನೋಡು. ಒಂದು ಉಪಮಾನ, ಸೂರ್ಯನು ನೀರು ಅಲ್ಲ; ನೀರು ಸೂರ್ಯನಲ್ಲ. ಹೀಗಿದ್ದರೂ ಇವೆರಡಕ್ಕೂ ಸಂಯೋಗವಾದಾಗ ಪ್ರತಿಬಿಂಬ ಏರ್ಪಡುವುದು. ಈ ಪ್ರತಿಬಿಂಬಕ್ಕೆ ಜಲಸ್ವಭಾವವೂ ಇಲ್ಲ, ಸೂರ್ಯ ಪ್ರಭಾವವೂ ಇಲ್ಲ ಮತ್ತೆ ಇಲ್ಲದೆಯೂ ಇಲ್ಲ. ನೀರು ಕದಲಿದಾಗ ಪ್ರತಿಬಿಂಬವೂ ಕದಲುವುದಲ್ಲವೇ ಮತ್ತೆ ಪ್ರತಿಬಿಂಬದಲ್ಲಿ ಪ್ರಕಾಶವೂ ಇರುವುದು. ಈ ಪ್ರತಿಬಿಂಬವು ಸೂರ್ಯನ ಸ್ವರೂಪವೂ ಅಲ್ಲ, ವಿರೂಪವೂ ಅಲ್ಲ. ಅಯಸ್ಕಾಂತ ಕಬ್ಬಿಣಕ್ಕಿಂತ ಬೇರೆ, ಕಬ್ಬಿಣ ಅಯಸ್ಕಾಂತಕ್ಕಿಂತ ಬೇರೆ. ಆದರೆ ಇವೆರಡೂ ಸಾಮೀಪ್ಯಕ್ಕೆ ಬಂದಾಗ ಅಯಸ್ಕಾಂತದ ಧರ್ಮವು ಕಬ್ಬಿಣದಲ್ಲಿ ಪ್ರವೇಶಹೊಂದುತ್ತದೆ, ಅಲ್ಲದೆ ಅಯಸ್ಕಾಂತವು ಕಬ್ಬಿಣವನ್ನು ತನ್ನದಾಗಿ ಮಾಡಿಕೊಳ್ಳುವುದಲ್ಲವೆ? ಇವೆರಡರ ಮಧ್ಯೆ ಇರುವ ಸಂಬಂಧವೇ ಸಂಯೋಗ.

**ಭಕ್ತ:** ಆದರೆ, ಇವರಲ್ಲಿ ನಿಜ ಪುರುಷನು ಯಾರು? ವ್ಯವಹಾರಿಕ ಪುರುಷನು ಯಾರು? ಅವರವರ ಪ್ರವರ್ತನೆ ಎಂಥವೋ? ದಯವಿಟ್ಟು ತಿಳಿಸಿಕೊಡಿ.

**ಸ್ವಾಮಿ :** ಸೂರ್ಯನು ಪ್ರತಿಬಿಂಬವೆಂದು ಹೇಳಿದೆನಲ್ಲವೆ? ಆ ಪ್ರತಿಬಿಂಬ ಪುರುಷನು, ಪುರುಷನಿಗೆ ಸರೂಪನೂ ಅಲ್ಲ, ನಿರೂಪನೂ ಅಲ್ಲ. ವಿಷಯಗಳಿಗೂ ಬಿಂಬಕ್ಕೂ ನಡುವಿನ ಈ ಪ್ರತಿಬಿಂಬ ಪುರುಷನಿಂದ ಪ್ರಪಂಚ ವ್ಯವಹಾರವೇ

ಇಲ್ಲ. ಪ್ರತಿಬಿಂಬ ಪುರುಷನೇ ಭೋಕ್ತ, ಕರ್ತ ಅನುಭವಿತ. ಬಿಂಬ ಪುರುಷನು ಶುದ್ಧ ಪುರುಷನು, ಇವನು ಅಭೋಕ್ತ. ಅಕರ್ತ, ಅನನುಭವಿತ ಪ್ರತಿಬಿಂಬದ ಈ ಪುರುಷನಿಗೆ ವ್ಯಾವಹಾರಿಕ ಪುರುಷ ಅಥವಾ ಗೃಹೀತ ಎಂಬ ಹೆಸರುಗಳು. ಬಿಂಬ ಪುರುಷನಿಗೆ, ಸತ್ಯವಾದ ನಿತ್ಯವಾದ ಆತ್ಮ ಸ್ವರೂಪನಿಗೆ ಯಥಾರ್ಥ ಪುರುಷನೆಂದು ಹೆಸರು. ಗೃಹೀತ ವಿಕಾರಿಯೆಂದೂ ಜ್ಞಾತನೆಂದೂ ತಿಳಿದುಕೊಳ್ಳತಕ್ಕದ್ದು.

**ಭಕ್ತ:** ಸರಿ, ಚೆನ್ನಾಗಿದೆ ಸ್ವಾಮಿ, ಒಳ್ಳೆಯ ಬೋಧನೆ. ಇಂತಹ ಯಥಾರ್ಥವನ್ನು ತಿಳಿದುಕೊಳ್ಳಬೇಕಾದರೆ ಎಷ್ಟು ಪುಸ್ತಕಗಳನ್ನು ತಿರುಗಿಸಬೇಕಾಗಿತ್ತೋ ಏನೋ; ತಿರುಗಿಸಿದ ಮಾತ್ರಕ್ಕೆ ಅರ್ಥಮಾಡಿಕೊಳ್ಳುವುದು ಮತ್ತಷ್ಟು ಕಷ್ಟವಾಗಿದ್ದಿರಬಹುದು. ಪುರುಷನು ಲೋಕದಲ್ಲಿ ಇಲ್ಲವೆಂದೂ ಇವೆಲ್ಲವೂ ಲೋಕಾನುಭವಾರ್ಥವೆಂದು, ಆಚರಿಸುವ ನಾಟಕವೆಂದು ತಿಳಿಯಿತು. ನಿಜ ಪುರುಷನು ಆತ್ಮನೊಬ್ಬನೆ. ಅಂತಹ ಪರಮಾತ್ಮನನ್ನು ಸೇರಲು ಪ್ರಕೃತಿಯಲ್ಲಿ ಪ್ರತಿಯೊಂದು ಕಾತರ ಪಡುತ್ತಿದೆ. ಅದನ್ನೇ ಶಿವ–ಶಕ್ತಿ ಐಕ್ಯತೆಯೆನ್ನುವರೇನೋ. ಭಲೇ ಭಲೇ!

**ಸ್ವಾಮಿ :** ಹೌದು. ಅದೇ ಜೀವಬ್ರಹ್ಮ ಐಕ್ಯತೆಯೆಂಬುದು. ಅಂತಹ ಐಕ್ಯತೆಯನ್ನು ಯಾರೇ ಆಗಲಿ ಆಶಿಸಿಯೇ ತೀರಬೇಕು. ಇಲ್ಲವಾದರೆ, ಜೀವಿಯು ಎಷ್ಟು ಕಾಲವಾದರೂ ಏಕಾಂಗಿಯಾಗಿ ಇರಲಾರದು, ಸಾಧ್ಯವಿಲ್ಲ. ಅಂತಹ ಐಕ್ಯತೆಯನ್ನೇ ಆಶಿಸಿ ಮಾಡುವ ಸಾಧನೆಗಳನ್ನೇ ಪಾರಮಾರ್ಥ ಸಾಧನೆ, ಮೋಕ್ಷ ಸಾಧನೆಯೆಂದು ಕರೆಯುವರು.

**ಭಕ್ತ:** ಮೋಕ್ಷವೆಂದರೇನು? ಮುಕ್ತಿಯೆಂದರೇನು ಸ್ವಾಮಿ?

**ಸ್ವಾಮಿ :** ಮೋಕ್ಷಕ್ಕೂ ಮುಕ್ತಿಗೂ ಒಂದೇ ಅರ್ಥ. ಜೀವಿಯ ಮುಕ್ತಾಯವನ್ನು ಮುಕ್ತಿ ಎನ್ನುವರು. ಅಂದರೆ ಮನಸ್ಸಿನಿಂದೊಡಗೂಡಿರುವುದು ಜೀವಿ; ಆ ಮನೋ ರೂಪ ನಾಮಗಳು ಕ್ಷೀಣಿಸಿದಾಗಲೇ ಮೋಕ್ಷವೆನ್ನುವರು; ಅವು ಕ್ಷೀಣಿಸಿ ಮನೋನಾಶನ ವೇರ್ಪಾಡಾದಾಗಲೇ ಜೀವಿಯು ಬ್ರಹ್ಮನಲ್ಲಿ ಐಕ್ಯವಾಗುವನು. ಗೋದಾವರಿ, ಗಂಗಾ ನದಿಗಳು ತಮ್ಮ ತಮ್ಮ ಸೀಮೆಯಲ್ಲಿದ್ದರೆ ರೂಪ, ರುಚಿ, ನಾಮ ಎಷ್ಟರವರೆಗೆ? ಸಮುದ್ರವನ್ನು ಸೇರುವವರೆಗೆ ಮಾತ್ರ. ಯಾವಾಗ ಈ ಮೂರೂ ಅಳಿಸುವುದೋ ಆಗ ಮಾತ್ರ ಸಮುದ್ರದೊಡನೆ ಐಕ್ಯವಾಗುವುದು. ಆವಾಗ ಸಮುದ್ರದ ರೂಪ ನಾಮಗಳೇ ಬರುವುದು. ಈ ನದಿಗೂ ಸಹ. ಹಾಗೆಯೇ ಈ ಜೀವಿಗಳೆಂಬ ನದಿಗಳು ಗುಣಾದಿಗಳು ಹೋಗುವವರೆಗೂ ವ್ಯಾಮೋಹ, ಮಮಕಾರ, ಅಹಂಕಾರ ಮುಂತಾದ ರೂಪ, ರುಚಿ, ನಾಮಗಳನ್ನು ಧರಿಸಿರುವುದು. ಇದು ಪರಮಾತ್ಮ

ಅನುಗ್ರಹ ಸಾಗರದ ಬಳಿಗೆ ಹತ್ತಿರ ಹತ್ತಿರ ಹೋದಾಗ, ಈ ವ್ಯಾಮೋಹ, ಮಮಕಾರ, ಅಹಂಕಾರಗಳು ಬದಲಾಗುತ್ತ ಬದಲಾಗುತ್ತ ಬರುವುದು. ಯಾವಾಗ ಈ ಗುಣಾದಿಗಳು, ಮನೋ ಭಾವಗಳು ಸಂಪೂರ್ಣ ನಶಿಸುವುದೋ ಆಗ ಬ್ರಹ್ಮನಲ್ಲಿ ಐಕ್ಯವಾದಹಾಗೆ ಭಾಸವಾಗುವುದು. ಹೀಗೆ ರುಚಿ, ನಾಮಗಳು ಇರುವವರೆಗೂ ಐಕ್ಯತೆ ಕೈಗೂಡದು. ಸಮುದ್ರವನ್ನು ಸೇರಿದ ಗಂಗೆಗೆ ಸಿಹಿ ಹೇಗಿರುವುದು? ಆ ರುಚಿಯೇ ಇದ್ದಲ್ಲಿ ಸಮುದ್ರವನ್ನು ಸೇರಲಿಲ್ಲವೆಂದರ್ಥ. ಅಂತೆಯೇ ಬ್ರಹ್ಮನಲ್ಲಿ ಐಕ್ಯವಾಗಬೇಕಾದರೆ, ಈ ಗುಣ ಮನೋ ರುಚಿಗಳು ಇರಕೂಡದು. ಹಾಗಿದ್ದಲ್ಲಿ ಇನ್ನೂ ಸಂಪೂರ್ಣ ಐಕ್ಯವು ಆಗಲಿಲ್ಲವೆಂದು ರುಜುವಾತಾಗುವುದು. ತಿಳಿಯಿತೇ ಅಂತಹ ಮುಕ್ತಿಯನ್ನು ಸಾಯುಜ್ಯ ಮುಕ್ತಿ ಎನ್ನುವರು, ಮಗೂ!

**ಭಕ್ತ:** ಸರಿ ಚೆನ್ನಾಗಿದೆ, ಸ್ವಾಮಿ. ಅಂತಹ ಪವಿತ್ರ ಐಕ್ಯತೆಗೆ ಪ್ರತಿಯೊಬ್ಬರನ್ನೂ ಅನುಗ್ರಹಿಸಿ; ಲೋಕವು ತಂಪಾಗಿರುತ್ತದೆ.

**ಸ್ವಾಮಿ:** ಅನುಗ್ರಹಿಸುವುದು ಸ್ವತಂತ್ರವಲ್ಲವೆ, ಅನುಗ್ರಹವನ್ನು ಸಂಪಾದಿಸುವಂತಹ ಸಾಧನೆಗಳನ್ನು ಮಾಡಿದರೆ, ಅನುಗ್ರಹವು ತನ್ನ ಪಾಡಿಗೆ ತಾನೇ ಲಭಿಸುವುದು. ಕೊಡುವಂತಹ ವಸ್ತುವಲ್ಲವದು. ಪ್ರಕಾಶಿಸುವ ಸೂರ್ಯನಿಗೆ ಕಿರಣಗಳನ್ನು ನೀಡು ಎಂದು ಕೇಳಬೇಕಿಲ್ಲ. ಪ್ರಕಾಶ ಶಕ್ತಿ ತನ್ನ ಸ್ವಭಾವ. ಅದಕ್ಕೆ ಅಡ್ಡಿ ಪಡಿಸದೆ, ಇರುವ ಅಡಚಣೆಗಳನ್ನು ತೆಗೆದು ಸೂರ್ಯನ ಕಿರಣಗಳಿಗೆ ಒಡ್ಡಿ ನಿಂತರೆ ಅವೇ ಬೀಳುವುದು. ಪ್ರಕಾಶಿಸುವ ಅನುಗ್ರಹ ಕಿರಣಗಳಿಗೆ ವ್ಯಾಮೋಹ, ಮಮಕಾರ, ಅಹಂಕಾರ ಅನ್ನುವ ಅಡೆತಡೆಗಳನ್ನು ಇಟ್ಟುಕೊಂಡು, ಆ ಕಿರಣಗಳು ನಮ್ಮ ಮೇಲೆ ಬೀಳಲಿಲ್ಲವೆಂದರೆ ಯಾರ ತಪ್ಪು? ಕಿರಣಗಳೇನುಮಾಡಿತ್ತು.

**ಭಕ್ತ:** ಈಗ ನಾವು ಈ ಮಮಕಾರ, ಅಹಂಕಾರವೆಂಬ ವಾಸನೆಗಳಿಂದ ದೂರವಾಗ ಬೇಕೆಂಬ ಅರ್ಥವೆ?

**ಸ್ವಾಮಿ:** ಹೇಳುವುದೇನಿದೆ? ಅಕ್ಷರಶಃ ಆಗಬೇಕು, ನಿಶ್ಚಿತವಾಗಿ ಆಗಬೇಕು. ಅಂತಹ ಅನುಗ್ರಹ ಕಿರಣಗಳಿಗೆ ಆಶಿಸುವೆಯಾ, ಹಾಗಾದರೆ ಪ್ರಯತ್ನಿಸು. ಇಲ್ಲ, ಈ ಹೊಲಸು ಗುಂಟೆಯಲ್ಲಿ ಈಜಾಡುವೆಯಾ? ಅನುಗ್ರಹ ಚಿಂತೆಯು ಅನವಸರ. ಈಗ ಬೇಡದಿದ್ದರೂ ಇನ್ನು ಕೊಂಚ ಕಾಲಾನಂತರ, ಇಲ್ಲ ಇನ್ನು ಕೆಲವು ಜನ್ಮಾಂತರವಾದರೂ ಆಶಿಸದೆ ತಪ್ಪದು. ವ್ಯಾಮೋಹ, ಅಹಂಕಾರಗಳನ್ನು ಬಿಡದೆ ತಪ್ಪದು. ಎಲ್ಲಿಯವರೆಗೆ ಆ ಸಾಧನೆ ಜರುಗಿಸುವುದಿಲ್ಲವೊ ಅಲ್ಲಿಯವರೆಗೆ ಈ ಬಾಧೆಗಳನ್ನು ಹೊರಬೇಕು.

ಸಾಧ್ಯವಾದಷ್ಟು ಬೇಗನೆ, ಪವಿತ್ರತೆಯನ್ನು ಹೊಂದುವ ಮುಮುಕ್ಷುವಾಗು, ಯಾಕೆ ಆಗಬಾರದು? ಈವತ್ತಿನಿಂದಲೇ ಈ ಕ್ಷಣದಿಂದಲೇ ಕ್ರಮ ಕ್ರಮವಾಗಿ ಪ್ರಯತ್ನಿಸು. ಹೋಗಿ ಬಾ! ಪ್ರಯತ್ನವನ್ನು ಮಾತ್ರ ತೀವ್ರವಾಗಿಸಬೇಡ; ಶಾಂತವಾಗಿ ಪ್ರಯತ್ನಿಸು.

# ಅಧ್ಯಾಯ ೧೦

**ಸ್ವಾಮಿ :** ಏನು ಬಹಳ ಆನಂದದಿಂದಿರುವ ಹಾಗೆ ಕಾಣಿಸುತ್ತಿದ್ದೀಯ?

**ಭಕ್ತ :** ಮಾನವನು ಆನಂದಮಯನೆಂದು ತಾವೇ ತಿಳಿಸಿಕೊಟ್ಟಿದ್ದೀರಲ್ಲಾ.

**ಸ್ವಾಮಿ :** ಆದರೆ ಯಾವಾಗಲೂ ಈಗ ಹೇಳಿದಂತೆ ಇದೇ ಸ್ಥಿತಿಯಲ್ಲಿರಬೇಕಲ್ಲವೇ? ಹಾಗಿರುತ್ತಿದ್ದೀಯಾ?

**ಭಕ್ತ :** ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದೇನೆ.

**ಸ್ವಾಮಿ :** ಪ್ರಯತ್ನವೇನು ಬಂತು; ಯಥಾರ್ಥವು ತಿಳಿದರೆ ಒಂದು ಮಾತಿನಿಂದಲೇ ಚಿಂತೆ, ದುಃಖಗಳು ಹಾರಿಹೋಗುವುದಲ್ಲವೆ?

**ಭಕ್ತ :** ಯಥಾರ್ಥವೆಂದರೇನು ಸ್ವಾಮಿ?

**ಸ್ವಾಮಿ :** ಇರುವುದೆಲ್ಲವೂ ಅಸತ್ಯವೆ. ಪಡುವ ಕಷ್ಟ, ಆಡುವ ಮಾತುಗಳು ಪ್ರತಿಯೊಂದೂ ಅಸತ್ಯವೇ ಎಂದು ತಿಳಿದುಕೊಂಡಾಗ ಯಥಾರ್ಥವು ಖಂಡಿತವಾಗಿಯೂ ಗೋಚರಿಸುವುದು. ಇಷ್ಟು ಅಸತ್ಯಭಾವಗಳು ಊಹೆಗಳು, ಕರ್ಮಗಳೆಲ್ಲವನ್ನು ತೆಗೆದು ಹಾಕಿದಾಗ ಅದರಾಚೆಗಿನ ಸತ್ಯ ಕಾಣಿಸುವುದು. ಇವೆಲ್ಲವನ್ನು ಮೇಲೆ ಹಾಕಿಕೊಂಡು ಸತ್ಯವು ಯಾವುದೆಂದರೆ ಹೇಗೆ ಕಂಡುಬರುವುದು?

**ಭಕ್ತ :** ಇವೆಲ್ಲವೂ ನೋಡಿದ್ದು, ಮಾಡಿದ್ದು, ನುಡಿದದ್ದು, ಅನಿಸಿಕೊಂಡದ್ದು, ಅನುಭವಿಸಿದ್ದು ಇವೆಲ್ಲವೂ ಹೇಗೆ ಅಸತ್ಯವೆಂದು ತಿಳಿಯಲಾಗುತ್ತದೆ?

**ಸ್ವಾಮಿ :** ಮೊದಲು ಇವೆಲ್ಲವನ್ನೂ ಅನುಭವಿಸುತ್ತಿರುವುದು ಯಾರು ಎಂದು ತಿಳಿದುಕೊ. ನೀನು ಈ ದೇಹವನ್ನು 'ನಾನು' 'ನಾನು' ಎಂದು ಹೇಳುತ್ತಿದ್ದೀಯೆ ಅಲ್ಲವೆ? ಅದು ಅಸತ್ಯ. ಅನುಭವಿಸುತ್ತಿರುವ 'ನಾನು'ವೇ ಅಸತ್ಯವಾಗಿರುವಾಗ ಅನುಭವವು

ಸತ್ಯವಾಗಿರುವುದು ಹೇಗೆ ಸಾಧ್ಯ? ಎಲ್ಲರಲ್ಲೂ ಅದೇ ಆತ್ಮವಿದೆ, ಅನುಭವ ಪಡೆದವರು 'ನೀನು' ಅಲ್ಲ, ಕೇಳಿದವನು 'ನೀನು' ಅಲ್ಲ. ನೀನು ಇದೆಲ್ಲಕ್ಕೂ ಸಾಕ್ಷಿಯಾಗಿದ್ದೆ ಅಷ್ಟೆ.

**ಭಕ್ತ:** ಎಲ್ಲದರಲ್ಲೂ ಆತ್ಮವಿದೆ ಎಂದು ತಾವು ಹೇಳಿದಿರಿ. ಮನುಷ್ಯನ ಮೃತದೇಹದಲ್ಲೂ ಆತ್ಮವಿದೆಯೆ?

**ಸ್ವಾಮಿ:** ಆಹಾ! ಒಳ್ಳೆಯ ಪ್ರಶ್ನೆ. ಇದು ನಿನ್ನ ಸಂದೇಹವೋ ಮೃತನಾದ ವ್ಯಕ್ತಿಯ ಸಂದೇಹವೊ?

**ಭಕ್ತ:** ನನ್ನದು ಸ್ವಾಮಿ.

**ಸ್ವಾಮಿ:** ಆಳವಾದ ನಿದ್ದೆ ಅಥವಾ ಸುಷುಪ್ತಿಯಿಂದ ಎಚ್ಚೆತ್ತ ಮೇಲೆ ಮಾತ್ರವೇ 'ನಾನು' ಎಂಬುದಿದೆ ಎಂದು ನಿನಗೆ ಗೊತ್ತಾಗುವುದು ಅಲ್ಲವೆ? ಹಾಗೆಯೇ ಶವದಲ್ಲೂ ಆತ್ಮವಿದೆ.

**ಭಕ್ತ:** ಹಾಗಿದ್ದ ಮೇಲೆ ಅದನ್ನು ಮೃತ ಎಂದು ಕರೆಯುವುದು ಹೇಗೆ? ಆತ್ಮ ಇರುವಾಗ ಸಾವು ಬರುವುದು ಹೇಗೆ?

**ಸ್ವಾಮಿ:** ನೀನು ಸರಿಯಾಗಿ ವಿವೇಚನೆ ಮಾಡಿ ನೋಡಿದರೆ, ಸಾಯುವುದಾಗಲಿ ಬದುಕುವುದಾಗಲಿ ಇಲ್ಲ. ಚಲಿಸುತ್ತಿರುವ ದೇಹವನ್ನು ಬದುಕಿದೆ ಎನ್ನುತ್ತಾರೆ ಚಲನೆಯಿಲ್ಲದ ದೇಹವನ್ನು ಸತ್ತಿದೆ ಎನ್ನುತ್ತಾರೆ. ಕನಸುಗಳಲ್ಲಿ ಅನೇಕ ಮೃತದೇಹಗಳನ್ನೂ ಜೀವಿಗಳನ್ನು ನೋಡಬಹುದು, ಎಚ್ಚೆತ್ತಾಗ ಅವು ಯಾವುವೂ ಇಲ್ಲ. ಹಾಗೆಯೇ ಈ ಚರ–ಅಚರ ಜಗತ್ತು ಅಸ್ತಿತ್ವದಲ್ಲಿಲ್ಲ... ಸಾವು ಎಂದರೆ 'ನಾನು' ಪ್ರಜ್ಞೆಯು ಅಳಿಸುತ್ತಾ ಹೋಗುವುದು. ಪುನರ್ಜನ್ಮ ಬರುವುದು ಮತ್ತೆ ಆ 'ನಾನು' ಪ್ರಜ್ಞೆ ಬಂದಾಗ ಇದೇ ಹುಟ್ಟು–ಸಾವು, ಮಗು, ಅಹಂ–ಕಾರ ಹುಟ್ಟುತ್ತದೆ, ಅಹಂ–ಕಾರ ಸಾಯುತ್ತದೆ, ಅಷ್ಟೆ.

**ಭಕ್ತ:** ಹಾಗಾದರೆ ನಾನು ಯಾವಾಗಲೂ ಇರುತ್ತೇನೆ, ಹಾಗೆ ತಾನೆ?

**ಸ್ವಾಮಿ:** ಹೌದು. 'ನಾನು' ಪ್ರಜ್ಞೆ ಇರುವಾಗ ನೀನು ಇರುತ್ತೀಯೆ. ಅದಿಲ್ಲದಾಗಲೂ ನೀನು ಇರುತ್ತೀಯೆ. ಅರಿವಿಗೆ ನೀನು ಏಕೈಕ ಆಧಾರ; ನೀನೇ ಅರಿವಲ್ಲ.

**ಭಕ್ತ**: 'ಮೋಕ್ಷವನ್ನು ಪಡೆಯುವುದು,' 'ಮುಕ್ತಿಯನ್ನು ಗಳಿಸುವುದು' ಎಂದೆಲ್ಲಾ ಹೇಳುವರಲ್ಲಾ, ಅದೇನು?

**ಸ್ವಾಮಿ**: ಜನನ–ಮರಣಗಳ ಮೂಲವನ್ನು ಅರ್ಥ ಮಾಡಿಕೊಂಡು, ಪ್ರತ್ಯೇಕ 'ನಾನು' ಪ್ರಜ್ಞೆಯನ್ನು ನಾಶಪಡಿಸಬೇಕು; ಆ ಸ್ಥಿತಿಯೇ ಮುಕ್ತಿ.

**ಭಕ್ತ**: ಹಾಗಾದರೆ, ನಾನು ಸತ್ತಾಗ, ನೀವು ಮತ್ತು ನಾನು ಎಲ್ಲ ಒಂದೇ ಅಲ್ಲವೆ?

**ಸ್ವಾಮಿ**: ಅಲ್ಲವೆಂದು ಯಾರು ಹೇಳಿದರು? ನೀನು ಆ ಏಕತೆಯ ಭಾವನೆಯಲ್ಲಿ ಸ್ಥಿರವಾಗಿ ನೆಲೆ ನಿಂತಾಗ ಬೇರೆ ಎನ್ನುವುದೇ ಇಲ್ಲ.

**ಭಕ್ತ**: ಅಲ್ಲಿಯವರೆಗೆ, ಮಿಥ್ಯಾ 'ನಾನು'ವಿನಲ್ಲಿ ಸತ್ಯವಾದ 'ನಾನು'ವನ್ನೂ ಗುರುತಿಸುವ ಸಲುವಾಗಿ ಒಬ್ಬ ಗುರುವಿನ ಸಹಾಯ ಬೇಕು ಎಂದು ಹೇಳುತ್ತಾರೆ; ಅದು ಎಷ್ಟುಮಟ್ಟಿಗೆ ಸರಿ ಸ್ವಾಮಿ?

**ಸ್ವಾಮಿ**: ಹಲವಾರು 'ನಾನು'ಗಳಿದ್ದಾಗ ಬೇರೊಬ್ಬರ ಸಹಾಯ ನಿನಗೆ ಬೇಕು ಅಲ್ಲವೆ? ಎಲ್ಲವೂ ಒಂದೇ ಆದಾಗ ಇನ್ನೊಬ್ಬರ ಆಶ್ರಯವೇಕೆ? ಆದರೂ ಆ 'ನಾನು' ಅಹಂಕಾರ ಅಳಿಸಿಹೋಗುವವರೆಗೆ, ಮಾತಾಡುವ 'ನಾನು,' ಕೇಳುವ 'ನೀನು' ಇರಲೇ ಬೇಕಾಗುತ್ತದೆ. 'ನಾನು' ಹೋದರೆ ಯಾರಿಗೆ ಮಾತನಾಡಬೇಕು? ಕೇಳುವವರು ಯಾರು? ಎಲ್ಲವೂ ಒಂದೇ ಆಗಿಬಿಟ್ಟಿರುತ್ತದೆ. ಆತ್ಮದ ಪ್ರತಿ ಬಿಂಬವು ಚಿತ್‌ನಿಂದ ಪರಿಹಾರಗೊಂಡಾಗ ಈಶ್ವರ; ಅಂತಃಕರಣದಿಂದ ಪರಿಣಾಮಗೊಂಡ ಈಶ್ವರನೇ ಜೀವ, ಅಲ್ಲವೆ?

**ಭಕ್ತ**: ಹಾಗಾದರೆ ಖಚಿತವಾಗಿ ಈ ಚಿದಾಭಾಸ ಎನ್ನುವುದೇನು?

**ಸ್ವಾಮಿ**: ಚಿದಾಭಾಸ ಎಂದರೆ ಚಿತ್‌ನಿಂದ ಪರಿಣಾಮಗೊಂಡ ನಾನು ಪ್ರಜ್ಞೆ; ಆ ಒಂದು ಮೂರಾಗುತ್ತವೆ, ಮೂರು ಐದಾಗುತ್ತವೆ, ಐದು ಅನೇಕವಾಗುತ್ತವೆ. 'ನಾನು' ಪ್ರಜ್ಞೆಯು(ಸತ್ವ) ರಜಸ್ ಮತ್ತು ತಮಸ್‌ಗಳೊಂದಿಗೆ ಸಂಪರ್ಕಗೊಂಡು ಮೂರಾಗುತ್ತದೆ; ಆ ಮೂರರಲ್ಲಿ ಪಂಚಭೂತಗಳು ಹುಟ್ಟಿದುವು; ಆ ಪಂಚಭೂತಗಳ ಮೂಲಕ ಈ ಸಕಲ ವೈವಿಧ್ಯಗಳು ಸಂಭವಿಸಿದುವು. 'ನಾನು' ಎನ್ನುವುದು ದೇಹ ಎಂಬ ಭ್ರಮೆಯನ್ನು ಉಂಟುಮಾಡುವುದು ಇದೇಯೆ. ಆಕಾಶದ ವಿಷಯವಾಗಿ ಹೇಳುವುದಾದರೆ ಅವು ಮೂರು ಬಗೆಯಾಗಿವೆ. ಚಿದಾಕಾಶ, ಚಿತ್ತಾಕಾಶ ಮತ್ತು ಭೂತಾಕಾಶ.

**ಭಕ್ತ**: ಚಿದಾಕಾಶ ಎನ್ನುವುದೇನು?

**ಸ್ವಾಮಿ**: ಅದೇ ಆತ್ಮ.

**ಭಕ್ತ**: ಚಿತ್ತಾಕಾಶ?

**ಸ್ವಾಮಿ**: ಅದರ ಒಂದು ಹೋಲಿಕೆ. ಅಂದರೆ, ಚಿತ್ತ. ಅದು ಮನಸ್ಸು, ಬುದ್ಧಿ ಮತ್ತು ಅಹಂಕಾರವಾಗಿ ಪರಿವರ್ತನೆಗೊಂಡಾಗ ಅದನ್ನು ಅಂತಃಕರಣ ಎನ್ನಲಾಗುತ್ತದೆ. ಒಳಗಿನ ಇಂದ್ರಿಯಗಳು, ಅಂತರಿಂದ್ರಿಯಗಳು ಎಂದು ಅದರ ಅರ್ಥ. ಅಂತಃಕರಣಗಳನ್ನು ಹೊಂದಿರುವ ಚಿದಾಭಾಸವೇ ಜೀವ.

**ಭಕ್ತ**: ಭೂತಾಕಾಶವೆಂದರೆ?

**ಸ್ವಾಮಿ**: ಚಿತ್ತಾಕಾಶದಿಂದ ಪರಿಣಮಿತವಾದ ಚಿದಾಕಾಶ. ಅದು ಭೂತಾಕಾಶವನ್ನು ನೋಡಿದಾಗ ಮನೋ ಆಕಾಶವಾಗಿರುತ್ತದೆ; ವಸ್ತುವನ್ನು ನೋಡಿದಾಗ ಚಿನ್ಮಯವಾಗಿರುತ್ತದೆ. ಆದ್ದರಿಂದಲೇ "ಮನುಷ್ಯನ ಬಂಧನ ಮುಕ್ತಿಗಳೆರಡಕ್ಕೂ ಮನಸ್ಸೇ ಕಾರಣ," ಎಂದು ಹೇಳಿರುವುದು. ಮನಸ್ಸು ಎಷ್ಟು ಬೇಕಾದರೂ ಭ್ರಮೆಗಳನ್ನು ಸೃಷ್ಟಿಸಬಲ್ಲುದು.

**ಭಕ್ತ**: ಆ ಭ್ರಮೆಯು ಮಾಯವಾಗುವುದು ಹೇಗೆ ಸ್ವಾಮಿ?

**ಸ್ವಾಮಿ**: ವಿಚಾರದ ಮೂಲಕ ಅದರ ರಹಸ್ಯವನ್ನು ಗ್ರಹಿಸಿದಾಗ, ಬಹಳವು ಐದರಲ್ಲಿ ಲೀನವಾಗುತ್ತವೆ; ಮೂರು ಒಂದರಲ್ಲಿ ಸೇರಿಹೋಗುತ್ತವೆ; 'ನಾನು' ನಾನಾಗಿ ಉಳಿಯುತ್ತದೆ. ನಿನಗೆ ತಲೆನೋವು ಬರುತ್ತದೆ, ನೀನು ಅಂಜನ ಹಚ್ಚುತ್ತೀಯೆ; ಅದು ಮಾಯವಾಗುತ್ತದೆ, ನೀನು ಹೇಗಿದ್ದಿಯೋ ಹಾಗೆಯೇ ಉಳಿಯುತ್ತೀಯೆ. "ನಾನು ದೇಹ" ಎಂಬ ಭ್ರಮೆಯೂ ಹೀಗೆಯೆ. ವಿಚಾರವೆಂಬ ಅಂಜನವನ್ನು ಹಚ್ಚಿದೊಡನೆ ಅದು ಮಾಯವಾಗುತ್ತದೆ.

**ಭಕ್ತ**: ಈ ವಿಚಾರ ಮಾರ್ಗವನ್ನು ಪ್ರತಿಯೊಬ್ಬರೂ ಹಿಡಯಬಹುದೆ?

**ಸ್ವಾಮಿ**: ಇಲ್ಲ, ಮಗು. ಯಾರ ಚಿತ್ತವು ಪಕ್ವವಾಗಿದೆಯೋ ಅವರಿಗೆ ಮಾತ್ರ ಅದು ಸಾಧ್ಯ.

**ಭಕ್ತ**: ಹಾಗಾದರೆ ಪಕ್ವತೆಯ ಆ ಹಂತವನ್ನು ಮುಟ್ಟಲು ನಾವು ಏನು ಮಾಡಬೇಕು?

**ಸ್ವಾಮಿ:** ಈಗ ನಾವು, ಎಲ್ಲಿಂದ ಹೊರಟೆವೋ ಅಲ್ಲಿಗೆ ಬಂದಿದ್ದೇವೆ! ಇದಕ್ಕಾಗಿ ಜಪ, ಧ್ಯಾನ, ಪೂಜೆ, ಪ್ರಾಣಾಯಾಮ ಇಂಥ ಸಾಧನೆಗಳಿಲ್ಲವೆ? ಇವುಗಳ ಮೂಲಕ ಸ್ಥಿರಗತಿಯಲ್ಲಿ ನೀನು ಪಕ್ವವಾಗುವೆ, ಸತ್ಯಾನ್ವೇಷಣೆಯಿಂದ 'ನಾನು' ಎಂಬುದನ್ನು ಅರ್ಥಮಾಡಿಕೊಳ್ಳಲು ಸಮರ್ಥನಾಗುವೆ. ಅಂಥವರಿಗೆ ಆತ್ಮವು ಅವರಿಂದ ಬೇರೆಯಾದ ಏನೋ ಒಂದಲ್ಲ. ಎಲ್ಲವೂ ಆತ್ಮವೇ!

**ಭಕ್ತ:** ಸ್ವಾಮಿ, ತಾವು ಜಪ, ಧ್ಯಾನ, ಭಜನೆ ಮೊದಲಾದವುಗಳನ್ನು ಮಾತ್ರ ಹೇಳಿದಿರಿ. ಸಾಧನೆಯಲ್ಲಿ ಮುಂದುವರಿದ ಕೆಲವರು ಮೌನವ್ರತವನ್ನು ಆಚರಿಸುತ್ತಾರೆ. ಅದರಿಂದ ಪ್ರಯೋಜನವಿದೆಯೆ? ಮೌನ ಎಂದರೆ ಸರಿಯಾದ ಅರ್ಥ ಏನು?

**ಸ್ವಾಮಿ:** ಆತ್ಮದ ಬೆಳಗುವಿಕೆಯೇ ಮೌನ. ಆತ್ಮವು ಬೆಳಗದೆ ಮೌನವಿರಲು ಸಾಧ್ಯವಿಲ್ಲ. ಅದಿಲ್ಲದೆ ಸುಮ್ಮನೆ ಬಾಯಿ ಮುಚ್ಚಿಕೊಂಡಿದ್ದರೆ ಅದು ಮೌನವಲ್ಲ. ಕೆಲವರು ಮೌನವ್ರತ ಮಾಡುತ್ತಾರೆ, ಆದರೆ ಸ್ಲೇಟಿನ ಮೇಲೋ ಕಾಗದದ ಮೇಲೋ ಬರೆದು ತಿಳಿಸುತ್ತಾರೆ. ಅಥವಾ ಅಕ್ಷರ ಪಟವನ್ನಿಟ್ಟುಕೊಂಡು ಅಕ್ಷರಗಳ ಮೇಲೆ ಬೆರಳಿಟ್ಟು ಪದಗಳನ್ನು ಸೂಚಿಸುತ್ತಾ ಹೋಗುತ್ತಾರೆ. ಇವೆಲ್ಲ ಮಿಥ್ಯಾ ಮೌನ! ಅವು ತಡೆಯಿಲ್ಲದೆ ಮಾತನಾಡುವ ಇನ್ನೊಂದು ವಿಧಾನ ಅಷ್ಟೆ. ಮೌನವನ್ನು ಗಳಿಸಬೇಕಾದ ಅಗತ್ಯವೇನಿಲ್ಲ. ಅದು ಸದಾ ನಿನ್ನೊಂದಿಗೇ ಇದೆ. ಅದನ್ನು ಕಲಕುವ ಎಲ್ಲವನ್ನೂ ತೆಗೆದುಹಾಕಬೇಕು ಅಷ್ಟೆ!

**ಭಕ್ತ:** ಆದರೆ ಅನೇಕರು ಬಾಯಿತೆರೆದು ಮಾತನಾಡುವುದಿಲ್ಲ. ಅದು ವ್ಯರ್ಥವೆ?

**ಸ್ವಾಮಿ:** ಹಾಗೆ ಯಾರು ಹೇಳಿದರು? ನಾಲಗೆಯನ್ನು ಉಪಯೋಗಿಸದಿದ್ದರೆ, ಸಾಧನೆಗೆ ಹೊರಗಿನಿಂದ ಬರುವ ಅಡ್ಡಿಗಳನ್ನು ದೂರಮಾಡಲು ಮೌನವಾಗಿದ್ದರೆ, ನಿಜವಾಗಿಯೂ ನೀನು ಚಿಂತೆಗಳನ್ನು ಬೆಳೆಸಿಕೊಳ್ಳಬಹುದು, ಇತರರ ಶಾಂತಿಯನ್ನು ಹಾಳು ಮಾಡದಿರಬಹುದು, ಟೀಕೆಯನ್ನು ತಪ್ಪಿಸಿಕೊಳ್ಳಬಹುದು, ಚಿಂತೆಯನ್ನು ದೂರ ಮಾಡಬಹುದು, ಏಕಾಗ್ರತೆ ದೊರಕುತ್ತದೆ, ಮಿದುಳಿನಿಂದ ಅನಗತ್ಯವಾದ ಹೊರೆ ಇಳಿದು ಬಹುಮಟ್ಟಿಗೆ ಸುಧಾರಿಸುತ್ತದೆ. ಅಂತಹ ಮಿದುಳಿನಿಂದ ಭಗವನ್ನಾಮ ಸ್ಮರಣೆಯನ್ನು ಉತ್ತಮ ರೀತಿಯಲ್ಲಿ ನೀನು ಮಾಡಬಲ್ಲೆ. ಸಾಧನೆ ಮಾಡ ಮಾಡುತ್ತಾ ಈ ಎಲ್ಲಾ ಅನುಕೂಲಗಳನ್ನು ತಿಳಿದುಕೊಳ್ಳುವೆ.

**ಭಕ್ತ:** ಹಾಗಾದರೆ ಪೂರ್ಣಜ್ಞಾನಿಗೆ ಇವೆಲ್ಲ ಅನಗತ್ಯವೆ?

**ಸ್ವಾಮಿ:** ಜಗತ್ತಿನಲ್ಲಿ ಪೂರ್ಣಜ್ಞಾನಿ ಎಂಬುವನಿಲ್ಲ! ಅವನಿಗೆ ಜಗತ್ತಿನ ಅಗತ್ಯವೂ ಇಲ್ಲ; ಹಾಗಿದ್ದ ಮೇಲೆ ಇವೆಲ್ಲ ಅವನಿಗೇಕೆ ಬೇಕು?

**ಭಕ್ತ:** ಹಾಗಾದರೆ ಜ್ಞಾನಿಗಳು ಯಾರು?

**ಸ್ವಾಮಿ:** ಈಗ ತಾನೆ ನಾನು ಹೇಳಿದ ಮೌನಿಗಳು. ಜ್ಞಾನಿ ಎನ್ನುವುದು ಕೇವಲ ವಿನಯದಿಂದ ಅನ್ವಯಿಸುವ ಪದ; ಪೂರ್ಣಜ್ಞಾನಿ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಜ್ಞಾನಿಯು 'ಎಲ್ಲರನ್ನೂ ಒಂದನ್ನಾಗಿ' ತಿಳಿದುಕೊಳ್ಳಬೇಕು. ನಿನ್ನ ಜ್ಞಾನಿಗಳು ಏನಿದ್ದರೂ ತರ್ಕದಲ್ಲಿ ಪರಿಣತರು, ಪ್ರಾಪಂಚಿಕ ತಿಳುವಳಿಕೆಯಲ್ಲಿ ಪರಿಣತರು. ಅವರಿಗೆ ಸತ್ಯ ತಿಳಿದಿರುವುದಿಲ್ಲ.

**ಭಕ್ತ:** ನಿಜವಾದ ಜ್ಞಾನಿಗಳು ಯಾರು?

**ಸ್ವಾಮಿ:** ಆತ್ಮವನ್ನು ಆತ್ಮವೆಂದು ಸರಿಯಾಗಿ ತಿಳಿದುಕೊಳ್ಳುವವನು ತನ್ನನ್ನೇ ಸರಿಯಾಗಿ ತಿಳಿದುಕೊಳ್ಳುತ್ತಾನೆ. ಹಾಲಿಗೆ ಹಾಲು ಬೆರೆತ ಹಾಗೆ, ಎಣ್ಣೆಗೆ ಎಣ್ಣೆ, ನೀರಿಗೆ ನೀರು ಬೆರೆತ ಹಾಗೆ, ದೇಹವು ಮೃತಪಟ್ಟಾಗ ಅವರು ಆತ್ಮದಲ್ಲಿ ವಿಲೀನವಾಗುತ್ತಾರೆ. ಆದರೆ ಕೆಲವರಲ್ಲಿ ಇನ್ನೂ ಕೆಲವು ಕುರುಹುಗಳು ಉಳಿದಿರುತ್ತವೆ. ಇನ್ನೂ ಕೆಲವು ಸಂಕಲ್ಪಗಳು, ಕಾಮನೆಗಳು ಮುಂದುವರಿದಿರುತ್ತವೆ. ಅವು ಪೂರ್ತಿಯಾಗುವವರೆಗೆ ಈ ಪ್ರಪಂಚದಲ್ಲಿ ದೇಹವನ್ನು ಧರಿಸಿ ಅಲೆಯುತ್ತಾರೆ. ಅಂಥವರನ್ನು ಮನುಷ್ಯರಾಗಿ ಜನಿಸಿದ ದೈವಾಂಶಗಳು, 'ದೈವಾಂಶ ಸಂಭೂತರು' ಎಂದೂ ಕರೆಯುತ್ತಾರೆ. ಇದು ನಡೆಯುವುದೂ ಭಗವತ್ಸಂಕಲ್ಪದಂತೆಯೇ.

**ಭಕ್ತ:** ಈ ವ್ಯತ್ಯಾಸವುಂಟಾಗುವುದಾದರೂ ಏಕೆ ಸ್ವಾಮಿ?

**ಸ್ವಾಮಿ:** ಅದು ಅವನವನ ಸಾಧನೆ ಮತ್ತು ಸಂಕಲ್ಪಗಳಿಂದ ಮೂಡುತ್ತದೆ. ಮಾವನ ಹಣ್ಣು ತಿಂದರೆ ತೇಗಿನಲ್ಲಿ ಅದರ ವಾಸನೆ ಬರುತ್ತದೆ. ಅದನ್ನು ನಿವಾರಿಸುವುದು ಹೇಗೆ? ನೀನು ತಿಂದದ್ದನ್ನು ತೇಗುತ್ತೀಯೆ.

**ಭಕ್ತ:** ಅಂತಹ ವ್ಯಕ್ತಿಗಳಿಗೂ ಮಿತಿಗಳು ಉಪಾಧಿಗಳು ಇವೆಯೆ?

**ಸ್ವಾಮಿ:** ಉಪಾಧಿಗಳಿಲ್ಲದೆ ಕೆಲಸವಾಗುವುದು ಹೇಗೆ? ಅವರಿಗೂ ಇದೆ, ಆದರೆ ಅದು ತುಂಬಾ ಸೂಕ್ಷ್ಮವಾದ ರೂಪದಲ್ಲಿ. ಅವರು ದೇಹಾತೀತವಾದ ಮೋಕ್ಷ ಅಥವಾ ವಿದೇಹ ಮುಕ್ತಿಯನ್ನು ಪಡೆಯುವವರೆಗೂ ಇರುತ್ತದೆ.

**ಭಕ್ತ:** ಅವರ ಕೆಲಸ ನೀರಿನ ಮೇಲೆ ಗೆರೆ ಎಳೆದ ಹಾಗೆ. ಗೆರೆಯೆಳೆಯುತ್ತಿರುವಾಗ ಮಾತ್ರ ಕಣ್ಣಿಗೆ ಕಾಣಿಸುತ್ತದೆ; ಅದು ಮುಗಿದೊಡನೆ ಮಾಯವಾಗಿಬಿಡುತ್ತದೆ. ಕೆಲಸವಾಗುತ್ತಿರುವಾಗ ನೀನದನ್ನು ಗಮನಿಸುತ್ತೀಯೆ; ಒಂದು ಕ್ಷಣ ಅಷ್ಟೆ. ಆಮೇಲೆ ಕಾಣಿಸುವುದಿಲ್ಲ.

**ಭಕ್ತ:** ಸ್ವಾಮಿ, ವಿರಕ್ತಿ ಜ್ಞಾನಿಯ ಗುರುತಾಗಿರುತ್ತದೆ ಎಂದು ಹೇಳಿದಿರಿ. ಇದು ಹೇಗೆ ಹೊಂದಿಕೆಯಾಗುತ್ತದೆ?

**ಸ್ವಾಮಿ :** ನಿಜ! ವಿರಕ್ತಿ ಅವನ ಗುರುತು. ಹಿಂದಿನ ಜನ್ಮದ ವಾಸನೆಗಳಿಂದಾಗಿ ಅವನಲ್ಲಿ ಅನುರಕ್ತಿಯುಂಟಾಗುತ್ತದೆ. ಅದು ದೇಹಕ್ಕೇ ಹೊರತು ತನಗಲ್ಲ ಎಂಬುದನ್ನು ಅವನು ಅರ್ಥ ಮಾಡಿಕೊಳ್ಳಬೇಕು. ಈ ಅನುರಕ್ತಿಯು ಜೀವನ್ಮುಕ್ತಿಯ ಆನಂದ ವನ್ನು ಹಾಳು ಮಾಡುತ್ತದೆ; ವಿದೇಹ ಮುಕ್ತಿಗೆ ಜ್ಞಾನ ಅತ್ಯಗತ್ಯ.

**ಭಕ್ತ:** ಜ್ಞಾನವಿಲ್ಲದಿದ್ದರೂ ಕೇವಲ ವೈರಾಗ್ಯದಿಂದ ಮುಕ್ತಿಯನ್ನು ಪಡೆಯಬಹುದೆ?

**ಸ್ವಾಮಿ :** ಎಂತಹ ಮೂರ್ಖ ಪ್ರಶ್ನೆ! ಹಣ್ಣು ಮಾಗದೆ ಸಿಹಿಯಾಗುವುದು ಹೇಗೆ? ವೈರಾಗ್ಯವು ಉದಿಸುವುದೇ ಜ್ಞಾನದಿಂದ. ವೈರಾಗ್ಯವಿಲ್ಲದೆ ಮೋಕ್ಷವಿಲ್ಲವೇ ಇಲ್ಲ. ಅದನ್ನು ಖಚಿತವಾಗಿ ತಿಳಿದುಕೋ.

**ಭಕ್ತ:** ಹಾಗಾದರೆ ಇಲ್ಲಿ ಭಕ್ತಿಗೆ ಅವಕಾಶವೆಲ್ಲಿ?

**ಸ್ವಾಮಿ :** ನಾವೀಗ ತೀರಾ ಪ್ರಾರಂಭದ ನೆಲೆಗೆ ಬಂದಿದ್ದೇವೆ! ಜ್ಞಾನಕ್ಕಿಂತ ಮೊದಲು ಅದು ಭಕ್ತಿಯ ರೂಪದಲ್ಲಿರುತ್ತದೆ; ಭಕ್ತಿಗಿಂತಲೂ ಮೊದಲು ಅದು ಅನುರಕ್ತಿಯ ರೂಪದಲ್ಲಿರುತ್ತದೆ. ಇವೆಲ್ಲ ಒಂದೇ. ಅನುರಕ್ತಿ ಹೂವು, ಭಕ್ತಿ ಹಣ್ಣು; ಅದು ಜ್ಞಾನವಾಗಿ ಮಾಗುತ್ತದೆ, ವೈರಾಗ್ಯವೆ ಸಿಹಿಯಾದ ರಸಭರಿತವಾದ ಅಂತಿಮ ಹಂತ. ಒಂದಿಲ್ಲದೆ ಮುಂದಿನದನ್ನು ಪಡೆಯುವುದು ಸಾಧ್ಯವಿಲ್ಲ. ರಸವೂ ರುಚಿಯೂ ಚೆನ್ನಾಗಿ ತುಂಬುವವರೆಗೆ ಹಣ್ಣನ್ನು ಕಾಪಾಡಿ ಬೆಳೆಸಬೇಕು. ಅದಕ್ಕಾಗಿ ಮೇಲೆ ಹೇಳಿದಂತೆ ದಿನವೂ ಪ್ರಾರ್ಥನೆ ಮೊದಲಾದವನ್ನು ಮಾಡಬೇಕು. ಆದರೆ ಮೊದಲನೆಯದರಿಂದಲೇ ಎಲ್ಲದರ ಏಕತೆಯನ್ನು ದರ್ಶನ ಮಾಡು. 'ಇನ್ನೊಂದು' ಎನ್ನುವುದು ಇಲ್ಲ ಎಂಬುದನ್ನು ಅರ್ಥಮಾಡಿಕೊ.

**ಭಕ್ತ:** ಕೊನೆಯ ಪಕ್ಷ ಈ ಪ್ರಪಂಚದಲ್ಲಿ ತೋರಿಕೆಗಾದರೂ ಕೆಲವೊಮ್ಮೆ 'ಇದು ನನ್ನದು' ಎಂದು ಹೇಳಬೇಕಾಗುತ್ತದಲ್ಲ, ಆಗ ಏನು ಮಾಡಬೇಕು?

**ಸ್ವಾಮಿ:** ನಿಜ, ಹಾಗೆ ಹೇಳಬೇಕಾಗಿ ಬರಬಹುದು. ಆದರೆ ಬಾಯಲ್ಲಿ ಹಾಗೆಂದು ಹೇಳಿದ ಮಾತ್ರಕ್ಕೆ ನನ್ನ ನಿನ್ನ ನಡುವೆ ಪ್ರತ್ಯೇಕತೆಯನ್ನು ಭಾವಿಸುವ ಅಗತ್ಯವೇನಿದೆ? ಒಂದು ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡುವಾಗ ಆ ಗಾಡಿಯನ್ನು 'ನಾನು' ಎಂದು ವ್ಯವಹರಿಸುವೆಯೇನು? ಸೂರ್ಯನನ್ನು ನೊಡು. ನೀರು ತುಂಬಿದ ಸಣ್ಣ ಮಡಿಕೆಯಲ್ಲಿ ಪ್ರತಿಫಲಿಸುತ್ತಾನೆ. ಹಾಗೆಯೇ ವಿಶಾಲವಾದ ನದಿಯಲ್ಲಿ ಮತ್ತು ಮೆರುಗು ಕೊಟ್ಟ ಪಾತ್ರೆಯ ಮೇಲೆಯೂ. ಈ ಕಾರಣದಿಂದ ಆ ಎಲ್ಲ ವಸ್ತುಗಳೂ 'ತಾನು' ಎಂದು ಸೂರ್ಯನು ಭಾವಿಸುವನೆ? ಮಡಕೆ ಒಡೆದು ಹೋದರೆ, ಅಥವಾ ನದಿಯು ಒಣಗಿ ಹೋದರೆ ಅವನು ವಿಷಾದಿಸುತ್ತಾನೆಯೆ? ಇದೂ ಹಾಗೆಯೇ. ದೇಹವನ್ನು 'ನಾನು' ಎಂದು ಭಾವಿಸಿದಾಗ ಮಾತ್ರ ಚಿಂತೆ, ಕಳವಳ! ಹಾಗೆ ಭಾವಿಸದೆ ಹೋದರೆ ನೀನು ಸೂರ್ಯನ ಹಾಗೆ ಬೇರಾವುದೇ ಒಂದರ ಗೊಡವೆ ಯಿಲ್ಲದೆ ಪ್ರಕಾಶಿಸುವೆ. ಅಲ್ಲದೆ ನೀನು ಎಲ್ಲೆಲ್ಲೂ ಅಂತರ್ಗತನಾಗಿರುತ್ತೀಯೆ.

**ಭಕ್ತ:** ಪ್ರತಿಯೊಬ್ಬನೂ ಮೊದಲು ತಾನು ಯಾರು ಎಂಬುದನ್ನು ಕಂಡುಕೊಳ್ಳಬೇಕು ಎಂದು ಹೇಳಿದಂತಾಯಿತು.

**ಸ್ವಾಮಿ:** ಹೌದು, ಮೊದಲು ಅದನ್ನು ತಿಳಿದುಕೊ. ಸಾಮರ್ಥ್ಯವಿಲ್ಲದವರಿಗೆ ಇದು ತುಂಬಾ ಕಷ್ಟವಾಗಬಹುದು ನಿಜ. ಆದ್ದರಿಂದ ಈ ವಿಷಯದಲ್ಲಿ ಅನುಭವ ಉಳ್ಳವರು ಅವರೊಂದಿಗೆ ಇದೇನನ್ನೂ ಹೇಳಬಾರದು ಎನ್ನುತ್ತಾರೆ. ನೀನು ಸುಮ್ಮನೆ ಒಬ್ಬ ವ್ಯಕ್ತಿಯನ್ನು ಕುರಿತು 'ನೀನೇ ಬ್ರಹ್ಮ' 'ನೀನು ಮೊಕ್ಷವನ್ನು ಪಡೆದುಕೊಂಡಿದ್ದೀಯೆ' 'ನೀನು ಆ ಹಂತದಲ್ಲಿದ್ದೀಯೆ' ಎಂದು ಹೇಳಿದರೆ, ಅವರು ಸಾಧನೆ ಮಾಡುವುದಿಲ್ಲ, ಯಾವುದೇ ಕಟ್ಟುಪಾಡುಗಳಿಗೆ ಒಳಪಟ್ಟು ನಡೆಯುವುದಿಲ್ಲ. ಸರಿ–ತಪ್ಪುಗಳ ಕಡೆಗೆ ಮಹತ್ವ ನೀಡುವುದೇ ಇಲ್ಲ. ಅದನ್ನು ಒಬ್ಬ ಗುರುವು ತಿಳಿಸಿಕೊಡಬೇಕು. ಅಥವಾ ಭಗವದಾಜ್ಞೆಯಂತೆ ಅದನ್ನು ತಿಳಿಸಬೇಕು. ಸಾಧನೆ ಮಾಡುವ ಹಂಬಲವೂ ನಿರ್ಧಾರವೂ ಇರುವವರು ಅದರ ಬಗೆಗೆ ಕೇಳಬಹುದು! ಆದರೆ ಅದನ್ನು ಮೊದಲು ಆಚರಿಸಬೇಕು; ಸುಮ್ಮನೆ ಕೇಳಿ, "ಎಲ್ಲವೂ ಒಂದೇ" ಎಂದು ಮತ್ತೆ ಮತ್ತೆ ಉಚ್ಚರಿಸುತ್ತಿದ್ದರೆ ಅದು ಅರ್ಥ ರಹಿತವಾಗುತ್ತದೆ.

**ಭಕ್ತ:** ಸ್ವಾಮಿ, ಶಂಕರರು ಆಗಲೇ ಹೇಳಿದ್ದಾರಲ್ಲ, "ವಿಶ್ವಂ ದರ್ಪಣ ದೃಶ್ಯ ಮಾನ ನಗರೀ ತುಲ್ಯಂ ನಿಜಾಂತರ್ಗತಂ" (ಅರ್ಥವನ್ನು ಒಳಹೊಕ್ಕು ನೋಡಿದರೆ ವಿಶ್ವವು ಕನ್ನಡಿಯಲ್ಲಿ ನೋಡಿದ ನಗರದಂತೆ). ಜಗತ್ತು ಅಸತ್ಯವೆಂಬ ಈ ದರ್ಶನ, ಇದೆಲ್ಲ ಮಾಯೆ ಎಂಬುದು ಸಾಮಾನ್ಯ ಜನರಿಗೆ ಮಾತ್ರವೋ ಇಲ್ಲವೆ ಜ್ಞಾನಿಗಳಿಗೂ ಅನ್ವಯಿಸುತ್ತದೆಯೊ?

**ಸ್ವಾಮಿ :** ಜ್ಞಾನಿಯ ಕಣ್ಣು ಸಮಸ್ತವನ್ನೂ ಬ್ರಹ್ಮ ಎಂದೇ ನೋಡುತ್ತದೆ; ಅಜ್ಞಾನಿಯು ಇದನ್ನು ಅರ್ಥಮಾಡಿಕೊಳ್ಳಲಾರನು. ಆದ್ದರಿಂದ ಎಲ್ಲಾ ಶಾಸ್ತ್ರಗಳು ಉದ್ದೇಶಿಸು ವುದೂ ಮಧ್ಯವರ್ತಿಗಳ ಪ್ರಯೋಜನಕ್ಕಾಗಿ.

**ಭಕ್ತ:** ಅಂದರೆ, ಸಾಧನೆಗಳೆಲ್ಲವೂ ವಿಚಾರಮಾರ್ಗದಲ್ಲಿ ಸೇರಿವೆ ಎಂದರ್ಥವೆ?

**ಸ್ವಾಮಿ :** ಹೌದು. ವೇದಾಂತವು ಬೋಧಿಸುವುದು "ನಾನು ಯಾರು?" ಎಂಬುದನ್ನು ಕುರಿತು. ಇದನ್ನು ವಿಚಾರ ಮಾಡುವುದು ನಾಲ್ಕು ಉಪಕರಣಗಳಿಂದ ಸಜ್ಜು ಗೊಂಡವರಿಗೆ ಮಾತ್ರ ಸಾಧ್ಯ. ಆ ನಾಲ್ಕರ ಉದ್ದೇಶ, ಆತ್ಮವು ಸತ್ಯ, ಮಿಕ್ಕುದೆಲ್ಲವೂ ಅಸತ್ಯ ಎಂದು ಅರ್ಥಮಾಡಿಕೊಳ್ಳುವುದು. ಹಾಗೆಯೇ ಆತ್ಮಕ್ಕೂ ಮಿಕ್ಕ ಎಲ್ಲಕ್ಕೂ ನಡುವೆ ವ್ಯತ್ಯಾಸವನ್ನು ತಿಳಿದುಕೊಳ್ಳುವುದು.

**ಭಕ್ತ:** ಅದನ್ನು ತಿಳಿದುಕೊಳ್ಳುವುದು ಹೇಗೆ ಸ್ವಾಮಿ?

**ಸ್ವಾಮಿ :** ಆತ್ಮದ ಸ್ವರೂಪವನ್ನು ಕುರಿತು ಚಿಂತನೆ ಮಾಡುವುದರಿಂದ. ಮೊದಲು ಎಲ್ಲಾ ಬಗೆಯ ಸಾಧನೆಗಳನ್ನು ಮಾಡಿ ಕೊನೆಗೆ ಅದನ್ನು ಪ್ರಾರಂಭಿಸುತ್ತಾರೆ. ಮಗು ವಾಗಿರುವಾಗ ಎ, ಬಿ, ಸಿ, ಡಿ ಕಲಿಸಿಕೊಡುತ್ತಾರೆ; ಬಿಎ, ಎಂಎ ಪಠ್ಯದಲ್ಲೂ ಇದೇ ಎಬಿಸಿಡಿ ಗಳ ಅಸಂಖ್ಯ ಜೋಡಣೆಗಳಿರುತ್ತವೆ. ಇದನ್ನು ಸರಿಯಾಗಿ ಅರ್ಥಮಾಡಿ ಕೊಳ್ಳಬೇಕಾದರೆ ವ್ಯಕ್ತಿಯು ವಿದ್ಯಾಭ್ಯಾಸವನ್ನು ಮುಗಿಸಬೇಕು! ಶಾಸ್ತ್ರಗಳು ಅಕ್ಷರ ವನ್ನು ಅವಲಂಬಿಸಿವೆ. ಅಕ್ಷರವೆಂದರೆ ವರ್ಣ ಎಂದರ್ಥ, ನಾಶವಾಗದುದು ಎಂದೂ ಅರ್ಥ. ಎಲ್ಲ ಮಾರ್ಗಗಳೂ ವಿಚಾರಮಾರ್ಗವನ್ನು ಆಧರಿಸಿವೆ.

**ಭಕ್ತ:** ಆದರೆ ಸಮಾಧಿ ಪಡೆಯುವವರು ಕೆಲವರಿದ್ದಾರೆ. ಅವರೂ ಸಮಾಧಿಯಲ್ಲಿ ವಿಚಾರ ಮೊದಲಾದವುಗಳಲ್ಲಿ ತೊಡಗಿರುತ್ತಾರೆಯೆ?

**ಸ್ವಾಮಿ :** ವಿಚಿತ್ರ ಮನುಷ್ಯ ನೀನು! ಸಮಾಧಿಸ್ಥಿತಿಯಲ್ಲಿ ವಿಚಾರ ಇರುವುದು ಹೇಗೆ ಸಾಧ್ಯ? ಗಾಢವಾಗಿ ನಿದ್ದೆ ಮಾಡುವಾಗ ನಿನ್ನ ಸುತ್ತಣ ಜಗತ್ತಿನ ವಿಷಯವಾಗಿ ಏನಾದರೂ ಯೋಚನೆ ಬರುತ್ತದೇನು? ಇದೂ ಹಾಗೆಯೇ.

**ಭಕ್ತ:** ಸಮಾಧಿ ಸ್ಥಿತಿಯಲ್ಲಿ ಮನಸ್ಸು ಇರುವುದಿಲ್ಲ, ಅಲ್ಲವೆ?

**ಸ್ವಾಮಿ :** ನಿದ್ದೆಯಲ್ಲಿ ಉಳಿದುಕೊಂಡಿರುವ ಹಾಗೆಯೇ ಅಲ್ಲೂ ಉಳಿದಿರುತ್ತದೆ.

**ಭಕ್ತ:** ಸಮಾಧಿಸ್ಥಿತಿಯಲ್ಲಿ ತುರೀಯ (ಆಚೆಗಿನ) ಹಂತವೊಂದಿದೆಯೆಂದು ಹೇಳುತ್ತಾರೆ, ಅದೇನು ಸ್ವಾಮಿ?

**ಸ್ವಾಮಿ:** ಜಾಗ್ರತ್, ಸ್ವಪ್ನ, ಸುಷುಪ್ತಿಗಳ ಆಚೆಗಿನ ಹಂತ.

**ಭಕ್ತ:** ಆ ಹಂತಗಳು ಅಲ್ಲಿ ಏಕೆ ಇರುವುದಿಲ್ಲ? ಆ ಹಂತದ ಲಕ್ಷಣಗಳಾವುವು?

**ಸ್ವಾಮಿ:** ಅವು 'ನಾನು' 'ನನ್ನದು' ಅಹಂಕಾರದ, ಮನಸ್ಸಿನಿಂದ ಕೂಡಿದ ವ್ಯಕ್ತಿಯ ಲಕ್ಷಣಗಳು. ಅದು ತುರೀಯ ಹಂತದಲ್ಲಿ ಇರುವುದಿಲ್ಲ. ಬಹಳ ಮೊದಲೇ ಮಾಯವಾಗಿರುತ್ತದೆ. ಅವರಿಗೆ ಕಣ್ಣು ತೆರೆದಿರಲಿ, ಮುಚ್ಚಿರಲಿ ಎಲ್ಲವೂ ಒಂದೇ.

**ಭಕ್ತ:** ಸ್ವಾಮಿ, ಆ ಅಹಂ ಇಲ್ಲದೆ ಹೇಗೆ ಮಾತನಾಡುವರು?

**ಸ್ವಾಮಿ:** ಪ್ರಾರಂಭದಲ್ಲಿ, ಸತ್ಯವನ್ನು ಗ್ರಹಿಸಿದಾಗ ಯಾವುದು ಅಹಂ ಆಗಿತ್ತೋ ಅದು ಸ್ವರೂಪವಾಗಿ, ನಿಜವಾದ ಅಸ್ತಿತ್ವವಾಗಿ ಪರಿವರ್ತಿತವಾಗಿರುತ್ತದೆ. ಇದನ್ನೇ ಮನೋನಾಶನ ಎಂದು ಕರೆಯುವುದು.

**ಭಕ್ತ:** ಹಾಗಾದರೆ ಈ ನಿರ್ವಿಕಲ್ಪ ಸಮಾಧಿಯೆಂದರೆ ಎಲ್ಲ ನಾಶವಾಗುವುದೆ?

**ಸ್ವಾಮಿ:** ಮಗು, ಸಮಾಧಿ ಎಂದರೆ ವಿಲೀನಗೊಳ್ಳುವುದು, ಲಯಗೊಳ್ಳುವುದೇ ಹೊರತು ವಿನಾಶವಲ್ಲ. ನಿರ್ಮಾಣ ಮತ್ತು ವಿನಾಶ ಎರಡೂ ಇರುವುದು ಸಾಧಕ ಹಂತ.

**ಭಕ್ತ:** ಈ ವಿಷಯ ಬಹಳ ಸ್ವಾರಸ್ಯವಾಗಿದೆ ಸ್ವಾಮಿ.

**ಸ್ವಾಮಿ:** ಸುಮ್ಮನೆ ಅದನ್ನು ಮೆಚ್ಚುತ್ತಾ ಕುಳಿತುಕೊಳ್ಳಬೇಡ. ದಿನದಿನದ ಆಚರಣೆಯಲ್ಲಿ ಅದನ್ನು ನಡೆಸು. ಒಳ್ಳೆಯದು ಈಗ ಹೋಗಿ ಬಾ.

**ಭಕ್ತ:** ಬಹಳ ಒಳ್ಳೆಯದು ಸ್ವಾಮಿ, ಆ ಅಭ್ಯಾಸ ನನಗಾಗಲೆಂದು ಆಶೀರ್ವದಿಸಿ. ಬೇಗನೆ ಮತ್ತೆ ಬರುತ್ತೇನೆ.

# ಅಧ್ಯಾಯ ೧೧

**ಭಕ್ತ:** ಸ್ವಾಮಿ, ನನಗೆ ಒಂದು ಸಂದೇಹವುಂಟಾಗುತ್ತಿದೆ, ಕೇಳಲೆ?

**ಸ್ವಾಮಿ:** ಖಂಡಿತವಾಗಿ ಕೇಳು. "ಕೇಳಲೆ?" ಎಂದು ಹೇಳುವುದೇನಿದೆ?

**ಭಕ್ತ:** ಕೆಲವರು ಬ್ರಹ್ಮವನ್ನು ಅಸ್ತಿ ಭಾತಿ ಪ್ರಿಯಂ ಎಂದು ವರ್ಣಿಸುತ್ತಾರೆ; ಅದರ ಅರ್ಥವೇನು? ಇದಕ್ಕೂ ಬ್ರಹ್ಮಕ್ಕೂ ಇರುವ ಸಂಬಂಧವೇನು?

**ಸ್ವಾಮಿ:** ಇದೋ ಸಂದೇಹ? ಅಸ್ತಿ ಎಂದರೆ "ಯಾವುದು ಇದೆಯೋ ಅದು"; ಭಾತಿ ಎಂದರೆ "ಯಾವುದು ಹೊಳೆಯುತ್ತದೋ ಅದು"; ಪ್ರಿಯಂ ಎಂದರೆ–ನಿನಗೆ ಗೊತ್ತು, ಅಲ್ಲವೇ? ಹಿತವಾದದ್ದು, ಇಷ್ಟವಾದದ್ದು. ತೃಪ್ತಿಯನ್ನು ಉಂಟುಮಾಡ ಬಲ್ಲದ್ದು. ನಿನಗೆ ಪ್ರಿಯವಾದುದೆಲ್ಲವೂ ಬ್ರಹ್ಮವೇ. ನೀನು ಒಂದು ನಾಯಿಯನ್ನು ಗಾಢವಾಗಿ ಪ್ರೀತಿಸಿದರೆ ಆ ನಾಯಿಯೂ ಬ್ರಹ್ಮವೇ. ನಾಯಿಗೆ ಒಂದು ನಾಮವಿದೆ, ಒಂದು ರೂಪವಿದೆ. ನೀನು ನಿನ್ನ ನಾಮ–ರೂಪಗಳನ್ನೂ ನಾಯಿಯ ನಾಮರೂಪ ಗಳನ್ನೂ ತೆಗೆದು ಹಾಕಿಬಿಟ್ಟರೆ ಉಳಿಯುವುದು ಬ್ರಹ್ಮವೊಂದೇ. ನಾಮ–ರೂಪಗಳು "ಹಿಂದಿನ ತಡೆಗಳು," ಭೌತ ಪ್ರತಿಬಂಧ. ನಾಮ ರೂಪಗಳಿಲ್ಲದಿಕೆಯೇ ಬ್ರಹ್ಮ. ಈ ಅಸಂಖ್ಯ ನಾಮ ರೂಪಗಳ ತಳದಲ್ಲಿ ಒಬ್ಬನೇ ಅಖಂಡ ಬ್ರಹ್ಮನಿದ್ದಾನೆ. ಈ "ಇರುವಿಕೆ"ಯನ್ನು ಸಮಸ್ತದಲ್ಲಿ ನೀನು ಗುರುತಿಸಬೇಕು. ಅದೇ ಅಸ್ತಿ, ಜ್ಞಾತೃವಿನ ಅರಿವೇ ಭಾತಿ, ಅದು ಕಾಂತಿ, ಥಳಥಳಿಸುವ ಪ್ರಭೆ. ಅದೂ ಬ್ರಹ್ಮವೇ.

ಅದನ್ನು ನೋಡಬೇಕು, ಅನುಭವಕ್ಕೆ ತಂದುಕೊಳ್ಳಬೇಕು, ಅದನ್ನು ಅರಸಬೇಕು ಎಂಬ ಒಂದು ಹಂಬಲವಿದೆಯಲ್ಲವೆ? ಅದಕ್ಕೆ ಕಾರಣ ಪ್ರಿಯಂ, ಅದು ಸೆಳೆತ, ಆಕರ್ಷಣೆ. ಇವು ಮೂರೂ ಬ್ರಹ್ಮದ ಮೂಲ ಲಕ್ಷಣಗಳು ಮಗು!

**ಭಕ್ತ:** ಈ ಸಚ್ಚಿದಾನಂದ ಎನ್ನುವರಲ್ಲ, ಅದೇನು?

**ಸ್ವಾಮಿ:** ಆತ್ಮವನ್ನು ಸಚ್ಚಿದಾನಂದ ಎಂದು ತಿಳಿದುಕೊಳ್ಳಲಾಗುತ್ತದೆ, ಅದರ ಲಕ್ಷಣ ಅಸ್ತಿ–ಭಾತಿ–ಪ್ರಿಯಂ ಆಗಿರುವುದರಿಂದ.

**ಭಕ್ತ:** ಪ್ರೇಮಾರ್ಹತೆ, ಪ್ರಿಯಂ ಕೂಡ ಅದರ ಸ್ವರೂಪವೇ ಆದುದರಿಂದ ಸಮಸ್ತ ವಸ್ತುಗಳಿಗೂ ಪ್ರಿಯವಾಗಬೇಕಲ್ಲವೆ? ಆದರೆ ಚೇಳು ಹಾವು–ವಿವಿಧ ವನ್ಯಮೃಗ ಗಳು ಮೊದಲಾದವು ಪ್ರೇಮವನ್ನು ಮೂಡಿಸುವುದಿಲ್ಲವಲ್ಲ.

**ಸ್ವಾಮಿ :** ನೀನು ಅವುಗಳನ್ನು ಪ್ರೀತಿಸದಿರಬಹುದು. ಆದರೆ ಅವು ಪರಸ್ಪರ ಪ್ರೇಮಿಸುತ್ತವೆ ಅಲ್ಲವೆ? ಒಬ್ಬ ಕಳ್ಳನಿಗೆ ಇನ್ನೊಬ್ಬ ಕಳ್ಳ ಇಷ್ಟವಾಗುತ್ತಾನೆ; ಒಬ್ಬ ಭಕ್ತ ಇನ್ನೊಬ್ಬ ಭಕ್ತನನ್ನು ಇಷ್ಟಪಡುತ್ತಾನೆ; ಪ್ರತಿಯೊಬ್ಬರೂ ತನ್ನ ಬಗೆಯವರನ್ನು ಪ್ರೀತಿಸುತ್ತಾರೆ.

**ಭಕ್ತ:** ಇದೆಲ್ಲವೂ ನನಗೆ ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ ಸ್ವಾಮಿ. ಈ ಅಸ್ತಿ–ಭಾತಿ–ಪ್ರಿಯಂ ಎನ್ನುವುದಕ್ಕೆ ಈ ಪ್ರಪಂಚದ ಯಾವುದಾದರೂ ಉದಾಹರಣೆಗಳಿದ್ದರೆ ಅವುಗಳನ್ನು ಹೇಳಿ ವಿವರಿಸಿ.

**ಸ್ವಾಮಿ :** ಮಗು, 'ಇದ್ದರೆ' ಎಂದೇಕೆ ಹೇಳುವೆ? ಸಮಸ್ತವೂ ಬ್ರಹ್ಮವೇ ಆಗಿರುವಾಗ ಅದಕ್ಕೆ ಉದಾಹರಣೆಯಾಗದಿರುವುದು ಯಾವುದಿದೆ? ಈಗ ನೀನು ಒಂದು ಚಲನ ಚಿತ್ರ ನೋಡಲು ಹೋಗುತ್ತೀಯೆ. ಚಿತ್ರವು ಪರದೆಯ ಮೇಲಿದೆ; ಅದು ಇದ್ದೇ ಇದೆ, ಅದೇ ಅಸ್ತಿ. ಅದನ್ನು ನೋಡುವವನು, ಅರಿಯುವವನು ಯಾರು? ನೀನು. ಆದ್ದರಿಂದ ಅದು ಭಾತಿ. ಪ್ರಿಯವಾಗಿರುವ ನಾಮಗಳು ರೂಪಗಳು ಬಂದು ಹೋಗುತ್ತವೆ. ಅವುಗಳಿಗೆ ಮರುಳಾಗದೆ ನೀನು ಒಂದು ವೇಳೆ ಅವನ್ನು ಒತ್ತಟ್ಟಿಗೆ ಸರಿಸಿಟ್ಟೆಯೆಂದಿಟ್ಟುಕೋ. ಆಗಲೂ ಪರದೆ ಯಾವಾಗಲೂ ಇದ್ದೇ ಇದೆ. ಇಲ್ಲಿ ಒಂದು ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮೆಷಿನ್ ರೂಮಿನ ಗೋಡೆಯಲ್ಲಿ ಮಾಡಿರುವ ಕಿಂಡಿಯ ಮೂಲಕ ಹಾದು ಬರುವ ಬೆಳಕಿನಿಂದ ಚಿತ್ರಗಳು ಪರದೆಯ ಮೇಲೆ ಬೀಳುತ್ತವೆ. ಕಿಂಡಿಯಿಲ್ಲದೆ ಇಡೀ ರೂಮಿನಿಂದ, ಬೆಳಕು ಆ ತಡೆಯನ್ನು ತಪ್ಪಿಸಿಕೊಂಡು ಹರಿದು ಬಂದಿತು ಎಂದಿಟ್ಟುಕೋ ಆಗ ಚಿತ್ರಗಳು ಕಾಣಿಸುವುದಿಲ್ಲ! ಇಡೀ ಪರದೆ ಬೆಳಕಿನಲ್ಲಿ ನೆನೆದು ಹೋಗುತ್ತದೆ! ಹಾಗೆಯೇ ಪ್ರಪಂಚವನ್ನು ಮನಸ್ಸೆಂಬ ಸಣ್ಣ ಕಿಂಡಿಯ ಮೂಲಕ ನೋಡಿದರೆ ಈ ಅನಂತ ವರ್ಣಮಯ ಸೃಷ್ಟಿಯು ಗೋಚರವಾಗುತ್ತದೆ.

ಆತ್ಮ ಜ್ಞಾನದ ಹಾಯಿ ಬೆಳಕು ಹೊಳೆಯಾಗಿ ಹರಿದುಬಂದರೆ ನೀನು ಆತ್ಮದ ಮೂಲಕ ನೋಡುವಾಗ, ಎಲ್ಲವೂ ಒಂದೇ ಅನಂತವಾದ ಬೆಳಕು, ಬಿಡಿಬಿಡಿಯಾದ ಚಿತ್ರ ಯಾವುದೂ ಕಾಣಿಸುವುದೇ ಇಲ್ಲ. ಅಂದರೆ, ಎಲ್ಲರನ್ನೂ ಒಂದೇ ಅಖಂಡ ಬ್ರಹ್ಮವಾಗಿ ಅರಿಯಲು ಸಾಧ್ಯವಾಗುತ್ತದೆ. ಅರ್ಥವಾಯಿತೆ?

**ಭಕ್ತ:** ಸ್ಪಷ್ಟವಾಗಿ ಅರ್ಥವಾಯಿತು ಸ್ವಾಮಿ. 'ಭೂತಕಾಲದ ತಡೆ' ಎಂದರೇನರ್ಥ ಎಂಬುದು ತಿಳಿಯಿತು. 'ವರ್ತಮಾನದ ತಡೆಗಳು' ಯಾವುವು?

**ಸ್ವಾಮಿ :** ಒಳ್ಳೆಯದು. ಹೇಳುತ್ತೇನೆ ಕೇಳು. ವರ್ತಮಾನದ ತಡೆಗಳು ನಾಲ್ಕು ಬಗೆ; ಇಂದ್ರಿಯ ವಿಷಯಗಳ ಬಗೆಗೆ ಮೋಹ, ಸಂದೇಹದಿಂದ ಕೂಡಿದ ಟೀಕೆ,

ಮಂದವಾದ ಗ್ರಹಿಕೆ ಮತ್ತು ಗರ್ವ. ಮೊದಲನೆಯದು ಇಂದ್ರಿಯಗಳನ್ನು ಆಕರ್ಷಿಸುವ ವಸ್ತುಗಳ ಬಗೆಗೆ ಮೋಹಕ್ಕೆ ಕಾರಣವಾಗುತ್ತದೆ. ಎರಡನೆಯದು ಗುರೂಪದೇಶದಲ್ಲಿ ತಪ್ಪು ಅರ್ಥಗಳನ್ನು ಹುಡುಕುವ ಹಾಗೆ ಮಾಡುತ್ತದೆ. ಮೂರನೆ ಯದು ಗೊಂದಲವನ್ನು ಉಂಟುಮಾಡುತ್ತದೆ, ಏಕೆಂದರೆ ಗುರುವು ಉಪದೇಶಿಸಿ ದುದನ್ನು ಗ್ರಹಿಸಿಯೇ ಇರುವುದಿಲ್ಲ. ಕೊನೆಯದು ತಾನೊಬ್ಬ ದೊಡ್ಡ ವಿದ್ವಾಂಸ, ಪಂಡಿತ ಅಥವಾ ಸನ್ಯಾಸಿ ಎಂದು ಭಾವಿಸಿಕೊಳ್ಳುವಂತೆ, ದೇಹವನ್ನೂ ಇಂದ್ರಿಯ ಗಳನ್ನೂ ಆತ್ಮವೆಂದು ತಪ್ಪಾಗಿ ತಿಳಿದುಕೊಳ್ಳುವಂತೆ ಮಾಡುತ್ತದೆ.

**ಭಕ್ತ:** 'ಭವಿಷ್ಯತ್ತಿನ ತಡೆಗಳು?'

**ಸ್ವಾಮಿ:** ಅವು ಯಾವಾಗಲೂ ಪಾಪಕೃತ್ಯಗಳ ಮೂಲಕ ಬರುತ್ತವೆ. ನಮಗೇ ಗೊತ್ತಿಲ್ಲದ ಹಾಗೆ ಬಂದು ತಡೆಯೊಡ್ಡುತ್ತವೆ.

**ಭಕ್ತ:** ಇವುಗಳನ್ನು ನಾವು ಎದುರಿಸುವುದು ಹೇಗೆ ಸ್ವಾಮಿ?

**ಸ್ವಾಮಿ:** ಅದು ಎಲ್ಲರಿಗೂ ಸಾಧ್ಯವಿಲ್ಲ. ಸಾಧಕನು ಬರಲಿರುವ ದುಷ್ಕಾರ್ಯವನ್ನೂ ಅದರ ಪಾಪ ಫಲಗಳನ್ನೂ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಲ್ಲನು. ಅದು ಆಸೆಯನ್ನು ಹುಟ್ಟಿಸುತ್ತದೆ, ಅದು ಅಗತ್ಯದ ಮುಸುಕು ಹಾಕಿಕೊಂಡಿರುತ್ತದೆ. ಆಗ ನೀನು ಅದನ್ನು 'ಭವಿಷ್ಯತ್ತಿನ ತಡೆ' ಎಂಬುದಾಗಿ ಗುರುತಿಸಿಕೊಳ್ಳಬೇಕು. ಒಂದೇ ಜನ್ಮದ ಪ್ರಯತ್ನದಿಂದ ಹೀಗೆ ಮುನ್ನೆಚ್ಚರಿಕೆ ಕಂಡುಕೊಳ್ಳುವುದು ಕಷ್ಟ. ಈ ಶಿಕ್ಷಣವನ್ನು ಪಡೆದುಕೊಳ್ಳಲು ಅನೇಕ ಜನ್ಮಗಳು ಬೇಕಾಗಬಹುದು.

**ಭಕ್ತ:** ಅದನ್ನು ಕಲಿತುಕೊಂಡವರು ಯಾರಾದರು ಇದ್ದಾರೆಯೆ?

**ಸ್ವಾಮಿ:** ಇದ್ದಾರಲ್ಲ, ಶಾಸ್ತ್ರಗ್ರಂಥಗಳು ಭರತ ಮತ್ತು ವಸುದೇವರನ್ನು ಕುರಿತು ಹೇಳು ತ್ತವೆ. ಭರತನಿಗೆ ಎರಡೋ ಮೂರೋ ಜನ್ಮಗಳು ಬೇಕಾದುವು; ವಸುದೇವನು ಒಂದು ಸಾರಿ ಜನಿಸಬೇಕಾಯಿತು.

**ಭಕ್ತ:** ಅಂದರೆ, ಈ ಮೂರು ಬಗೆಯ ತಡೆಗಳನ್ನು ಅನೇಕ ಜನ್ಮಗಳಿಲ್ಲದೆ ಗೆಲ್ಲಲು ಸಾಧ್ಯವಿಲ್ಲವೆಂದ ಹಾಗಾಯಿತು. ಇವೆಲ್ಲಾ ಕಷ್ಟಗಳಿಲ್ಲದೆ ಗೆಲ್ಲಲು ನಮಗೆ ಹೇಗೂ ಆಗದೆ?

**ಸ್ವಾಮಿ :** ಸಾಧಕನು ಈ ಮೂರರ ಸ್ವರೂಪವನ್ನು ಸರಿಯಾಗಿ ತಿಳಿದುಕೊಳ್ಳುವುದರಿಂದ, ಅವುಗಳ ಚಿಂತೆಯಿಂದ ಪಾರಾಗಬಹುದು. ಇಲ್ಲವಾದರೆ ಅದಕ್ಕೆ ಹಲವು ಜನ್ಮಗಳು ಬೇಕಾಗುತ್ತವೆ.

**ಭಕ್ತ:** ಸ್ವಾಮಿ, 'ವರ್ತಮಾನದ ತಡೆ'ಯನ್ನು ಗೆಲ್ಲುವುದು ಹೇಗೆ?

**ಸ್ವಾಮಿ :** ಇದಕ್ಕೂ ಒಂದು ದಾರಿಯಿದೆ. ಕರ್ಮದ ಮೂಲಕ, ಸರಿಯಾದ ಕರ್ಮದ ಮೂಲಕ! ದಾಟಲು ಸಾಧ್ಯವಿಲ್ಲದ ತಡೆ ಯಾವುದೂ ಇಲ್ಲ. ಇಂದ್ರಿಯ ವಿಷಯ ಮೋಹವನ್ನು ಶಮ, ದಮ, ಉಪರತಿ, ತಿತಿಕ್ಷೆ ಗಳ ಮೂಲಕ ಅಂದರೆ ಪರಿಶುದ್ಧಿಯನ್ನು ಬೆಳೆಸಿಕೊಳ್ಳುವುದು, ಆತ್ಮ ಸಂಯಮ, ಆಸೆಗಳನ್ನು ಹಿಂದಕ್ಕೆ ಸೆಳೆದುಕೊಳ್ಳುವುದು ಮತ್ತು ಕಷ್ಟವನ್ನು ಅನುಭವಿಸುವ ಸಾಮರ್ಥ್ಯ ಇವುಗಳ ಮೂಲಕ ತೆಗೆದು ಹಾಕಬಹುದು. ಮಂದವಾದ ಗ್ರಹಿಕೆಯನ್ನು ಮತ್ತೆ ಮತ್ತೆ ಕೇಳವುದುರ ಮೂಲಕ ಪರಿಹರಿಸಿಕೊಳ್ಳಬಹುದು. ಆಲಿಸಿದ ಉಪದೇಶದ ಮೇಲೆ ನಿರಂತರವಾಗಿ ಧ್ಯಾನ ಮಾಡುವುದಿರಂದ ಸಂದೇಹಯುತ ಟೀಕೆ ತೊಡೆದುಹೋಗುತ್ತದೆ. ಅವಿವೇಕದ ಅಹಂಕಾರವು ಉಪದೇಶವನ್ನು ಅರಗಿಸಿಕೊಳ್ಳುವುದರಿಂದ ಕಣ್ಮರೆಯಾಗುತ್ತದೆ.

**ಭಕ್ತ:** ಸ್ವಾಮಿ, ಇದೆಲ್ಲವನ್ನೂ ಕರಗತ ಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ಎಲ್ಲರಿಗೂ ಸುಲಭವಾಗುವಂತೆ ಇದರಲ್ಲಿ ತುಂಬಾ ಮುಖ್ಯವಾದುದು ಯಾವುದು ಎಂದು ಹೇಳಿ.

**ಸ್ವಾಮಿ :** ಮಗು, ಒಂದು ವಸ್ತುವನ್ನು ತಿಳಿದುಕೊಳ್ಳಬೇಕಾದರೆ ವಿಜ್ಞಾನ ಅವಶ್ಯಕ. ಅಜ್ಞಾನವು ವ್ಯಕ್ತಿಯನ್ನು ಅಜ್ಞಾನಿಯನ್ನಾಗಿ ಮಾಡುತ್ತದೆ, ನಿನಗೆ ಗೊತ್ತಿಲ್ಲವೆ?

**ಭಕ್ತ:** ವಿಜ್ಞಾನ ಮತ್ತು ಅಜ್ಞಾನಗಳ ವಿಷಯವಾಗಿ ಅಷ್ಟೊಂದು ಜನರು ಅಷ್ಟೊಂದು ಮಾತುಗಳನ್ನು ಹೇಳುತ್ತಾರೆ. ಇವೆರಡರ ನಡುವೆ ಇರುವ ಮೂಲ ಸಂಗತಿ ಏನು?

**ಸ್ವಾಮಿ :** ಈಗ ನೀನು ಮತ್ತೆ ಮೊದಲನೆಯ ಹಂತಕ್ಕೆ ಬಂದಿದ್ದೀಯೆ. ಅಜ್ಞಾನವು ಬಾಹ್ಯವಸ್ತುವಿಗೆ ಸಂಬಂಧಿಸಿದಂತೆ ಇರುವ ಮಾನಸಿಕ ಪ್ರವೃತ್ತಿ; ವಿಜ್ಞಾನವು ಆಂತರಿಕ ವಸ್ತುವನ್ನು ಕುರಿತಾಗುವ ಮನಸ್ಸಿನ ಪ್ರವೃತ್ತಿ. ಅಜ್ಞಾನವನ್ನೇ ಮನಸ್ಸು ಮತ್ತು ಚಿತ್ತ ಎಂದು ಕರೆಯುತ್ತಾರೆ. ಚಟುವಟಿಕೆಯೂ ಪ್ರವೃತ್ತಿಯೂ ಒಳಮುಖವಾಗಿ ತಿರುಗಿದಾಗ ಅವುಗಳನ್ನು ಬುದ್ಧಿ ಮತ್ತು ಅಂತಃಕರಣ ಎಂದು ಕರೆಯುತ್ತಾರೆ.

**ಭಕ್ತ:** ಜ್ಞಾನಿಯು ಪರಲೊಕವನ್ನು ಪಡೆಯುವ ಆಸೆ ಹಾಗೂ ಹಿಂದಿನ ಕರ್ಮ ಈ ಎರಡನ್ನು ಮಾತ್ರ ಹೊಂದಿರುತ್ತಾನೆ ಎಂದು ಹೇಳುತ್ತಾರೆ. ಅದು ನಿಜವೆ?

**ಸ್ವಾಮಿ:** ಜ್ಞಾನಿ–ಅಜ್ಞಾನಿ ಇಬ್ಬರಲ್ಲೂ ಆಸೆಯಿರುತ್ತದೆ, ಆಶಾರಾಹಿತ್ಯವೂ ಇರುತ್ತದೆ, ಪರಲೋಕವನ್ನು ಪಡೆಯುವ ಆಸೆ, ಹಿಂದಿನ ಕರ್ಮದ ಹೊರೆ–ಇವಿಷ್ಟೂ ಸಮ ಪ್ರಮಾಣದಲ್ಲಿ ಇರುತ್ತವೆ. ಅವುಗಳ ಅನುಭವಗಳೂ ಸಮ ಪ್ರಮಾಣದಲ್ಲೇ ಆಗುತ್ತಿರುತ್ತವೆ. ಜ್ಞಾನಿಗೆ ಕೆಲಸ ಮಾಡುತ್ತಿರುವವನು ತಾನು ಎಂಬ ಪ್ರಜ್ಞೆಯಿರುವುದಿಲ್ಲ. ಆದ್ದರಿಂದ ಅವನು ಬದ್ಧನಾಗುವುದಿಲ್ಲ. ಅಜ್ಞಾನಿಗೆ ಮಾಡುತ್ತಿರುವವನು ತಾನು ಎಂಬ ಪ್ರಜ್ಞೆಯಿರುತ್ತದೆ, ಆದ್ದರಿಂದ ಅವನು ಬದ್ಧನಾಗುತ್ತಾನೆ. ಇದೊಂದೇ ವ್ಯತ್ಯಾಸ. ಮನಸ್ಸೇ ಬಂಧನ–ಬಿಡುಗಡೆಗಳೆರಡಕ್ಕೂ ಕಾರಣ ಎಂದು ನಾನು ಆಗಲೆ ಹೇಳಿದ್ದೇನೆ, ಹೇಳಿಲ್ಲವೆ? ಮನಸ್ಸೇ ಎಲ್ಲದಕ್ಕೂ ಕಾರಣ.

**ಭಕ್ತ:** ಮನಸ್ಸು, ಮನಸ್ಸು ಎಂದು ಎಲ್ಲರೂ ಹೇಳುತ್ತಲೇ ಇರುತ್ತಾರೆ. ಅದು ಏನು? ಅದರ ಸ್ವರೂಪ ಎಂಥದು?

**ಸ್ವಾಮಿ:** "ಗ್ರಹಿಕೆ" "ಅರಿವು" ಅದರ ಸ್ವರೂಪ. ಆ ಗ್ರಹಿಕೆಯ ಆಧಾರವನ್ನು ತಿಳಿದು ಕೊಂಡು ಬಿಟ್ಟರೆ ಬಂಧನವೇ ಇರುವುದಿಲ್ಲ!

**ಭಕ್ತ:** ಆ ಆಧಾರ ಯಾವುದು?

**ಸ್ವಾಮಿ:** ನೀನು ಯಾವುದನ್ನು 'ನಾನು' ಎಂದು ಉಲ್ಲೇಖಿಸುವೆಯೋ ಅದೇ ಆ ಆಧಾರ. 'ನಾನು'ವನ್ನು ಅನ್ವೇಷಿಸುವುದು. ನೀನು ಆ 'ನಾನು' ಹಂತದಲ್ಲಿ ಇದ್ದುಬಿಟ್ಟರೆ ಎಷ್ಟೆಷ್ಟು ಗ್ರಹಿಕೆಗಳು ಬರಲಿ, ಬಿಡಲಿ ನೀನು ಮಾತ್ರ ಅಬಾಧಿತನಾಗಿ ಉಳಿಯುತ್ತೀಯೆ.

**ಭಕ್ತ:** ಸರಿ, ತುಂಬಾ ಚೆನ್ನಾಗಿದೆ ಸ್ವಾಮಿ. ಇವೆಲ್ಲ ನಮ್ಮ ಮೆದುಳಿನೊಳಕ್ಕೆ ಇಳಿಯುವಂತೆ ಅನುಗ್ರಹಿಸಬೇಕು. ಆಗ ನಾವು ನಮ್ಮ ಬದುಕಿನ ಉದ್ದೇಶವನ್ನು ಅರ್ಥಮಾಡಿಕೊಂಡಂತಾಗುತ್ತದೆ... ನಾನಿನ್ನು ಹೋಗಿಬರುತ್ತೇನೆ, ಸ್ವಾಮಿ.

**ಸ್ವಾಮಿ:** ಹಾಗೆ ಮಾಡು. ಸಂತೋಷವಾಗಿ ಹೋಗು, ಮತ್ತೆ ಬಾ. ನನ್ನ ಆಶೀರ್ವಾದ ನಿನ್ನ ಮೇಲಿದೆ.

# ಅಧ್ಯಾಯ ೧೨

**ಭಕ್ತ**: ಸ್ವಾಮಿ, ವೆಂಕಟಗಿರಿಯಲ್ಲಿ 'ಆಧ್ಯಾತ್ಮಿಕ ಸಭಾ' ನಡೆದಾಗ ನೀವು ಕೆಲವು ಮಾತುಗಳನ್ನಾಡಿದಿರಿ, ಅವು ನನಗೆ ಅರ್ಥವಾಗಲಿಲ್ಲ. ಅವುಗಳ ವಿಷಯವಾಗಿ ಈಗ ಕೇಳಬಹುದೆ?

**ಸ್ವಾಮಿ**: ಯಾರಾದರೂ ತನಗೆ ಅರ್ಥವಾಗದ ವಿಷಯವಾಗಿ ಕೇಳಿದರೆ ನನಗೆ ಸಂತೋಷವಾಗುತ್ತದೆ. ಕೇಳುವುದಕ್ಕೆ ನಿನಗೆ ಪೂರ್ತಿ ಹಕ್ಕಿದೆ.

**ಭಕ್ತ**: ನೀವು ಸ್ಥೂಲರೂಪ ಮತ್ತು ಸೂಕ್ಷ್ಮರೂಪ ಎಂದು ಹೇಳಿದಿರಿ. ಇವೆರಡೂ ಮನಸ್ಸಿನ ಲಕ್ಷಣಗಳು ಮಾತ್ರವೇಯೋ ಅಥವಾ ಎಲ್ಲದಕ್ಕೂ ಸಂಬಂಧ ಪಟ್ಟಿವೆಯೊ?

**ಸ್ವಾಮಿ**: ಅವು ಎಲ್ಲಾ ವಸ್ತುಗಳ ಲಕ್ಷಣಗಳು; ವಾಸ್ತವವಾಗಿ ಸ್ಥೂಲದಲ್ಲಿ ಕಂಡು ಬರುವ ಸಮಸ್ತ ನಾಮರೂಪಗಳು ಸೂಕ್ಷ್ಮದಲ್ಲೂ ಕಂಡುಬರುತ್ತವೆ! ಸ್ಥೂಲಹಂತ ವಿರುವುದೇ ನಿನಗೆ ಸೂಕ್ಷ್ಮ ಹಂತವನ್ನು ಅರ್ಥಮಾಡಿಸುವ ಸಲುವಾಗಿ!

**ಭಕ್ತ**: ಹಾಗಾದರೆ ಸ್ವಾಮಿ, ನಾವು ಸ್ಥೂಲ ಆಕಾಶವನ್ನು ನೋಡುತ್ತೇವೆ, ಅದಕ್ಕೆ ಸೂಕ್ಷ್ಮ ಆಕಾಶವು ಇದೆಯೆ?

**ಸ್ವಾಮಿ**: ಮಗು, ಇದೆಲ್ಲವೂ ಆ ಸೂಕ್ಷ್ಮ ಆಕಾಶಲ್ಲೇ ಇದೆ. ಸೂಕ್ಷ್ಮ ಆಕಾಶವು ಸ್ಥೂಲ ಆಕಾಶದ ಹಾಗೆಯೇ ದುರ್ಭೇದ್ಯವಾದದ್ದು ಮತ್ತು ಸರ್ವ ವ್ಯಾಪಿಯಾದದ್ದು.

**ಭಕ್ತ**: ಅದರ ಹೆಸರೇನು ಸ್ವಾಮಿ?

**ಸ್ವಾಮಿ**: ಅದನ್ನು ಸೂಕ್ಷ್ಮ ಹೃದಯಾಕಾಶ ಎಂದು ಕರೆಯುತ್ತಾರೆ.

**ಭಕ್ತ**: ಅದು ಸರ್ವವ್ಯಾಪಕವಾಗುವುದು ಹೇಗೆ ಸಾಧ್ಯ?

**ಸ್ವಾಮಿ**: ಈ ಹೃದಯಾಕಾಶವು ವ್ಯಾಪಿಸುವಷ್ಟು ವಿಸ್ತಾರ, ಪ್ರದೇಶ ಉದ್ದಗಲಗಳನ್ನು ಬೇರೆಯಾವುದೂ ಹೊಂದಿರುವುದಿಲ್ಲ. ಎಷ್ಟು ಬಗೆಬಗೆಯಾದ ದೃಶ್ಯಗಳು. ಭಾವನೆ ಗಳು, ಎಷ್ಟೂ ಬಗೆಯ ಅನುಮಾನಗಳು ಅದರಲ್ಲಿ ಮುಳುಗಿವೆ, ಅದರಲ್ಲಿ ಸೇರಿ ಕೊಂಡಿವೆ ನೋಡು!

**ಭಕ್ತ:** ಹಾಗಾದರೆ ಆ ಸೂಕ್ಷ್ಮಾಕಾಶದಲ್ಲಿ ಸೂರ್ಯನೂ ಇರುವನೆ?

**ಸ್ವಾಮಿ:** ಖಂಡಿತವಾಗಿ! ಇಲ್ಲವೆಂದವರು ಯಾರು? ಅದಿಲ್ಲದೆ ಈ ವೈಭವ, ಶಾಂತಿ, ಬೆಳಕು, ಜ್ಞಾನ, ಉಜ್ವಲತೆಗಳು ಬರಲು ಹೇಗೆ ಸಾಧ್ಯ?

**ಭಕ್ತ:** ಅದರ ಹೆಸರೇನು ಸ್ವಾಮಿ?

**ಸ್ವಾಮಿ:** ಹೃದಯವು ಆಕಾಶವಾಗಿರುವಾಗ ಸೂರ್ಯನು ಸಹಜವಾಗಿಯೇ ಬುದ್ಧಿಯಾಗಿದ್ದು ಆ ಆಕಾಶವನ್ನು ಬೆಳಗುತ್ತಾನೆ. ಬುದ್ಧಿಯ ಕಿರಣಗಳು ಸೂರ್ಯನ ಕಿರಣಗಳಷ್ಟೇ ಉಜ್ವಲ. ಆದ್ದರಿಂದ ಬುದ್ಧಿಯೇ ಸೂಕ್ಷ್ಮ ಸೂರ್ಯ.

**ಭಕ್ತ:** ಆದ್ದರಿಂದ ಹೃದಯಾಕಾಶದಲ್ಲಿ ಚಂದ್ರನೂ ಸೂಕ್ಷ್ಮ ರೂಪದಲ್ಲಿ ಇರಲು ಸಾಧ್ಯ.

**ಸ್ವಾಮಿ:** ಇವುಗಳನ್ನು ಒಂದೊಂದಾಗಿ ಏಕೆ ಕೇಳುವೆ? ಮೊದಲಲ್ಲೆ! ನಾನು ಹೇಳಲಿಲ್ಲವೆ? ಪ್ರತಿಯೊಂದು ಸ್ಥೂಲ ನಾಮ–ರೂಪಕ್ಕೂ ಸಂವಾದಿಯಾದ ಸೂಕ್ಷ್ಮ ನಾಮ–ರೂಪವಿದೆ. ಚಂದ್ರ ಸೂಕ್ಷ್ಮ ರೂಪದಲ್ಲಿ ಪ್ರೇಮ, ತಂಪಾದ ಕಿರಣಗಳಿಂದ ಹೃದಯಕ್ಕೆ ಹಿತವಾಗಿರುತ್ತದೆ. ಪ್ರೇಮವು ಚಂದ್ರನ ಸೂಕ್ಷ್ಮ ರೂಪ.

**ಭಕ್ತ:** ಕ್ಷಮಿಸಿ ಸ್ವಾಮಿ; ಪಾಂಡವರು ಮತ್ತು ಕೌರವರು ಯುದ್ಧ ಮಾಡಿದರು, ಅಲ್ಲವೆ? ಅವರು, ಅಂದರೆ 'ಸೂಕ್ಷ್ಮ' ರೂಪದ ಪಾಂಡವರು, ಅವರ ವೈರಿಗಳಾದ 'ಸೂಕ್ಷ್ಮ' ಕೌರವರು ಹೇಗೆ 'ಸೂಕ್ಷ್ಮ' ಯುದ್ಧ ಮಾಡಿದರು ಎಂದು ಭಾವಿಸಲಾಗಿದೆ?

**ಸ್ವಾಮಿ:** "ಯುದ್ಧ ಮಾಡಿದರೆಂದು ಭಾವಿಸಲಾಗಿದೆ"ಎಂದೇಕೆ ಹೇಳುವೆ? ಅವರು ಇಂದಿಗೂ ಸೂಕ್ಷ್ಮ ರೂಪದಲ್ಲಿ ಯುದ್ಧ ಮಾಡುತ್ತಲೇ ಇದ್ದಾರೆ! ಈ ಯುದ್ಧದಲ್ಲಿ ದುರ್ಗುಣಗಳೇ ಕೌರವರು; ಸತ್ಯ–ಧರ್ಮ–ಶಾಂತಿ–ಪ್ರೇಮ–ಅಹಿಂಸೆ ಈ ಐದು ಸದ್ಗುಣಗಳೇ ಪಂಚಪಾಂಡವರು. ದುರ್ಗುಣಗಳು ಅಪಾರ ಸಂಖ್ಯೆಯಲ್ಲಿವೆ, ಕೌರವರ ಸಂಖ್ಯೆ ಅಧಿಕವಾಗಿರುವ ಹಾಗೆಯೇ. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಹೃದಯಾಕಾಶದಲ್ಲಿ, ತನ್ನದೇ ಚಿದ್ಭೂಮಿಯಲ್ಲಿ ಈ ಕಾಳಗವನ್ನು ಪ್ರತಿ ಕ್ಷಣವೂ ನಡೆಸುತ್ತಿದ್ದಾನೆ.

**ಭಕ್ತ:** ಸ್ವಾಮಿ, ಪಾಂಡವರು ಪಾಂಡುರಾಜನ ಮಕ್ಕಳು, ಕೌರವರು ಧೃತರಾಷ್ಟ್ರ ಮಹಾರಾಜನ ಮಕ್ಕಳು ಎಂದು ಹೇಳುತ್ತಾರೆ ಸೂಕ್ಷ್ಮ ರೂಪದಲ್ಲಿ ನಾವು ಇವರನ್ನು ಹೇಗೆ ಗುರುತಿಸುವುದು?

**ಸ್ವಾಮಿ :** ಇಬ್ಬರೂ ಅದೇ ಹೃದಯ ಸಾಮ್ರಾಜ್ಯದ ಅರಸುತನಕ್ಕಾಗಿ ಜಗಳವಾಡಿದರು; ಅವರು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಜ್ಞಾನಿ ಮತ್ತು ಸುಜ್ಞಾನಿಗಳಾಗಿ ಇದ್ದಾರೆ. ಕುರುಡು ಅಜ್ಞಾನಿ ವ್ಯಕ್ತಿತ್ವವೇ ಧೃತರಾಷ್ಟ್ರ; ಜ್ಞಾನಿ ಪಾಂಡುವೇ ಎಲ್ಲಾ ಸದ್ಗುಣಗಳ ತಂದೆ. ಅರ್ಥವಾಯಿತೆ?

**ಭಕ್ತ:** ಆದರೆ ಸ್ವಾಮಿ, ದಯವಿಟ್ಟು ಕ್ಷಮಿಸಿ; ಆ ಯುದ್ಧದಲ್ಲಿ ಲಕ್ಷಾಂತರ ಯೋಧರಿದ್ದರು, ರಥಗಳಿದ್ದುವು, ಪ್ರಜೆಗಳಿದ್ದರು; ಈ ಸೂಕ್ಷ್ಮ ಕಾಳಗದಲ್ಲಿ ಅವರು ಯಾರು?

**ಸ್ವಾಮಿ :** ಮನುಷ್ಯನಲ್ಲಿ ಅವರೆಲ್ಲರೂ ಇದ್ದಾರೆ. ಮಿಲಿಯಗಟ್ಟಲೆ ಭಾವನೆಗಳು, ಆಲೋಚನೆಗಳು, ಅಭಿಪ್ರಾಯಗಳು ಈ ಸೈನಿಕರು ಮತ್ತು ಪ್ರಜೆಗಳು. ಹತ್ತು ಇಂದ್ರಿಯಗಳೇ ಪಡೆಗಳು. ಪ್ರತಿಯೊಬ್ಬನ ಹೃದಯದಲ್ಲೂ ಒಳಿತು ಕೆಡುಕುಗಳ ನಡುವೆ, ಪಾಂಡವರು–ಕೌರವರ ನಡುವೆ ನಿರಂತರ ಯುದ್ಧ ನಡೆಯುತ್ತಲೇ ಇದೆ. ತಿಳಿಯಿತೆ?

**ಭಕ್ತ:** ಸರಿ, ಈ ಸೂಕ್ಷ್ಮ ಯುದ್ಧದಲ್ಲಿ ಕೃಷ್ಣಭಗವಂತ ಯಾರು? ಅಧಿಕಾರಕ್ಕಾಗಿ ನಡೆದ ಸ್ಥೂಲ ಯುದ್ಧದಲ್ಲಿ ತಟಸ್ಥನಾಗಿದ್ದನಲ್ಲ, ಅವನು ಇಲ್ಲಿ ಯಾರು?

**ಸ್ವಾಮಿ :** ನಿನಗೆ ತಿಳಿಯದೆ? ಅವನೇ ಆತ್ಮ ಎಂದು ಪ್ರಸಿದ್ಧನಾದ ಸಾಕ್ಷಿ. ಅವನೇ ಜೀವ ರಥದ ಸಾರಥಿ.

**ಭಕ್ತ:** ಇನ್ನೊಂದು ಪ್ರಶ್ನೆ. ಇವರೆಲ್ಲರಿಗೂ ಆಗ ಹಸ್ತಿನಾಪುರ ರಾಜಧಾನಿಯಾಗಿತ್ತು. ಮನುಷ್ಯನಲ್ಲಿ ಹಸ್ತಿನಾಪುರ ಯಾವುದು?

**ಸ್ವಾಮಿ :** ಈ ಎಲ್ಲ ಸೂಕ್ಷ್ಮ ವ್ಯಾಪಾರಗಳಿಗೂ ಈ ಜನರು, ರಥಗಳು, ಪಾಂಡವರು, ಕೌರವರು ಎಲ್ಲರಿಗೂ ನಿನಗೇ ತಿಳಿದಿರುವಂತೆ ಆಧಾರವಾಗಿರುವುದು ಈ ಅಸ್ಥಿನಾಪುರ, ಮೂಳೆಗಳ ನಗರ, ಈ ದೇಹ. ಈ ಅಸ್ಥಿಪಂಜರವೇ ಹಸ್ತಿನಾಪುರ. ಎರಡಕ್ಕೂ ನವದ್ವಾರಗಳಿವೆ. ಅಲ್ಲಿ ಕೌರವರೂ ಪಾಂಡವರೂ ಜನಿಸಿದರು; ಒಟ್ಟಿಗೆ ಆಡಿದರು, ವಿದ್ಯಾಭ್ಯಾಸ ಪಡೆದರು; ಒಟ್ಟಾಗಿ ಬೆಳೆದರು. ಹಾಗೆಯೇ ಅಸ್ಥಿನಾಪುರದಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣಗಳೆಲ್ಲವೂ ಹುಟ್ಟುತ್ತವೆ ಮತ್ತು ಬೆಳೆಯುತ್ತವೆ. ಅವು ಬೆಳೆಯುತ್ತವೆ, ನಶಿಸುತ್ತವೆ, ಅವು ಪರಸ್ಪರ ನೋಡಿ ದ್ವೇಷಿಸುತ್ತವೆ. ಎಲ್ಲ ನಡೆಯುವುದೂ ಈ ದೇಹದಲ್ಲೇ. ಈ ದೇಹದಲ್ಲಿ ಆಳುತ್ತಿರುವ ಅರಸರೂ ಅಜ್ಞಾನಿ ಮತ್ತು ಸುಜ್ಞಾನಿಗಳಲ್ಲವೆ?

**ಭಕ್ತ:** ಹೌದು ಸ್ವಾಮಿ, ಮಹಾಭಾರತ ಯುದ್ಧಕ್ಕೂ ಮನುಷ್ಯನ ಗುಣಗಳು ಮತ್ತು ನಡವಳಿಕೆಗಳಿಗೂ ನಿಕಟವಾದ ಸಂಬಂಧವಿದೆ. ಅದರಲ್ಲಿ ಸಂದೇಹವೇ ಇಲ್ಲ. ಎಷ್ಟು ಸುಂದರವಾದ ಹೋಲಿಕೆ! ನೀವು ಹೇಳಿದಂತೆ ಈ ಯುದ್ಧವು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಈಗಲೂ ನಡೆಯುತ್ತಲೇ ಇದೆ. ಸ್ವಾಮಿ, ಈ ಯುದ್ಧವು ಕೊನೆಗೊಳ್ಳುವುದು ಯಾವಾಗ?

**ಸ್ವಾಮಿ:** ಈ ಯುದ್ಧ ಯಾವಾಗ ನಿಲ್ಲುತ್ತದೆ ಎಂದು ಕೇಳುವೆಯಾ? 'ದುರ್ಗುಣಗಳು' ಮತ್ತು 'ಸದ್ಗುಣಗಳು' ಸಂಪೂರ್ಣವಾಗಿ ಅಳಿಸಿಹೋಗಿ ಮನುಷ್ಯನು ಗುಣರಹಿತನಾದಾಗ; ಆಗ ಮಾತ್ರವೇ ಅವನಿಗೆ ಶಾಂತಿ ದೊರಕುತ್ತದೆ.

**ಭಕ್ತ:** ಆ ಸಮಯದಲ್ಲಿ ಯುದ್ಧರಂಗವಾದ ಈ ಅಸ್ಥಿನಾಪುರ ಮೂಳೆಗಳ ನಗರ ಇರುವುದಿಲ್ಲ ಅಲ್ಲವೆ?

**ಸ್ವಾಮಿ:** ಯುದ್ಧ ನಡೆಯುವಾಗ ಯುದ್ಧರಂಗವೊಂದಿರಲೇಬೇಕು. ಯುದ್ಧವೇ ಇಲ್ಲದೆ ಹೋದರೆ ರಣರಂಗದ ವಿಷಯವಾಗಿ ಏಕೆ ತಲೆಕೆಡಿಸಿಕೊಳ್ಳಬೇಕು?

**ಭಕ್ತ:** ಈ ಯುದ್ಧವೇ ಆಗದಂತೆ ತಡೆಯಲು ಸಾಧ್ಯವಿಲ್ಲವೆ ಸ್ವಾಮಿ?

**ಸ್ವಾಮಿ:** ಯಾಕಾಗದು? ರಾಜರು ಯುದ್ಧ ಮನೋಧರ್ಮವನ್ನು ಬೆಳೆಸಿಕೊಳ್ಳುವುದಕ್ಕೆ ಕಾರಣ ಅವರಿಗೆ ತಮ್ಮ ಪ್ರಜೆಗಳ ಮೇಲೆ ವಿಶ್ವಾಸವಿರುವುದು. ಪ್ರಜೆಗಳು ಯುದ್ಧದ ಬೇಟೆ ನಾಯಿಗಳನ್ನು ಸರಪಣಿ ಕಳಚಿ ಎದುರಾಳಿಯ ಮೇಲೆ ಬಿಡುವಂತೆ ರಾಜನನ್ನು ಪ್ರೋತ್ಸಾಹಿಸುತ್ತಾರೆ. ಭ್ರಮೆಗಳೇ ಈ ಪ್ರಜೆಗಳು. ಅವು ವ್ಯಕ್ತಿಯನ್ನು ಯುದ್ಧಕ್ಕೆ ತಳ್ಳುತ್ತವೆ. ಅಂತಹ ಪ್ರಜೆಗಳೇ ಇಲ್ಲದಾಗ ಯುದ್ಧವೂ ನಡೆಯುವುದಿಲ್ಲ. ಆದ್ದರಿಂದ ಭ್ರಮೆಗಳೆಂಬ 'ನಾನು' 'ನನ್ನದು' ಭಾವನೆಗಳೆಂಬ ಪ್ರಜೆಗಳಿಂದ ನಿನ್ನನ್ನು ಬೇರ್ಪಡಿಸಿಕೋ. ಆಗ ನೀನು ಯಾವುದೇ ಕಲಕಾಟವಿಲ್ಲದೆ ನೆಮ್ಮದಿಯಾಗಿ ಶಾಂತಿಯನ್ನು ಸವಿಯುವೆ... ಮಗು, ಈಗ ನೀನು ಹೋಗಿ ಬಾ! ಸ್ವಲ್ಪತಾಳು! ಒಂದು ವಿಷಯ ಹೇಳಿಬಿಡುತ್ತೇನೆ. ಎಲ್ಲಾ ಬಗೆಯ ಸಂದೇಹಗಳನ್ನು ಬೆಳೆಸಿಕೊಳ್ಳುವುದೂ ಒಂದು ಭ್ರಮೆಯೇ! ಅದು ವ್ಯಾಮೋಹ! ಈ ಲಕ್ಷಣವನ್ನೂ ಕಳೆದುಕೊಳ್ಳಲು ಪ್ರಯತ್ನಿಸು! ಒಳ್ಳೆಯದು ಈಗ ಹೋಗಿ ಮತ್ತೆ ಬಾ!

# ಅಧ್ಯಾಯ ೧೩

**ಭಕ್ತ:** ಸ್ವಾಮಿ, ಕಳೆದ ಸಾರಿ ಮಹಾಭಾರತ ಯುದ್ಧದ ವಿಷಯವಾಗಿ ಹೇಳಿದಿರಿ; ಅದೇ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲೂ ರಾಮಾಯಣವೂ ನಡೆಯುತ್ತಿರುತ್ತದೆಯೆ?

**ಸ್ವಾಮಿ :** ಸಂದೇಹವೇ ಇಲ್ಲ! ಅದು ವ್ಯವಸ್ಥಿತವಾಗಿ, ಅದೇ ಕ್ರಮದಲ್ಲಿ ನಡೆಯುತ್ತಿರುತ್ತದೆ.

**ಭಕ್ತ:** ಹಾಗಾದರೆ ಇದರಲ್ಲಿ ರಾಮನು ಯಾವ ರೂಪದಲ್ಲಿ ಬರುತ್ತಾನೆ?

**ಸ್ವಾಮಿ :** ಆತ್ಮನೇ ರಾಮ. ಅವನು ದೇಹವೆಂಬ ಉಡುಗೆಯನ್ನು ಧರಿಸಿ ಜೀವಿಯ ಲಕ್ಷಣಗಳೊಂದಿಗೆ ಬಂದಿದ್ದಾನೆ.

**ಭಕ್ತ:** ಹಾಗಾದರೆ ಸಂಕಲ್ಪಸಿದ್ಧನಾದ, ನೆನೆದದ್ದು ನಡೆಯುವ ಸರ್ವಸಮರ್ಥನಾದ ಅವನು ಅಷ್ಟೇಕೆ ದುಃಖವನ್ನು ಅನುಭವಿಸುತ್ತಾನೆ?

**ಸ್ವಾಮಿ :** ಅದೆಲ್ಲ ಅವನ ಆಟ, ಲೀಲೆ. ಅವನಿಗೆ ಸುಖ ಅನ್ನುವುದೇನು? ದುಃಖ ಅನ್ನುವುದೇನು? ಅವನು ಆನಂದಸ್ವರೂಪನು. ಅವನಿಗೆ ಆ ಎರಡೂ ಗೊತ್ತಿಲ್ಲ. ಅವನು ಸಕಲ ವಸ್ತುಗಳನ್ನು ಸೃಷ್ಟಿಸಬಲ್ಲನು. ಈ ವಿಶ್ವದ ರಂಗಸ್ಥಳದ ಮೇಲೆ ಅವನು ರಾಮಾಯಣವನ್ನು ಅಭಿನಯಿಸಿದ್ದಾನೆ, ತಾನೇ ಪಾತ್ರವಾಗಿ ನಟಿಸಿದ್ದಾನೆ. ಪ್ರತಿಯೊಂದು ಗುಣವನ್ನೂ ಬೇರೆ ಬೇರೆ ಆದ ರೂಪವಾಗಿ ತೋರಿಸಿದ್ದಾನೆ. ಇಂತಹ ರಾಮಾಯಣವು ಇಂದೂ ಪ್ರತಿಯೊಂದು ಹೃದಯದಲ್ಲೂ ನಡೆಯುತ್ತಿದೆ. ಹೃದಯದಲ್ಲಿರುವ ರಾಮನು, ಆತ್ಮಾರಾಮನು ಎಲ್ಲವನ್ನೂ ಸಾಕ್ಷಿಯಾಗಿ ವೀಕ್ಷಿಸುತ್ತಿದ್ದಾನೆ.

**ಭಕ್ತ:** ಆದರೆ ಚೈತನ್ಯರಹಿತ ಜಡ ವಸ್ತುವಾದ ಜೀವಿ ಈ ರಾಮಾಯಣದಲ್ಲಿ ಹೇಗೆ ಬರುತ್ತದೆ?

**ಸ್ವಾಮಿ :** ಈ ಜಡ ವಸ್ತುವು ಚೈತನ್ಯವನ್ನು, ಬ್ರಹ್ಮಜ್ಞಾನವನ್ನು ಸ್ವೀಕರಿಸುತ್ತದೆ. ಚೈತನ್ಯವು ಸೀತಾ ಎಂಬ ಹೆಸರಿನಿಂದ ಹುಟ್ಟುತ್ತದೆ. ಜಡ ಮತ್ತು ಚೈತನ್ಯಗಳು ಒಂದುಗೂಡುತ್ತವೆ. ಇದನ್ನೇ ಸೀತಾರಾಮ ಎನ್ನುವುದು. ಜಡ ಮತ್ತು ಚೈತನ್ಯಗಳು ಒಂದಾಗಿರು

ವವರೆಗೆ ಯಾವ ಕಷ್ಟವೂ ಇಲ್ಲ, ದುಃಖವೂ ಇಲ್ಲ. ಇವೆರಡರಲ್ಲಿ ಒಂದು ಅಗಲಿದಾಗ ಮಾತ್ರವೇ ಎಲ್ಲಾ ದುಃಖಗಳು ಮೊದಲಾಗುತ್ತವೆ.

**ಭಕ್ತ:** ಅದು ಹೇಗೆ ಸ್ವಾಮಿ?

**ಸ್ವಾಮಿ:** ಬ್ರಹ್ಮಜ್ಞಾನವಾಗಿರುವ ಸೀತೆಯು ಜೀವದ ರೂಪದಲ್ಲಿರುವ ಆತ್ಮನೊಂದಿಗೆ ಹೊರಟುಹೋಗುತ್ತಾಳೆ; ಆದ್ದರಿಂದ ಕತ್ತಲೆಂಬ ಕಾಡಿಗೆ ಬೀಳುವುದು ಅನಿವಾರ್ಯ ವಾಗುತ್ತದೆ. ಇದನ್ನು ನಮಗೆ ತೋರಿಸಿಕೊಡುವ ಸಲುವಾಗಿಯೇ ರಾಮನು ಹೀಗೆ ವರ್ತಿಸುತ್ತಾನೆ. ಸೀತೆ ಅಥವಾ ಬ್ರಹ್ಮಜ್ಞಾನವನ್ನು ಕಳೆದುಕೊಳ್ಳಲು ಬಿಟ್ಟುಬಿಟ್ಟರೆ ಕತ್ತಲ ಕಾಡಿನಲ್ಲಿ ಅಲೆಯುವುದನ್ನು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ.

**ಭಕ್ತ:** ಹಾಗಿದ್ದರೆ ಲಕ್ಷ್ಮಣನು ಸದಾಕಾಲವೂ ಅವನೊಂದಿಗೆ ಇರಲು ಏನು ಕಾರಣ? ನಮ್ಮ ಬದುಕಿನಲ್ಲಿ ಅವನು ಏನನ್ನು ಪ್ರತಿನಿಧಿಸುತ್ತಾನೆ?

**ಸ್ವಾಮಿ:** ಬದುಕೆಂಬ ಕತ್ತಲ ಕಾಡಿನಲ್ಲಿ ವ್ಯಕ್ತಿಯು ಒಂಟಿಯಾಗಿರಬಾರದು. ಅವನ ಮನಸ್ಸು ಅವನ ಜೊತೆಯಲ್ಲಿ ಇರಲೇಬೇಕು. ಆದ್ದರಿಂದಲೇ ಲಕ್ಷ್ಮಣನು ರಾಮನ ಜೊತೆಗಿದ್ದಾನೆ.

**ಭಕ್ತ:** ರಾಮಾಯಣದಲ್ಲಿ ವಾಲಿ ಸುಗ್ರೀವರನ್ನು ವರ್ಣಿಸಲಾಗಿದೆ. ಅವರು ಯಾರು?

**ಸ್ವಾಮಿ:** ಕತ್ತಲ ಕಾಡಿನಲ್ಲಿ ಅಲೆದಾಡುತ್ತಿರುವಾಗ, ವಿವೇಚನೆ ಇರಬೇಕಾದ ಕಡೆ ಅದಕ್ಕೆ ಬದಲು ಹತಾಶೆ ಇರುತ್ತದೆ. ಅವು ಪರಸ್ಪರ ಸೇಡು ತೀರಿಸಿಕೊಳ್ಳಲು ಕಾದಿರುತ್ತವೆ. ವಾಲಿಯನ್ನು ಸಂಹರಿಸಬೇಕು; ಆಗಲೇ ಗೆಲುವು ನಿಶ್ಚಿತವಾಗುವುದು. ಹತಾಶೆಯೇ ವಾಲಿ; ವಿವೇಚನೆಯೇ ಸುಗ್ರೀವ.

**ಭಕ್ತ:** ಇವರಿಬ್ಬರ ನಡುವೆ ಕಾಣಿಸಿಕೊಳ್ಳುವ ಹನುಮಂತ? ಅವನು ಯಾರು?

**ಸ್ವಾಮಿ:** ಹತಾಶೆಯನ್ನು ಗೆಲ್ಲುವಾಗ ತುಂಬಾ ಸಹಾಯವಾಗುವುದು ಧೈರ್ಯ ದಿಂದ. ಅದೇ ಹನುಮಂತ, ಅವನೇ ಧೈರ್ಯ. ಧೈರ್ಯದ ಬಲದಿಂದ ಭ್ರಮೆಯ ಸಾಗರವನ್ನು ದಾಟುವುದು ಸಾಧ್ಯ. ಆದ್ದರಿಂದಲೇ ರಾಮನು ಹನುಮಂತನ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ನಿರ್ಮಿಸಿದ.

**ಭಕ್ತ:** ಭ್ರಮೆಯ ಸಾಗರವನ್ನು ದಾಟಿದ ಮೇಲೆ ಏನು ಮಾಡಬೇಕು?

**ಸ್ವಾಮಿ:** ಸೇತುವೆಯ ಮೇಲೆ ಸಾಗರವನ್ನು ದಾಟಿ ರಾಮನು ಏನು ಮಾಡಿದ ನೆಂದು ನಿನಗೆ ತಿಳಿಯದೆ? ಮೋಹ ಅಥವಾ ಭ್ರಮೆಯನ್ನು ಗೆದ್ದು, ರಾವಣ, ಕುಂಭಕರ್ಣರ ರೂಪದಲ್ಲಿದ್ದ ರಜೋಗುಣ, ತಮೋಗುಣಗಳನ್ನು ಸಂಹರಿಸಿದನು. ಉಳಿದ ಇನ್ನೊಬ್ಬ ಸಹೋದರ ಸತ್ವಗುಣ, ಅಂದರೆ ವಿಭೀಷಣ. ಅವನನ್ನು ರಾಜ ನನ್ನಾಗಿ ಮಾಡಿದ. ಮುರು ಗುಣಗಳನ್ನು ರಾವಣ–ಕುಂಭಕರ್ಣ ಮತ್ತು ವಿಭೀಷಣ ಈ ಸೋದರರನ್ನಾಗಿ ಚಿತ್ರಿಸಲಾಗಿದೆ.

**ಭಕ್ತ:** ಇದಾದ ಮೇಲೆ ಏನನ್ನು ಸಾಧಿಸಬೇಕು?

**ಸ್ವಾಮಿ:** ಏನನ್ನು ಸಾಧಿಸುವುದು ಎಂದೆಯಾ? ಮುಂದಿನದು ಅನುಭವ ಜ್ಞಾನ ಅಥವಾ ಸೀತೆಯನ್ನು ಪಡೆಯುವುದು; ಅದು ಅನುಭವದ ನಂತರ ಬಂದ ಜ್ಞಾನ; ವಾಸ್ತವ ಜಿವನದಲ್ಲಿ ಪಡೆಯುವ ಜ್ಞಾನ. ಜಡ ಮತ್ತು ಚೈತನ್ಯಗಳು ಮರಳಿ ಬಂದಾಗ ಅದೇ ಪಟ್ಟಾಭಿಷೇಕ, ಅಂದರೆ ಜೀವನ್ಮುಕ್ತಿ, ಜೀವಕ್ಕೆ ಬಿಡುಗಡೆ.

ಆದ್ದರಿಂದ ರಾಮಾಯಣದ ಮೂಲ ಬೋಧನೆ ಇದು: "ಜೀವ, ಮನಸ್ಸು, ಜ್ಞಾನ, ಹತಾಶೆ, ವಿವೇಚನೆ, ಧೈರ್ಯ, ಭ್ರಮೆ, ರಜಸ್ಸು, ತಮಸ್ಸು, ಸತ್ವ–ಎಲ್ಲವೂ ಒಂದೊಂದೂ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಂಡಿವೆ; ಇವುಗಳನ್ನು ಪಡೆಯು ವುದು ಹೇಗೆ ಅಥವಾ ಅಡಗಿಸುವುದು ಹೇಗೆ, ಯಾವ ಮಾರ್ಗಗಳಿಂದ ಎಂಬು ದನ್ನು ಕಲಿಯಬೇಕು." ಇದೆಲ್ಲವನ್ನೂ ಆತ್ಮನು ಮಾಡುತ್ತಾನೆ. ಅವನೇ ರಾಮನೆಂಬ ರೂಪದಿಂದ ಹೆಸರಿನಿಂದ ಬಂದಿರುವವನು. ತನ್ನ ವರ್ತನೆಯಿಂದ ನಡವಳಿಕೆ ಯಿಂದ ನಮ್ಮನ್ನು ನಿರ್ದೇಶಿಸುತ್ತಿದ್ದಾನೆ, ದಾರಿ ತೊರಿಸುತ್ತಿದ್ದಾನೆ. ಆದ್ದರಿಂದ ರಾಮಾಯಣವು ಎಂದೋ ಮುಗಿದು ಹೋಗಲಿಲ್ಲ. ಎಲ್ಲಿಯವರೆಗೆ ಈ ದಾರಿಗಳಿಂದ ಸಾಧನೆಗಾಗಿ ಹೋರಾಟ ನಡೆಯುತ್ತಿರುವುದೋ ಎಲ್ಲಿಯವರೆಗೆ ಜನರು ಕೊನೆಯಲ್ಲಿ ಅನುಭವ ಜ್ಞಾನವನ್ನು ಪಡೆದು ಸತ್ವಗುಣಕ್ಕೆ ಪಟ್ಟಾಭಿಷೇಕ ವಾಗುತ್ತದೆಯೋ ಅಲ್ಲಿಯವರೆಗೂ ಮಾನವನ ಹೃದಯದಲ್ಲಿ ರಾಮಾಯಣವು ನಡೆಯುತ್ತಲೇ ಇರುತ್ತದೆ. ಒಂದು ಕಡೆ ಮಹಾಭಾರತ ಯುದ್ಧ, ಇನ್ನೊಂದು ಕಡೆ ರಾಮಾಯಣ; ಮತ್ತೊಂದು ಕಡೆ ಭಾಗವತ–ಹೀಗೆ ಜೀವನವು ನಿರಂತರವಾಗಿ ಮುಂದುವರಿದಿದೆ. ಇವು ರಾಮಾಯಣ, ಮಹಾಭಾರತ ಮತ್ತು ಭಾಗವತಗಳ ಸೂಕ್ಷ್ಮ ರೂಪಗಳು. ಅರ್ಥವಾಯಿತೆ?

**ಭಕ್ತ:** ಅಂದರೆ, ವಾಸ್ತವ ಬದುಕಿನ ರಾಮಾಯಣದಲ್ಲಿ ಆತ್ಮವೇ ರಾಮ, ಮನಸ್ಸು ಲಕ್ಷ್ಮಣ, ಬ್ರಹ್ಮಜ್ಞಾನವು ಸೀತೆ. ಆ ಸೀತೆ ಕಳೆದು ಹೋದಾಗ ರಾಮನು ಅಸ್ತಿತ್ವ

ಅರಣ್ಯ ಪ್ರವೇಶ ಮಾಡುತ್ತಾನೆ. ಅಲ್ಲಿ ಆ ಕಾಡಿನಲ್ಲಿ ಹತಾಶೆ ಮತ್ತು ವಿವೇಚನೆ ಇವೆ. ಹನುಮಂತ ಅಥವಾ ಧೈರ್ಯವನ್ನು ಜೊತೆಗಿಟ್ಟುಕೊಂಡರೆ ನಾವು ಮೋಹದ ಸಾಗರವನ್ನು ದಾಟಬಹುದು. ಉತ್ಸಾಹವೆಂಬ ಸೈನ್ಯದಲ್ಲಿ ಜಾಂಬವಂತ, ಅಂಗದ ಮತ್ತು ಇತರ ವಾನರರು ಪ್ರತಿನಿಧಿಸುತ್ತಾ ಬಲ ಮತ್ತು ದೃಢನಿರ್ಧಾರಗಳನ್ನು ಜೊತೆಗೂಡಿಸಿಕೊಳ್ಳಬೇಕು. ಸಾಗರ ದಾಟಿದೊಡನೆ ರಾವಣ ಮತ್ತು ಕುಂಭಕರ್ಣರು ಸಂಕೇತಿಸುವ ರಾಜಸಿಕ ಗುಣ ಮತ್ತು ತಾಮಸಿಕ ಗುಣಗಳನ್ನು ನಾಶಮಾಡ ಬಹುದು. ಸಾತ್ವಿಕ ಗುಣ ಅಥವಾ ವಿಭೀಷಣನಿಗೆ ಆಮೇಲೆ ಕಿರೀಟಧಾರಣೆ ಮಾಡ ಬಹುದು. ಆಗ ಅನುಭವ ಜ್ಞಾನ ಸೀತೆಯು ದೊರಕುತ್ತಾಳೆ. ಹೀಗೆ ಜಡ ಮತ್ತು ಚೈತನ್ಯಗಳ ಸಂಯೋಗ ಅಂದರೆ, ಸೀತೆ ಮತ್ತು ರಾಮರ ಒಂದುಗೂಡುವುದು ಅದೇ ಆನಂದ, ಜೀವನ್ಮುಕ್ತಿ; ಆತ್ಮಕ್ಕೆ ಬಿಡುಗಡೆ. ಆಹಾ! ಎಂತಹ ಅದ್ಭುತವಾದ ರಾಮಾಯಣ! ದಶರಥನ ಪುತ್ರನು ಸಾಧಿಸಿದಂತೆ ಈ ಸೂಕ್ಷ್ಮ ರಾಮಾಯಣವು ಗುಣಗಳು ಮತ್ತು ಇಂದ್ರಿಯಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ನಡೆಯು ತ್ತಿದೆ ಎಂದು ಹೇಳಬಹುದು.

**ಸ್ವಾಮಿ :** 'ಹೇಳಬಹುದು' ಎನ್ನುವುದಿಲ್ಲ. ಅದು ಸೂಕ್ಷ್ಮ ರಾಮಾಯಣವಾಗಿ ನಡೆ ಯುತ್ತಲೇ ಇದೆ.

**ಭಕ್ತ:** ಸ್ವಾಮಿ, ರಾಮಾಯಣದಲ್ಲಿ ಪ್ರತಿಯೊಂದು ಗುಣವೂ ಪ್ರತಿಯೊಂದು ಇಂದ್ರಿ ಯವೂ ಬೇರೆ ಬೇರೆ ರೂಪವನ್ನು ಪಡೆಯುತ್ತದೆ ಎಂದು ಹೇಳಿದಿರಿ. ಇಂದ್ರಿಯಗಳು ರೂಪವನ್ನು ಪಡೆಯುತ್ತವೆಂಬುದನ್ನು ಕಲ್ಪಿಸಿಕೊಂಡರೆ ಆಶ್ಚರ್ಯವಾಗುತ್ತದೆ. ಈ ಸ್ಥೂಲ ಮತ್ತು ಸೂಕ್ಷ್ಮ ರಾಮಾಯಣಗಳಲ್ಲಿ ಇಂದ್ರಿಯಗಳು ಯಾವ ರೂಪ ತಳೆಯುತ್ತವೆ?

**ಸ್ವಾಮಿ :** ಗುಣವು ಯಾವುದೇ ಇದ್ದರೂ ಇಂದ್ರಿಯಗಳ ಸಹಾಯವಿಲ್ಲದೆ ವ್ಯಕ್ತವಾಗು ವುದು ಹೇಗೆ? ಗುಣಗಳು ಇಂದ್ರಿಯಗಳಲ್ಲಿ ಬೆಳೆಯುತ್ತವೆ. ಕರ್ಮೇಂದ್ರಿಯಗಳು ಐದು; ಜ್ಞಾನೇಂದ್ರಿಯಗಳು ಐದು. ಈ ಹತ್ತೂ ಮನಸ್ಸಿನೊಂದಿಗೆ ಕೂಡಿ ಕೊಂಡು ಮೋಹವನ್ನು ಉಂಟುಮಾಡುತ್ತವೆ ಅಲ್ಲವೆ? ಇಲ್ಲವಾದರೆ ವಿಲೀನದ ಪ್ರಶ್ನೆಯೇ ಬರುತ್ತಿರಲಿಲ್ಲ. "ಮಾಯೆಯಲ್ಲಿ ಹುಟ್ಟಿ, ಮಾಯೆಯಲ್ಲಿ ಬೆಳೆದ ಮನುಷ್ಯನ ಬದುಕಿನ ಗುರಿ ಮಾಯೆಯನ್ನು ಗೆಲ್ಲುವುದು" ಎಂದು ಹೇಳಲಾಗಿದೆ. ಹಾಗೆಯೇ ಇಂದ್ರಿಯಗಳಲ್ಲಿ ಹುಟ್ಟಿ, ಇಂದ್ರಿಯಗಳಲ್ಲಿ ಬೆಳೆದ ಚೈತನ್ಯವು ಇಂದ್ರಿಯಗಳ ಮೇಲೆ ಪ್ರಭುತ್ವವನ್ನು ಸಂಪಾದಿಸಬೇಕು. ಅದು ಅದರ ಮೂಲ ಕರ್ತವ್ಯ. ರಾಮ ಅಂದರೆ ಜೀವಿಯು ಹುಟ್ಟಿದ್ದು ಎಲ್ಲಿ ಎಂಬುದು ನಿನಗೆ ಗೊತ್ತೆ? ಅವನು ಯಾರ ಮಗ?

ದಶರಥನಿಗೆ ಹೆಸರು ಇರುವುದು ಅವನು ದೇಶಂದ್ರಿಯಗಳನ್ನು ಸಂಕೇತಿಸುವುದರಿಂದ. ನಾವು ಯಾವುದೇ ರೂಪವನ್ನು ಅಥವಾ ಗುಣವನ್ನು ಪರಿಭಾವಿಸಿದರೂ ಈ ಹತ್ತು ಕರ್ಮ ಮತ್ತು ಜ್ಞಾನೇಂದ್ರಿಯಗಳಿಗೆ ಸಂಬಂಧಿಸದೆ ಇರಲು ಸಾಧ್ಯವೇ ಇಲ್ಲ. ದಶರಥನ ರೂಪದಲ್ಲಿ ಈ ಹತ್ತು ಇವೆ.

**ಭಕ್ತ:** ದಶರಥನಿಗೆ ನಾಲ್ವರು ಪುತ್ರರು ಜನಿಸಿದರು. ಅವರು ಯಾವುದರ ರೂಪಗಳು ಸ್ವಾಮಿ?

**ಸ್ವಾಮಿ:** ಹತ್ತು ಇಂದ್ರಿಯಗಳಿಂದ ನಾಲ್ಕು ಮಾತ್ರವಲ್ಲ ಎಷ್ಟೆಷ್ಟು ಸಂಖ್ಯೆಯ ಗುಣಗಳು ಮತ್ತು ರೂಪಗಳು ಬೇಕಾದರೂ ಜನಿಸಬಹುದು. ಅವುಗಳಲ್ಲಿ ಅತಿ ಮುಖ್ಯವಾದವು ಭಗವಂತನ ಇಚ್ಛೆಯಂತೆ ಉದಿಸಿದ ಅವನ ನಾಲ್ಕು ಮುಖಗಳನ್ನು ಸಂಕೇತಿಸುತ್ತವೆ. ಅವು ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರ ರೂಪದಲ್ಲಿ ಹುಟ್ಟಿವೆ. ಇವರೇ ಸೂಕ್ಷ್ಮ ರೂಪದಲ್ಲಿ ಸತ್ಯ–ಧರ್ಮ–ಶಾಂತಿ ಮತ್ತು ಪ್ರೇಮಗಳು. ಇವು ಭಗವಂತನ ನಾಲ್ಕು ಮುಖಗಳು.

**ಭಕ್ತ:** ಇವರಲ್ಲಿ ಸತ್ಯ ಯಾರು ಸ್ವಾಮಿ? ಧರ್ಮ–ಶಾಂತಿ–ಪ್ರೇಮಗಳನ್ನು ಯಾರು ಪ್ರತಿನಿಧಿಸುತ್ತಾರೆ?

**ಸ್ವಾಮಿ:** ನೀನು ಕಂಡುಕೊಳ್ಳಲಾರೆಯಾ? ರಾಮನೇ ಸತ್ಯ. ನೀನು ಕಿರೀಟ ಧಾರಣೆ ಮಾಡು ಎಂದು ನೀಡಿದಾಗ, "ಯಾರಿಗೆ ನಿಜವಾದ ಹಕ್ಕಿದೆಯೋ ಅವನಿಗೆ ಈ ಪದವಿ, ಗೌರವ ಎಲ್ಲವೂ ಸಲ್ಲಬೇಕೇ ಹೊರತು ನನಗಲ್ಲ," ಎಂದು ಭರತನು ಹೇಳಿಬಿಟ್ಟನು. ಆದ್ದರಿಂದ ಅವನು ಧರ್ಮದ ಸಂಕೇತ. ಆತ್ಮ ಅಂದರೆ ರಾಮನಲ್ಲಿ ಸಂಪೂರ್ಣ ಶ್ರದ್ಧೆಯನ್ನಿಟ್ಟು, ಅದರ ಅವಿಚ್ಛಿನ್ನ ಸಹವಾಸಕ್ಕಿಂತ ಮಧುರವಾದ ಆನಂದ ಬೇರೊಂದಿಲ್ಲ ಎಂದು ನಂಬಿ ಲಕ್ಷ್ಮಣನು ರಾಮನನ್ನು ಹಿಂಬಾಲಿಸಿ ಕಾಡಿಗೆ ಹೋದನು. ಆದ್ದರಿಂದ ಅವನು ತನ್ನದೆ ಆದ ಪ್ರತ್ಯೇಕ ಆಶೋತ್ತರಗಳಿಲ್ಲದ ಪ್ರೇಮವಾಗಿದ್ದಾನೆ. ಈ ಮೂವರ ದಾರಿಯನ್ನೇ ಅನುಸರಿಸಿ ಶತ್ರುಘ್ನನು ಶಾಂತನಾಗಿ, ಸ್ವಲ್ಪವೂ ವಿಕ್ಷುಬ್ಧವಾಗದೆ ಉಳಿದನು. ಆದ್ದರಿಂದ ಅವನು ಶಾಂತಿಯ ಸಂಕೇತವಾಗಿದ್ದಾನೆ. ಅರ್ಥವಾಯಿತೆ?

**ಭಕ್ತ:** ಆಯಿತು ಸ್ವಾಮಿ, ಆದರೆ ಈ ನಾಲ್ಕು ಜನರೂ ಮೂರು ತಾಯಿಯರಿಂದ ಜನಿಸಿದರು. ಆ ಮೂರು ತಾಯಿಯರು ಯಾರು?

**ಸ್ವಾಮಿ :** ನಾನು ಈಗ ತಾನೆ ಹೇಳಿದ ಹಾಗೆ, ಮಾಯೆಯಲ್ಲಿ ಹುಟ್ಟಿ, ಮಾಯೆಯಲ್ಲಿ ಬೆಳೆದು ವ್ಯಕ್ತಿಯು ಈ ಮಾಯೆಯನ್ನೇ ಗೆಲ್ಲಬೇಕು. ಹಾಗೆಯೆ ವ್ಯಕ್ತಿಯು ಗುಣಗಳಿಂದ ಜನಿಸುತ್ತಾನೆ, ಗುಣಗಳಲ್ಲೇ ಬೆಳೆಯುತ್ತಾನೆ; ಅಂತಿಮವಾಗಿ ಗುಣಗಳನ್ನು ಮೀರಿ ಅವನು ನಿಲ್ಲಬೇಕು. ಮೂವರು ತಾಯಂದಿರು ಈ ಮೂರು ಗುಣಗಳನ್ನು ಪ್ರತಿನಿಧಿಸುತ್ತಾರೆ. ಅವರಲ್ಲಿ ಕೌಸಲ್ಯೆ ಸತ್ವಗುಣ, ಕೈಕೇಯಿ ರಜೋಗುಣ, ಮತ್ತು ಸುಮಿತ್ರೆ ತಮೋಗುಣ. ಅವರು ಕಾವ್ಯದಲ್ಲಿ ದಶೇಂದ್ರಿಯ ರೂಪದ ದಶರಥನು ಈ ಗುಣಗಳಿಗೆ ಸಂಬಂಧಿಸಿರುವಂತೆ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಆದ್ದರಿಂದ ಅವನು ಇಂದ್ರಿಯ ಗುಣ ಸ್ವರೂಪ. ಕೇವಲ ಇಂದ್ರಿಯಗಳು ಮತ್ತು ಗುಣಗಳಿಂದ ಮನುಷ್ಯನು ಸತ್ಯವನ್ನು ಸುಲಭವಾಗಿ ಗ್ರಹಿಸಲಾರನಾದ್ದರಿಂದ ಭಗವಂತನು ರಾಮಾಯಣದ ಮೂಲಕ ಬೋಧಿಸಿದನು, ಇಂದಿಗೂ ಬೋಧಿಸುತ್ತಿದ್ದಾನೆ. ಮನುಷ್ಯನ ಹೃದಯವೆಂಬ ರಂಗಸ್ಥಳದಲ್ಲಿ ಸೂಕ್ಷ್ಮರಾಮಾಯಣವನ್ನು ಪ್ರದರ್ಶಿಸುತ್ತಿದ್ದಾನೆ.

# ಅಧ್ಯಾಯ ೧೪

**ಭಕ್ತ :** ಸ್ವಾಮಿ, ಮಹಾಭಾರತ ಮತ್ತು ರಾಮಾಯಣಗಳ ಅಂತರಾರ್ಥವನ್ನು ಕುರಿತು ನೀವು ವಿವರಿಸಿದ್ದು ಬಹಳ ಸ್ವಾರಸ್ಯವಾಗಿದೆ. ಆಳವಾಗಿ ಪರಿಶೀಲಿಸಿ ನೋಡಿದರೆ ಅವುಗಳಲ್ಲಿ ಇದಲ್ಲದೆ ಬೇರೆ ಏನಿದೆ? ಈ ಬಗೆಯ ಮಹಾಭಾರತ–ರಾಮಾಯಣಗಳು ಪ್ರತಿಯೊಂದು ಹೃದಯದಲ್ಲೂ ಮನಸ್ಸು–ಚಿತ್ತ ಮತ್ತು ಬುದ್ಧಿ ಇವುಗಳ ಕ್ರಿಯೆ ಪ್ರತಿಕ್ರಿಯೆಗಳ ಮೂಲಕ ನಡೆಯುತ್ತಲೇ ಇವೆ. ಭಾಗವತವೂ ಹಾಗೆಯೇ ನಡೆಯುತ್ತಿದೆ ಎಂದು ತಾವು ಹೇಳಿದಿರಿ. ದಯವಿಟ್ಟು ಅದನ್ನೂ ವಿವರಿಸಿ ಹೇಳಿ ಸ್ವಾಮಿ. ಅದನ್ನೂ ಕೇಳಿ ರಾಮಾಯಣ–ಮಹಾಭಾರತ–ಭಾಗವತ ಈ ಮೂರರ ಸೂಕ್ಷ್ಮ ರೂಪಗಳನ್ನು ಅನುಸರಿಸಿ ನಡೆದುಕೊಳ್ಳಬಹುದು. ದಯವಿಟ್ಟು ಭಾಗವತವನ್ನು ಕುರಿತು ಹೇಳಿ.

**ಸ್ವಾಮಿ :** ಒಳ್ಳೆಯದು, ಭಾಗವತ ಇನ್ನೆರಡು ಕೃತಿಗಳ ಹಾಗಲ್ಲ. ಅದರಲ್ಲಿ ಗುಣಗಳಾಗಲಿ ರೂಪವಾಗಲಿ ಇಲ್ಲ! ಅದು ಗುಣಗಳು ಮತ್ತು ಇಂದ್ರಿಯಗಳಿಗೆ, ಮನಸ್ಸು ಮತ್ತು ಚಿತ್ತಗಳಿಗೆ ಅತೀತವಾದ ಆತ್ಮಕ್ಕೆ ಸಂಬಂಧಪಟ್ಟಿದೆ. ಅದು ಆತ್ಮದ ಶಕ್ತಿ ಸಾಮರ್ಥ್ಯಗಳನ್ನೂ ಅದರ ಲೀಲೆಗಳನ್ನೂ ಕುರಿತಾಗಿದೆ. ಭಾಗವತದಲ್ಲಿ ಯಾವುದು ಎಲ್ಲದರ ಸಾಕ್ಷಿಯೋ ಅದರ ಅವತಾರಗಳ ಕಥೆಗಳಿವೆ.

**ಭಕ್ತ:** ಆ ಸಾಕ್ಷಿಯು ತಳೆದ ರೂಪಗಳು ಯಾವುವು? ಅವನು ಏತಕ್ಕಾಗಿ ಆ ರೂಪಗಳನ್ನು ಪಡೆದನು?

**ಸ್ವಾಮಿ:** ನಿಜವಾಗಿ ಹೇಳಬೇಕಾದರೆ ಅವನೇ ಸಮಸ್ತರೂಪಗಳೂ ಆಗಿದ್ದಾನೆ, ಅವನು ಸರ್ವಸ್ವರೂಪಿ. ಅವನ ರೂಪಗಳ ಸಂಖ್ಯೆಗೆ ಮಿತಿಯೇ ಇಲ್ಲ ಆದರು ನಡೆದುದನ್ನು ಅನುಸರಿಸಿ ಹೇಳಬೇಕೆಂದರೆ, ಬ್ರಹ್ಮ, ವಿಷ್ಣು, ಮಹೇಶ್ವರ, ಮತ್ಸ್ಯ, ಕೂರ್ಮ, ವರಾಹ, ವಾಮನ, ನರಸಿಂಹ, ರಾಮ ಮತ್ತು ಕೃಷ್ಣ ಇವು ಮುಖ್ಯವಾದ ಅವತಾರಗಳು. ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳನ್ನು ನಿರ್ವಹಿಸುವ ಸಲುವಾಗಿ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಸಂರಕ್ಷಿಸುವ ಸಲುವಾಗಿ, ಆಯಾಕಾಲಕ್ಕೆ ಮತ್ತು ತನ್ನೆದುರಿಗಿಟ್ಟುಕೊಂಡಿರುವ ಉದ್ದೇಶಕ್ಕೆ ಅತ್ಯುತ್ತಮವೆಂದು ಅವನೇ ರೂಪಿಸಿ ಕೊಂಡ ರೂಪವನ್ನು ಧರಿಸುತ್ತಾನೆ. ಆ ಉದ್ದೇಶವು ಈಡೇರಿದ ಮೇಲೆ ಅವನು ಎಂದಿನಂತೆಯೇ ಸಾಕ್ಷಿ, ಆತ್ಮರೂಪವಾಗಿರುತ್ತಾನೆ.

**ಭಕ್ತ:** ರಾಮ ಮತ್ತು ಕೃಷ್ಣರೂ ದುರ್ಜನರನ್ನು ಶಿಕ್ಷಿಸಿ ಸಜ್ಜನರನ್ನು ರಕ್ಷಿಸಿದರು. ಅಲ್ಲವೆ ಸ್ವಾಮಿ? ಹಾಗಾದ ಮೇಲೆ ರಾಮಾಯಣ-ಮಹಾಭಾರತಗಳಲ್ಲಿ ಗುಣ ಸ್ವರೂಪವಿದೆ, ಭಾಗವತದಲ್ಲಿ ಗುಣಸ್ವರೂಪವಿಲ್ಲ ಎಂದು ಹೇಗೆ ಹೇಳುವಿರಿ?

**ಸ್ವಾಮಿ:** ನೋಡು, ಗುಣಗಳಿಗೆ ಆದಿಯಿದೆ ಮತ್ತು ಮತ್ತು ಅಂತ್ಯವಿದೆ ; ಆತ್ಮಕ್ಕೆ ಎರಡೂ ಇಲ್ಲ. ರಾಮ ಮತ್ತು ಕೃಷ್ಣರಿಗೂ ಮೂಲತಃ ಯಾವ ಗುಣಗಳೂ ಇಲ್ಲ. ಗುಣಗಳಿಗೆ ಅತೀತನಾಗಿರುವುದರಿಂದ ಹೇಗೆ ಗುಣಗಳನ್ನು ಗೆಲ್ಲಬಹುದು ಎಂಬುದನ್ನು ಅವರು ಕಾರ್ಯತಃ ತೋರಿಸಿಕೊಟ್ಟಿದ್ದಾರೆ. ರಾಮಾಯಣ ಮತ್ತು ಮಹಾಭಾರತ ಕಥೆಗಳಿಗೆ ಒಂದು ಮುಕ್ತಾಯವಿದೆಯಲ್ಲವೆ? ಆ ಅರ್ಥದಲ್ಲಿ ಭಾಗವತಕ್ಕೆ ಮುಕ್ತಾಯವಿಲ್ಲ. ಅದು ಆದಿಯಾಗಲಿ ಅಂತ್ಯವಾಗಲಿ ಇಲ್ಲದ ಭಗವಂತನನ್ನು ಕುರಿತು ಹೇಳುತ್ತದೆ. ಭಗವಂತನು ದೇಶ, ಕಾಲ, ಉದ್ದೇಶಗಳಿಗೆ ಸಂಬಂಧಿಸಿದಂತೆ ಧರಿಸಿದ ರೂಪಗಳನ್ನದು ಹೇಳುತ್ತದೆ. ಆ ಎರಡು ಮನುಷ್ಯನು ಈ ಮಿಥ್ಯಾನಶ್ವರ ಜಗತ್ತಿನಲ್ಲಿ ಅನುಸರಿಸಬೇಕಾದ ಸರಿಯಾದ ನೀತಿಗಳಾವುವು ಎಂದು ನಿರೂಪಿಸುತ್ತಾ ಜನರು ಸತ್ಯ-ಧರ್ಮ-ಶಾಂತಿ-ಪ್ರೇಮಗಳನ್ನು ಅನುಸರಿ ಸಲು ಒತ್ತಾಯಪಡಿಸುತ್ತವೆ. ತಿಳಿಯಿತೆ?

**ಭಕ್ತ:** ಹಾಗಾದರೆ ಭಾಗವತದಿಂದ ನಮಗೆ ವಾಸ್ತವಿಕ ಪ್ರಯೋಜನವೇನೂ ಇಲ್ಲವೆ?

**ಸ್ವಾಮಿ:** ಏನೆಂದೆ? ಭಾಗವತವೇ ಸಾಧಕರಿಗೆ ಅತ್ಯಧಿಕ ಪ್ರಯೋಜನಕಾರಿಯಾ ದದ್ದು. ಭಗವಂತನ ನಾಮದ ರಹಸ್ಯವನ್ನೂ ಅವನ ನಿಜವಾದ ಮಹಿಮೆಯನ್ನೂ

ಅವನ ನಿಜವಾದ ಕಾರ್ಯವಿಧಾನವನ್ನೂ ನಿರೂಪಿಸುವುದು ಅದೇಯೆ. ರಾಮಾಯಣ ಮಹಾಭಾರತಗಳು ಒಂದು ಮಟ್ಟದವರೆಗೆ ಸಾಮಾನ್ಯ ಮನುಷ್ಯನನ್ನು ನೈತಿಕ ಬೋಧನೆ ಮತ್ತು ನಿದರ್ಶನಗಳ ಮೂಲಕ ಉದ್ಧರಿಸುತ್ತವೆ. ಮನುಷ್ಯನು ಭಗವಂತನ ಕರುಣೆಯನ್ನು ಪಡೆಯುವುದು ಹೇಗೆ ಎಂಬುದನ್ನು ತೋರಿಸುತ್ತವೆ. ಆದರೆ ಆತ್ಮ ಮತ್ತು ಪರಮಾತ್ಮರ ಸ್ವರೂಪವನ್ನು ತಿಳಿಯಲು ಅಪೇಕ್ಷಿಸುವವರು ಬೇರೆ ಎಲ್ಲದಕ್ಕಿಂತ ಮಿಗಿಲಾಗಿ ಭಾಗವತವನ್ನು ಅಧ್ಯಯನ ಮಾಡಬೇಕು.

**ಭಕ್ತ:** ಸ್ವಾಮಿ, ಭಗವಂತ–ಭಾಗವತ ಮತ್ತು ಭಕ್ತ ಇವರ ನಡುವೆ ಇರುವ ಸಂಬಂಧ ಯಾವುದು?

**ಸ್ವಾಮಿ:** ಅದು ಮಹಾರಾಜ, ಯುವರಾಜ ಮತ್ತು ಕುಮಾರರಾಜರ ನಡುವೆ ಇರುವ ಸಂಬಂಧದ ಹಾಗೆ! ಭಗವಂತನೇ ಮಹಾರಾಜ; ಭಾಗವತವು ಶ್ರೇಣಿಯಲ್ಲಿ ಎರಡನೆಯದು. ಏಕೆಂದರೆ ಅದು ಭಗವಂತನಿಂದ ವ್ಯುತ್ಪನ್ನವಾಗಿ ಬಂದಿರುವಂಥದು, ಯುವರಾಜನ ಸ್ಥಾನಮಾನದ್ದು; ಕುಮಾರ ರಾಜನು ಈ ಇಬ್ಬರನ್ನು ಅವಲಂಬಿಸಿರುವವನು. ಭಕ್ತ ಈ ರೀತಿಯವನು, ಕುಮಾರರಾಜನ ಸ್ಥಾನ ಚಿಕ್ಕದೇನಲ್ಲ, ಮುಂದೆ ಅವನು ಮಹಾರಾಜನ ಸ್ಥಾನ ಪಡೆಯುತ್ತಾನೆ. ಮಿಕ್ಕ ಎಲ್ಲರೂ ಈ ಮೂರಕ್ಕಿಂತ ಕೆಳಗಿನವರು. ಭಕ್ತ ಅಥವಾ ಕುಮಾರರಾಜನ ಸ್ಥಾನಕ್ಕೆ ಏರಲಾಗದವರು ಮಹಾರಾಜನ ಆಸ್ಥಾನಕ್ಕೆ ಪ್ರವೇಶ ಪಡೆಯುವುದಿಲ್ಲ.

**ಭಕ್ತ:** ಹಾಗಾರೆ ಸ್ವಾಮಿ, ಯೋಗಿಗಳು, ಜ್ಞಾನಿಗಳು, ಸನ್ಯಾಸಿಗಳು, ಇವರು ಆ ಸ್ಥಾನಕ್ಕೆ ಅರ್ಹತೆ ಪಡೆದಿಲ್ಲವೆ?

**ಸ್ವಾಮಿ:** ಅದು ಯಾರೇ ಆಗಿರಲಿ, ಭಕ್ತಿಯೂ ಪರಮೋನ್ನತ ಸತ್ಯ ಪ್ರೇಮವೂ ಇಲ್ಲದೆ ಹೋದರೆ ಯೋಗಿ, ಜ್ಞಾನಿ ಅಥವಾ ಸನ್ಯಾಸಿ ಆಗುವುದು ಹೇಗೆ? ಅವರಲ್ಲಿಯೂ ಭಕ್ತಿಯು ಸಮಪ್ರಮಾಣದಲ್ಲಿರುತ್ತದೆ. ಲಡ್ಡು, ಜಿಲೇಬಿ, ಮೈಸೂರುಪಾಕು ಮೊದಲಾದ ಎಷ್ಟೋ ಸಿಹಿ ತಿಂಡಿಗಳಿವೆ; ಈ ಒಂದರಲ್ಲೂ ಸಿಹಿಯ ಸಮಾನಕಾರಣವಾಗಿ ಸಕ್ಕರೆ ಇರಬೇಕು, ಅಲ್ಲವೆ? ಇಲ್ಲದೆ ಹೋದರೆ ಅವುಗಳನ್ನು ತಯಾರಿಸುವುದಾದರೂ ಹೇಗೆ? ಅದೇ ರೀತಿ ಈ ಮೂರು ಮಾರ್ಗಗಳಲ್ಲಿ ಭಗವನ್ನಾಮದ ಸಿಹಿ ಅಥವಾ ಭಕ್ತಿ ಮುಖ್ಯವಾದ ಮೂಲವಸ್ತುವಾಗಿರುತ್ತದೆ. ಅದಿಲ್ಲದೆ ಈ ವಸ್ತುಗಳ ಹೆಸರೇ ಅರ್ಥರಹಿತ!

**ಭಕ್ತ:** ಇನ್ನೊಂದು ವಿಷಯ, ಸ್ವಾಮಿ! ಭಗವಂತನಲ್ಲಿ ಶ್ರದ್ಧೆಯಿಟ್ಟುಕೊಂಡು ಅದೇ ಶ್ರದ್ಧೆಯಿಂದ ಜಪ–ಧ್ಯಾನ–ಭಜನೆ–ಪೂಜಾದಿಗಳನ್ನು ಮಾಡುತ್ತಿದ್ದರೆ ಅವನು ಭಗ

ವಂತನ ಸನ್ನಿಧಿಯನ್ನು ತಲುಪಲು ಸಾಧ್ಯವೆ? ಅಷ್ಟು ಸಾಕೆ? ಅಂದರೆ, ಸತ್ಯದ ದಾರಿ ಧರ್ಮದ ದಾರಿ, ಪ್ರೇಮದ ದಾರಿ, ಸೇವೆಯ ದಾರಿಗಳಿಂದ ಆ ಹಂತವನ್ನು ಮುಟ್ಟುವುದು ಸಾಧ್ಯವಿಲ್ಲವೆ?

**ಸ್ವಾಮಿ:** ನೀನು ಹೇಳಿದ ಗುಣಗಳು ಪಾಪಭೀತಿ, ದೈವಪ್ರೀತಿಗಳಿಲ್ಲದೆ ಹೇಗೆ ಹುಟ್ಟುತ್ತವೆ? ಸಾಮಾನ್ಯರಾದವರಿಗೆ ಈ ದಾರಿಗಳು ಮತ್ತು ಅರ್ಹತೆಗಳು ಅಗತ್ಯವೆ? ಅವು ಭಗವಂತನ ಅಂತರಂಗ ಕೊಠಡಿಗೆ ತೆರೆಯುವ ಬಾಗಿಲುಗಳು. ಈ ದಾರಿಗಳಲ್ಲಿ ಹೋಗುವವರು ಸುಲಭವಾಗಿ ಭಗವಂತನ ಸನ್ನಿಧಿಯನ್ನು ತಲುಪುತ್ತಾರೆ. ಆದರೂ ಬಂಧುಗಳಿಗೂ ಮಿತ್ರರಿಗೂ ವ್ಯತ್ಯಾಸವಿದೆಯಲ್ಲವೆ? ಈ ಗುಣಗಳನ್ನು ಮಾತ್ರ ಬೆಳೆಸಿಕೊಳ್ಳುವವರು ಮಿತ್ರರಿದ್ದಹಾಗೆ; ಅವುಗಳನ್ನು ಆಚರಣೆಯಲ್ಲಿ ತಂದು, ನಾಮ ಮತ್ತು ರೂಪಗಳನ್ನು ಕುರಿತು ಭಕ್ತಿಯನ್ನಿಟ್ಟುಕೊಳ್ಳುವವರು ಬಂಧುಗಳಿದ್ದ ಹಾಗೆ. ಇದೇ ವ್ಯತ್ಯಾಸ. ನಾಮ–ರೂಪಗಳ ಮೇಲೆ ಧ್ಯಾನ ಮಾಡುವುದು ಗುಣಗಳನ್ನು ಬಲಪಡಿಸುತ್ತದೆ. ಆ ತಳಹದಿ ಇಲ್ಲದೆ ಹೋದರೆ ಗುಣಗಳು ಬಲವಾಗುವುದಿಲ್ಲ. ಸ್ಥಿರವಾಗುವುದಿಲ್ಲ, ಪರಿಶುದ್ಧವಾಗುವುದಿಲ್ಲ. ಭಗವಂತನ ನಾಮ, ಭಗವಂತನ ರೂಪಗಳು ಮಾನವನ ಗುಣಗಳಲ್ಲಿರುವ ಕಶ್ಮಲವನ್ನು ತೆಗೆದುಹಾಕುತ್ತವೆ.

**ಭಕ್ತ:** ಆದರೆ ಭಕ್ತನೂ ಸದ್ಗುಣಗಳಿರುವ ವ್ಯಕ್ತಿಯೂ ಒಂದೇ ಸ್ಥಳವನ್ನು ಸೇರುತ್ತಾರೆ ಅಲ್ಲವೆ ಸ್ವಾಮಿ?

**ಸ್ವಾಮಿ:** ಖಂಡಿತವಾಗಿಯೂ ಸದ್ಗುಣಶಾಲಿಯು ಆ ಸ್ಥಳಕ್ಕೆ ಹೋಗುವ ಅರ್ಹತೆಗಳಿರುವ ಅಭ್ಯರ್ಥಿಯಾಗುತ್ತಾನೆ; ಭಕ್ತಿಯೂ ಇರುವ ಗುಣವಂತನು ಆ ಸ್ಥಳದ ಹಕ್ಕನ್ನೇ ಪಡೆದಿರುತ್ತಾನೆ, ಅವನನ್ನು ಯಾರೂ ಅಲಕ್ಷಿಸುವ ಹಾಗಿಲ್ಲ.

**ಭಕ್ತ:** ಸ್ವಾಮಿ, ಅನೇಕ ಜನರು, "ಮಾನವ ಸೇವೆಯೇ ಮಾಧವ ಸೇವೆ" ಎಂಬ ಘೋಷಣೆಯಂತೆ ಹಲವಾರು ಸತ್ಕಾರ್ಯಗಳಲ್ಲಿ ಸಕ್ರಿಯವಾಗಿ ನಿರತರಾಗಿರುವವರಿದ್ದಾರೆ. ಅವರ ಈ ಕಾರ್ಯಗಳು ಅವರಿಗೆ ಆ ಸ್ಥಳಕ್ಕೆ ಅರ್ಹತೆ ನೀಡುತ್ತವೆಯೆ?

**ಸ್ವಾಮಿ:** ಹಾಗೇಕೆ ಕೇಳುವೆ? ಖಂಡಿತವಾಗಿಯೂ; ಆ ಮನೋಧರ್ಮದಿಂದ ಸೇವಾಕಾರ್ಯ ಮಾಡುವವರು. ಆದರೆ ಆ ಮನೋಭಾವವನ್ನು ನಿಜವಾಗಿ ಪಡೆಯುವುದು ಬಹಳ ಕಷ್ಟ. ಇತರರನ್ನು ಮನುಷ್ಯರೆಂದೇ ಭಾವಿಸಿಕೊಂಡು, ಸುಮ್ಮನೆ ಬಾಯಲ್ಲಿ ಮಾನವಸೇವೆಯೇ ಮಾಧವ ಸೇವೆ" ಎಂದು ಹೇಳುತ್ತಿರುವುದು ಪ್ರಾಮಾಣಿಕತೆಯಲ್ಲ. ಆಗ ಮನಸ್ಸು ಎರಡು ನಾಲೆಗಳಲ್ಲಿ ಹರಿಯುತ್ತದೆ. ಮಾಧವನ ಮಹಿಮೆಯನ್ನು ಪೂರ್ತಿಯಾಗಿ ಗ್ರಹಿಸಿ; ಮಾಧವನು ಪ್ರತಿಯೊಬ್ಬ

ಮಾನವನಲ್ಲೂ ಇದ್ದಾನೆ ಎಂಬುದನ್ನು ಅರ್ಥಮಾಡಿಕೋ; ಮಾನವನಿಗೆ ಸೇವೆ ಸಲ್ಲಿಸುವುದು ಮಾಧವನನ್ನೇ ಸೇವಿಸಿದ ಹಾಗೆ ಎಂದು ನಂಬು. ಆಗ ನಿನ್ನ ಕಾರ್ಯಗಳು ಆ ಸ್ಥಳಕ್ಕೆ ನಿನಗೆ ಅರ್ಹತೆಯನ್ನು ನೀಡುತ್ತವೆ. ಅದಕ್ಕಿಂತ ದೊಡ್ಡ ಅರ್ಹತೆ ಬೇರೇನು ಬೇಕು. ಇದಕ್ಕೆ ಬದಲು ಹೆಸರು, ಕೀರ್ತಿಗಳಿಗೋಸ್ಕರವಾಗಿ "ಸೇವೆ" ಮಾಡುತ್ತಿದ್ದರೆ, ಮಾಡಿದ ಕೆಲಸಕ್ಕೆ ಪ್ರತಿಫಲದ ಹಂಬಲ ಮನಸ್ಸಿನಲ್ಲಿದ್ದರೆ ಆಗ ಅಂಥವನು ಹೇಳುವ "ಮಾನವಸೇವೆಯೇ ಮಾಧವ ಸೇವೆ" ಎಂಬ ಘೋಷಣೆಗೆ ಅರ್ಥವೇ ಇರುವುದಿಲ್ಲ, ಅವನಿಗೆ ನಿರೀಕ್ಷಿತ ಫಲ ದೊರೆಯುವುದೂ ಇಲ್ಲ.

**ಭಕ್ತ:** ಬಹಳ ಸ್ವಾರಸ್ಯವಾಗಿದೆ ಸ್ವಾಮಿ! ಭಾಗವತವನ್ನು ಕುರತು ಮಾತನಾಡಿದುದು ಅನೇಕ ಪವಿತ್ರ ವಿಚಾರಗಳನ್ನೂ ನೀತಿಗಳನ್ನೂ ಒದಗಿಸಿತು. ಇದನ್ನು ಕುರಿತು ಮನನ ಮಾಡಿದರೆ ಎಷ್ಟು ಅಮೂಲ್ಯವಾದ ಸತ್ಯಗಳು ಹೊರಪಡುತ್ತವೆ! ನಾನು ಇಂದು ನಿಜವಾಗಿ ಧನ್ಯನಾದೆ ಸ್ವಾಮಿ.

**ಸ್ವಾಮಿ:** ನಿನಗೆ ಇದೆಲ್ಲಾ ಅರ್ಥವಾಯಿತೆ? ಭಾಗವತವು ಆದಿರಹಿತ ಅಂತ್ಯರಹಿತ ಆತ್ಮನ ಕಥೆ. ಅದು ಸ್ಥೂಲ ಮತ್ತು ಸೂಕ್ಷ್ಮ ಎರಡು ರೂಪಗಳಲ್ಲೂ ಇದೆ. ಅದು ಸೂಕ್ಷ್ಮಕ್ಕಿಂತ ಸೂಕ್ಷ್ಮತರ; ಸ್ಥೂಲಕ್ಕಿಂತ ಸ್ಥೂಲತರ. ಅದಕ್ಕೆ ಮಿತಿಯಿಲ್ಲ, ಅಳತೆಯಿಲ್ಲ. ರಾಮಾಯಣ ಮತ್ತು ಮಹಾಭಾರತಗಳು ಇತಿಹಾಸ ಕಾವ್ಯಗಳು; ಭಾಗವತವು ಬೇರೆ, ಅದು ಆತ್ಮನ ವರ್ಣನೆ. ಅದು ಭಕ್ತಿಯ ಮಾರ್ಗವನ್ನು ಬೋಧಿಸುತ್ತದೆ. ಅದು ಎಂದೂ ಕೊನೆಗೊಳ್ಳುವುದಿಲ್ಲ, ಅದಕ್ಕೆ ಅಂತ್ಯವೆಂಬುದಿಲ್ಲ. ಇದೇ ಭಾಗವತದ ಮಹತ್ವ.

## ಅಧ್ಯಾಯ ೧೫

**ಭಕ್ತ:** ನನ್ನ ತಲೆಯಿಂದ ದೊಡ್ಡದೊಂದು ಭಾರವನ್ನು ಇಳಿಸಬೇಕು, ಸ್ವಾಮಿ. ಅದನ್ನು ಮರೆಯಬೇಕೆಂದು ಎಷ್ಟೂ ಪ್ರಯತ್ನಿಸಿದರೂ ಯಾವ ದಿಕ್ಕಿಗೆ ತಿರುಗಿದರೂ ಅದು ನನಗೆ ಕಷ್ಟ ಕೊಡುತ್ತಿದೆ; ಅದೊಂದೇ ನನ್ನ ಕಿವಿಗೆ ಕೇಳಿಸುತ್ತಿದೆ! ಹೀಗಿರುವಾಗ ಅದನ್ನು ಮನಸ್ಸಿನಿಂದ ಕಿತ್ತೊಗೆಯುವುದು ಹೇಗೆ? ನನಗೆ ಸಾಧ್ಯವಿಲ್ಲವೆಂದು ಕಂಡದ್ದರಿಂದ ನಿಮ್ಮಲ್ಲಿ ಮೊರೆಯಿಡುತ್ತಿದ್ದೇನೆ. ದಯವಿಟ್ಟು ನನ್ನ ಉದ್ದೇಶವನ್ನು ಅನ್ಯಥಾ ಭಾವಿಸಬಾರದು. ನೇರವಾದ ಉತ್ತರವನ್ನು ಕೊಡಬೇಕು. ಆಗ ಮಾತ್ರವೇ

ನನ್ನಂತಹ ಎಲ್ಲಾ ಜನರ ನೆತ್ತಿಯ ಮೇಲಿನ ಭಾರವು ಇಳಿಯುತ್ತದೆ, ಸಾಧನೆಗೆ ಅವರ ಉತ್ಸಾಹ ಹೆಚ್ಚುತ್ತದೆ. ಇಲ್ಲದೆ ಹೋದರೆ ಭಗವಂತನನ್ನು ಕುರಿತು ಇಟ್ಟುಕೊಂಡಿರುವ ಅಲ್ಪಸ್ವಲ್ಪ ಶ್ರದ್ಧೆಯೂ ಕಳೆದುಹೋಗಿ ನಾವು ನಾಸ್ತಿಕರಾಗಿ ಬಿಡುತ್ತೇವೋ ಎಂಬ ಹೆದರಿಕೆ. ನೀವು ಕೊಡುವ ಉತ್ತರ ನಮಗೆ ತುಂಬಾ ಸಹಾಯ ಮಾಡುತ್ತದೆ, ನನಗೆ ಮಾತ್ರವಲ್ಲ, ಎಲ್ಲೆಲ್ಲೂ ಇರುವ ಭಕ್ತರಿಗೆಲ್ಲರಿಗೂ. ಆದ್ದರಿಂದ ದಯವಿಟ್ಟು ನನ್ನ ಸಂದೇಹಗಳನ್ನು ನಿವಾರಿಸಿ ಸ್ಪಷ್ಟವಾದ ಮಾತುಗಳಲ್ಲಿ ನಿಜ ಸತ್ಯವನ್ನು ತಿಳಿಸಿಕೊಡಿ.

**ಸ್ವಾಮಿ:** ಏನದು? ಹೇಳು. ಅಷ್ಟೊಂದು ತಲೆನೋವಿಗೆ ಕಾರಣವಾಗಿರುವುದೇನು?

**ಭಕ್ತ:** ಮನುಷ್ಯನಿಗೆ ನಾಲ್ಕು ಆಶ್ರಮಗಳಿವೆ; ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂದು ಹೇಳಿದ್ದೀರಿ. ಕೊನೆಯ ಹಂತವನ್ನು ಮುಟ್ಟಿದವರು ನಿಜವಾಗಿ ಧನ್ಯರು, ಏಕೆಂದರೆ ಅವರು ಸಾಕ್ಷಾತ್ಕಾರ ಪಡೆಯುತ್ತಾರೆ ಎಂದು ಹೇಳಿದ್ದೀರಿ. ಸನ್ಯಾಸ ಎನ್ನುವುದೇನು?

**ಸ್ವಾಮಿ:** ಓಹೊ ಇದೋ ನಿನ್ನ ಚಿಂತೆಗೆ ಕಾರಣವಾಗಿರುವ ವಿಷಯ! ಅಯ್ಯ, ಕಾವಿಬಟ್ಟೆ ಧರಿಸುವುದು, ತಲೆಯನ್ನು ಬೋಳಿಸಿಕೊಳ್ಳುವುದು ಇವಿಷ್ಟರಿಂದ ಒಬ್ಬ ವ್ಯಕ್ತಿ ಸನ್ಯಾಸಿಯಾಗುವುದಿಲ್ಲ. ಅವನು ಎಲ್ಲಾ ಕಾಮನೆಗಳನ್ನು ತೊರೆದಿರುವವನು. ಅವನ ಬಯಕೆ, ಅವನ ಯೋಚನೆ, ಅವನ ಕೆಲಸ ಸಮಸ್ತವೂ ಏಕೈಕ ಭಗವತ್ ಶಕ್ತಿಯಲ್ಲಿ ಪೂರ್ಣವಾಗಿ ವಿಲೀನವಾಗಿರಬೇಕು, ಭಗವಂತನನ್ನು ಪಡೆಯುವ ಸಾಧನೆಯಲ್ಲಿ ಸದಾ ಮಗ್ನನಾಗಿರಬೇಕು. ಹಾಗೆ ಮಗ್ನನಾಗಿರುವವನು ಸನ್ಯಾಸಿ. ಅದಕ್ಕೆ ಬದಲು ಬಗೆ ಬಗೆಯ ಕಾಮನೆಗಳನ್ನು ಉಳಿಸಿಕೊಂಡು, ಅವುಗಳ ಪೂರೈಕೆಗಾಗಿ ಎಲ್ಲಾ ಬಗೆಯ ಕಾರ್ಯಗಳಲ್ಲಿ ತೊಡಗಿರುವವರು ಸನ್ಯಾಸಿಗಳಲ್ಲ, ಗಾದೆ ಹೇಳುವ ಹಾಗೆ ಸನ್ಯಾಸಿಗಳು, ಅಂದರೆ ನಕಲಿಗಳು. ಅರ್ಥವಾಯಿತೆ!

**ಭಕ್ತ:** ಆದರೆ ಸ್ವಾಮಿ, ಈಗ ಸನ್ಯಾಸಿಗಳು ತುಂಬಾ ಅಗ್ಗವಾಗಿಬಿಟ್ಟಿದ್ದಾರೆ. ಒಂದು ರೂಪಾಯಿಗೆ, ಒಂದು ಪೈಸೆಗೆ, ಕೊನೆಗೊಂದು ಸಿಗರೇಟಿಗೆ ಬಾಯಿ ಬಿಡುವ ಸನ್ಯಾಸಿ ಗಳನ್ನು ನೋಡಬಹುದು! ಇವರಲ್ಲಿ ಯಾರನ್ನು ಹಿಡಿಯುವುದು, ಯಾರನ್ನು ಅಂಗೀಕರಿಸುವುದು?

**ಸ್ವಾಮಿ:** ನಿನಗೆ ಇದೆಲ್ಲ ಯಾಕೆ ಬೇಕು? ನಿನಗೆ ನಿನ್ನ ಸಾಧನೆಯ ಪ್ರಗತಿ ಮುಖ್ಯ. ನಿನ್ನ ಸಾಧನೆಗೆ ಸರಿಯಾದ ದಾರಿ ತೋರಿಸುವಂತಹ ವ್ಯಕ್ತಿಗಾಗಿ ನೀನು ಹಂಬಲಿಸಬೇಕು. ಅಥವಾ ಅದು ಸಾಧ್ಯವಾಗದೆ ಹೋದರೆ ನಿನ್ನ ಆತ್ಮವನ್ನೇ

ಗುರುವಾಗಿ ಒಪ್ಪಿಕೋ. ನಿನಗೆ ಅಗತ್ಯವಾದುದನ್ನು ಕೊಡಲು ಅದಷ್ಟು, ಸಾಕು. ನಿನ್ನನ್ನೇ ನೀನು ಅವಲಂಬಿಸು, ನಿನ್ನ ಸಂದೇಹಗಳು ನಾಶವಾಗುತ್ತವೆ.

**ಭಕ್ತ:** ಹಾಗಾದರೆ 'ಗುರುವಿಲ್ಲದ ವಿದ್ಯೆ ದೃಷ್ಟಿಯಿಲ್ಲದ ಕಣ್ಣು' ಎಂಬ ಹೇಳಿಕೆ ಹೇಗೆ ನಿಲ್ಲುತ್ತದೆ ಸ್ವಾಮಿ? ಯಾರಾದರೊಬ್ಬ ಮಹಾಪುರುಷನನ್ನು ಅವಲಂಬಿಸುವುದು ಅಗತ್ಯವಲ್ಲವೆ, ನಮಗೆ ದಾರಿತೋರಿಸುವುದಕ್ಕಾಗಿ?

**ಸ್ವಾಮಿ:** ಮಹಾಪುರುಷರು ಇನ್ನೂ ಈ ಭೂಮಿಯಿಂದ ಮಾಯವಾಗಿಬಿಟ್ಟಿಲ್ಲ ಮಗು! ಎಲ್ಲರೂ ನೀನು ಹೇಳುವಂಥವರೇ ಆಗಿರುತ್ತಾರೆ ಎಂದು ಭಾವಿಸಬೇಡ. ಇಂದಿಗೂ ಮಹಾಪುರುಷರಿದ್ದಾರೆ. ಇಲ್ಲದೆ ಹೋದರೆ ಜಗತ್ತಿನಲ್ಲಿ ಬೆಳಕೇ ಇರುತ್ತಿರಲಿಲ್ಲ.

**ಭಕ್ತ:** ಗೃಹಸ್ಥರಲ್ಲಿ, ವಾನಪ್ರಸ್ಥರಲ್ಲಿ ಅಥವಾ ಬ್ರಹ್ಮಚಾರಿಗಳಲ್ಲಿ ಶ್ರೇಷ್ಠವ್ಯಕ್ತಿಗಳಿರಬಹುದು, ಸ್ವಾಮಿ! ಅಂತವರೊಂದಿಗೆ ನನಗೆ ಹೆಚ್ಚು ಅನುಭವವಿಲ್ಲ; ಆದರೂ ಅವರಲ್ಲಿ ದೊಡ್ಡ ಹೆಸರು, ಪ್ರಸಿದ್ಧಿ ಇರುವ ಜನರನ್ನು ನಾನು ನೋಡಿದ್ದೇನೆ. ಆದರೆ ಇಷ್ಟು ಹೇಳಬಲ್ಲೆ; ಸನ್ಯಾಸಿಗಳ ಪೈಕಿ ನಿಜವಾಗಿ ಪರಿಶುದ್ಧರಾಗಿರುವವರನ್ನು ಕಂಡು ಹಿಡಿಯುವುದು ತುಂಬಾ ಕಷ್ಟ. ಯಾವುದೊಂದೂ ಆಸೆಯಿಲ್ಲದ ಒಬ್ಬ ಸನ್ಯಾಸಿಯನ್ನು ನೋಡುವುದು ಅಸಾಧ್ಯವಾಗಿದೆ. ಅವರಿಗೆ ಅಷ್ಟೊಂದು ಆಸೆಗಳಿದ್ದ ಮೇಲೆ ಗೃಹಸ್ಥರಿಗೆ ಇರುವುದರಲ್ಲಿ ಏನು ತಪ್ಪು? ಎಲ್ಲಿಗೆ ಹೋದರೂ ಒಂದೇ ಬೇಡಿಕೆ "ಹಣ ಹಣ ಹಣ!"

**ಸ್ವಾಮಿ:** ನಿಜವಾಗಿ ಹೇಳಬೇಕೆಂದರೆ, ಸನ್ಯಾಸಿಗಳಿಗೆ ನೀನು ಹೇಳಿದಂತೆ ಯಾವ ಆಸೆಯು ಇರಬಾರದು. ಕಾಮ ಮತ್ತು ಲೋಭಗಳು ಅವರ ಭಯಂಕರ ಶತ್ರುಗಳು, ಅವುಗಳ ಸಂಪರ್ಕ ಸನ್ಯಾಸಿಗೆ ಇರಲೇಕೂಡದು. ದೊರೆತಷ್ಟು ಆಹಾರವನ್ನು ದೊರೆತಾಗ ಸ್ವೀಕರಿಸಬೇಕು, ಅದಕ್ಕಿಂತ ಹೆಚ್ಚಾಗಿ ಬಯಸಬಾರದು. ಅದು ನಿಜ, ಅದೇ ನಿಯಮ. ಹಣಕ್ಕೂ ಅವರಿಗೂ ಏನೇನೂ ಸಂಬಂಧವಿರಬಾರದು.

**ಭಕ್ತ:** ಸರಿ ಸ್ವಾಮಿ! ನನ್ನನ್ನು ಕ್ಷಮಿಸಬೇಕು. ಸನ್ಯಾಸಿಗಳಿಗೆ ಸದಾಕಾಲವೂ ಹಣದ ಅಗತ್ಯವಿರುತ್ತದೆಯಲ್ಲ! ಯಾವ ಗೃಹಸ್ಥನೂ ಹಣಕ್ಕಾಗಿ ಅವರಷ್ಟು ಹಂಬಲಿಸುವುದಿಲ್ಲ. ಶಿಷ್ಯರು ಬಹು ಕಷ್ಟಪಟ್ಟು ದುಡಿದ ಹಣವನ್ನು ಅವರು ಕಿತ್ತುಕೊಂಡು ಅವರನ್ನು ಶೋಷಿಸುತ್ತಾರೆ. ಕೊಡದವನನ್ನು ತಿರಸ್ಕರಿಸುತ್ತಾರೆ. ಇದೆಲ್ಲಾ ಸರಿಯೆ ಸ್ವಾಮಿ? ಇದು ನ್ಯಾಯವೆ? ಇವರೆಲ್ಲ ಗುರುಗಳೆ?

**ಸ್ವಾಮಿ :** ವಿವೇಕವುಳ್ಳ ಯಾವ ವ್ಯಕ್ತಿಯೂ ಇವೆಲ್ಲ ನ್ಯಾಯ ಎಂದು ಹೇಳುವುದಿಲ್ಲ, ನಾನು ಹೇಗೆ ಹೇಳುತ್ತೇನೆ? ಅಂತಹ ಸನ್ಯಾಸಿಗಳನ್ನು ನೀನೇ ಒಂದು ಸಾರಿ ಕೇಳಬಹುದಲ್ಲ, "ಸ್ವಾಮಿ, ನಿಮಗೆ ಹಣವಾದರೂ ಯಾಕೆ ಬೇಕು? ಹಣದಿಂದ ಬರುವ ಕೀರ್ತಿಗಾಗಿ ಹಂಬಲಿಸುವುದು ತಪ್ಪಲ್ಲವೆ?" ಎಂದು!

**ಭಕ್ತ:** ಕೇಳಿದ್ದೇನೆ, ಸ್ವಾಮಿ.

**ಸ್ವಾಮಿ :** ಅವರು ಏನು ಹೇಳಿದರು?

**ಭಕ್ತ:** ತಮ್ಮ ವೆಚ್ಚಗಳಿಗಾಗಿ ಹಣ ಬೇಕು ಎಂದು ಕೆಲವರು ಹೇಳಿದರು; ತಮ್ಮ ಆಶ್ರಮವನ್ನು ಇನ್ನಷ್ಟು ಬೆಳೆಸಬೇಕಾಗಿದೆ ಎಂದು ಕೆಲವರು ಹೇಳಿದರು. ಇಂತಹ ಅನೇಕ ಕಾರಣಗಳನ್ನು ನೀಡಿದರು. ವಾದಮಾಡಲು ಬಲ್ಲವರಿಗೆ ಕಾರಣಗಳನ್ನು ಕೊಡುವುದು ಕಷ್ಟವಲ್ಲ. ನಂಬಿಕೆಯ ಪ್ರಶ್ನೆ ಬಂದಾಗ ನಾವು ಆಲಿಸಿ, ವಿವೇಚನೆ ಬಳಸಬೇಕಾಗಿದೆ. ಅಲ್ಲವೆ ಸ್ವಾಮಿ?

**ಸ್ವಾಮಿ :** ಗುರುವು ತನ್ನ ಬಳಿಗೆ ಮಾರ್ಗದರ್ಶನವನ್ನು ಅರಸಿಬರುವ ಶಿಷ್ಯರ ಪ್ರಗತಿಯ ಕಡೆಗೆ ಗಮನಕೊಡಬೇಕೇ ಹೊರತು ಆಶ್ರಮದ ಅಭಿವೃದ್ಧಿಗಲ್ಲ; ಆಶ್ರಮಕ್ಕಿಂತ ಆಶ್ರಿತ ಹೆಚ್ಚು ಮುಖ್ಯ. ಆಶ್ರಮವನ್ನು ಕುರಿತು ಉದ್ದೇಶ, ಕಳವಳ ಇದೇ ಭಾರೀ ಶ್ರಮ ಅಥವಾ ಹೊರೆ ಆಗಿಬಿಡುತ್ತದೆ. ಈ ಕಾರಣದಿಂದಾಗಿ ಜನರು ತಮ್ಮಲ್ಲಿರುವ ಅಲ್ಪಸ್ವಲ್ಪ ಶ್ರದ್ಧೆ ಭಕ್ತಿಗಳನ್ನೂ ಕಳೆದುಕೊಂಡು ನಾಸ್ತಿಕರಾಗಿಬಿಡುತ್ತಾರೆ. ಇಂತಹ ಗುರುಗಳು ಸಕಲ ಬಂಧನಗಳನ್ನು ಕಳಚಿಕೊಳ್ಳುವ ಬದಲು ಮತ್ತಷ್ಟು ಬಿಗಿಯಾಗಿ ಕಟ್ಟಿಕೊಳ್ಳುತ್ತಾರೆ. ಅವರು ಹೇರು ಹೊರುವ ಪ್ರಾಣಿಗಳಾಗುತ್ತಾರೆ. ನೀನು ನನ್ನ ಮಾತು ಕೇಳು. ಶಿಷ್ಯನ ಮೇಲೆ ಹಣ ಕೇಳಲು ಒತ್ತಡ ಹಾಕುವ ಗುರುವಿನ ಕಡೆಗೆ ನಿನ್ನ ಕಣ್ಣು ಹಾಯಿಸಬೇಡ. ಅಂಥವರಿಂದ ಸಾಧ್ಯವಾದಷ್ಟು ದೂರವಾಗಿರು. ಅವರೊಂದಿಗೆ ಸಂಪರ್ಕವಿರಿಸಿಕೊಂಡು ಶ್ರದ್ಧೆಯನ್ನು ಕಳೆದುಕೊಳ್ಳಬೇಡ. ಅದನ್ನು ಉಳಿಸಿಕೊ ನೀನೇ ಬೆಳೆಸಿಕೊ.

**ಭಕ್ತ:** ನಾವು ಅಂತಹ ಜನರ ಬಳಿಗೆ ಬದುಕಿನ ಉನ್ನತ ತತ್ತ್ವಗಳನ್ನು ಕಲಿಯಲು, ಭಗವಂತನನ್ನು ಪಡೆಯುವ ದಾರಿಯನ್ನು ತಿಳಿದುಕೊಳ್ಳಲು ಹೋಗುತ್ತೇವೆ; ಅವರಿಗಾಗಿ ಕಾತರದಿಂದ ಹುಡುಕುತ್ತೇವೆ.

ಏಕೆಂದರೆ ಯಾವ ಹುತ್ತದಲ್ಲಿ ಯಾವ ಹಾವು ಇರುತ್ತದೆಯೋ ನಮಗೆ ಗೊತ್ತಿರುವುದಿಲ್ಲ; ಆದರೆ ಈ ನಾಗರಹಾವಿನಂತಹ ಸನ್ಯಾಸಿಗಳನ್ನು ಕಂಡು ನಮಗೆ ಆಘಾತವೇ

ಆಗುತ್ತದೆ! ಅವರು ಆಶ್ರಮಕ್ಕಾಗಿ ತೋರಿಸುವ ಆಸೆಯು ಅಷ್ಟೊ ತಪ್ಪು ಎಂದಲ್ಲವೆ ಸ್ವಾಮಿ? ಅವರು ಜನರಿಗೆ ಸೇವೆಮಾಡಬೇಕಾದರೆ ಸಾಮಾನ್ಯರೇ ಆಗಿದ್ದುಕೊಂಡು ಹಣವನ್ನು ಸಂಗ್ರಹಿಸುತ್ತಾ ವೆಚ್ಚ ಮಾಡುತ್ತಾ ಇರಬಹುದಲ್ಲಾ, ಅಲ್ಲವೆ? ಸನ್ಯಾಸಿಗಳೆಂದು ಕರೆದುಕೊಂಡು, ಆ ವೇಷ ಧರಿಸಿಕೊಂಡು, ಉಪದೇಶ ಪಡೆದು, ಸನ್ಯಾಸ ಸ್ವೀಕಾರ ಸಮಯದಲ್ಲಿ ಅಷ್ಟೊಂದು ವ್ರತಗಳನ್ನು ಸ್ವೀಕರಿಸಿ, ಸಮಸ್ತ ಆಸೆಗಳನ್ನೂ ತೊರೆದಿರುವುದಾಗಿ ಘೋಷಿಸಿ... ಆಮೇಲೆ ಈ ರೀತಿ ಸಂಚಯದ ದಾರಿ ಹಿಡಿದರೆ ಅದು ಸನ್ಯಾಸದ ಪವಿತ್ರತೆಯನ್ನೇ ನಾಶ ಮಾಡಿದ ಹಾಗಲ್ಲವೆ?

**ಸ್ವಾಮಿ:** ಅದರಿಂದ ಆ ವ್ಯಕ್ತಿ ಹಾಳಾಗಬಹುದು ಅಷ್ಟೆ ಮಗು. ಸನ್ಯಾಸದ ಪಾವಿತ್ರ್ಯ ಎಂದಿಗೂ ನಾಶವಾಗುವುದಿಲ್ಲ! ಆ ಭಾವನೆಯನ್ನು ಇಟ್ಟುಕೊಳ್ಳಲೇ ಬೇಡ. ನಿಜ, ನೀನು ಹೇಳಿದಂತಹ ಜನ ಈಗ ಜಗತ್ತಿನಲ್ಲಿದ್ದಾರೆ. ಆದರೆ ಅವರನ್ನು ಸನ್ಯಾಸಿಗಳ ಅಥವಾ ಸ್ವಾಮಿಗಳ ಪಟ್ಟಿಗೆ ಸೇರಿಸಬೇಡ. ಅವರಿಗೆ ಈ ವರ್ಗಗಳೊಂದಿಗೆ ಯಾವ ಸಂಬಂಧವೂ ಇಲ್ಲ. ಆ ಪದವಿಗಳನ್ನು ಉಳಿಸಿಕೊಂಡು ಅವರು ತಮ್ಮ ಶಿಷ್ಯರಿಗೆ ಹಾನಿಯನ್ನು ಉಂಟುಮಾಡುತ್ತಿದ್ದಾರೆ. ಅವರನ್ನು ಕುರಿತು ಒಂದೇ ಒಂದು ಯೋಚನೆಗೂ ಎಡೆಗೊಡಬೇಡ.

**ಭಕ್ತ:** ಆಗಲಿ, ಸ್ವಾಮಿ, ಆದರೆ ಕೆಲವರು ಆಶ್ರಮಗಳನ್ನು ಸ್ಥಾಪಿಸಿಕೊಂಡು ಗುರುಗಳಾಗಿ ನೆಲೆಗೊಂಡಿದ್ದಾರೆ. ಅವರಿಗೂ ಹಣದ ಮೋಹ ಇದೆಲ್ಲ ತಪ್ಪಲ್ಲವೆ ಸ್ವಾಮಿ?

**ಸ್ವಾಮಿ:** ಇದರಲ್ಲಿ ಕೇಳುವುದೇನಿದೆ? ಇವರಿಗೇನು ತಲೆಯಮೇಲೆ ಕೋಡುಗಳಿವೆಯೆ? ನಿಜವಾಗಿ ಹೇಳಬೇಕೆಂದರೆ ಇಂತಹ ಜನರ ವಿಷಯದಲ್ಲಿ ಇನ್ನೂ ಹೆಚ್ಚು ಜಾಗರೂಕತೆಯಿಂದ ಇರಬೇಕು. ಏಕೆಂದರೆ ಅವರು ಅನೇಕ ಜನ ಶಿಷ್ಯರಿಗೆ ತರಬೇತಿ ಕೊಡುತ್ತಾರೆ. ಶಿಷ್ಯರು ಸರಿಯಾದ ಮನೋಧರ್ಮ ಬೆಳೆಸಿಕೊಂಡು ಸಂಪೂರ್ಣ ಭಗವಚ್ಚಿಂತನೆಯಲ್ಲಿ ಮುಳುಗಿರುವಂತೆ ನೋಡಿಕೊಳ್ಳಲು ಗುರುವು ವಿಶೇಷ ಪ್ರಯತ್ನ ಮಾಡಬೇಕು. ಇಲ್ಲವಾದರೆ ಬಹಳ ಹಾನಿಯುಂಟಾಗುತ್ತದೆ. ಗುರುವು ಶಿಷ್ಯರ ಆಧ್ಯಾತ್ಮಿಕ ಪ್ರಗತಿಗೂ ಆನಂದಕ್ಕೂ ಗಮನ ನೀಡಿದರೆ ಶಿಷ್ಯರು ತಾವಾಗಿ ಆಶ್ರಮದ ಏಳಿಗೆಗಾಗೂ ಶ್ರಮಿಸುತ್ತಾರೆ. ಯಾರೂ ಅವರ ಮೇಲೆ ಒತ್ತಡ ಹಾಕಬೇಕಾಗಿಲ್ಲ. ಅದಕ್ಕೆ ಬದಲು ಶಿಷ್ಯರ ಪ್ರಗತಿಯನ್ನು ಮರೆತು, ಈ ಶಿಷ್ಯನಿಂದ ಇಷ್ಟು ಹಣ ದೊರಕಬೇಕು ಎಂದು ಹಂಬಲಿಸುತ್ತಿದ್ದರೆ, ಅವನು ಆಶ್ರಮವನ್ನೇ ಕಳೆದುಕೊಳ್ಳುತ್ತಾನೆ! ಶಿಷ್ಯನು ಭಕ್ತಿಯನ್ನೂ ಗುರುವು ತನ್ನ ಸಂಸ್ಥೆಯನ್ನು ಕಳೆದು ಕೊಳ್ಳುತ್ತಾರೆ!

**ಭಕ್ತ:** ಇದೆಲ್ಲ ಇರಲಿ, ಯಾರಾದರೂ ಇದು ತಪ್ಪು ಎಂದು ತೋರಿಸಿಕೊಟ್ಟರೆ, ಅವರಿಗೆ ಬಹಳ ಕೋಪ ಬರುತ್ತದೆ, ಉಗ್ರವಾಗಿ ದಂಡಿಸುವುದಾಗಿ ಹೆದರಿಸುತ್ತಾರೆ. ಇದು ಸರಿಯೆ ಸ್ವಾಮಿ?

**ಸ್ವಾಮಿ :** ಇದು ಇನ್ನೊಂದು ದೋಷ. ಅದು ಸರಿಯಾಗುವುದು ಹೇಗೆ? ಯಾವನೇ ಶಿಷ್ಯನ ಮನಸ್ಸನ್ನು ದುರ್ಬಲಗೊಳಿಸುವುದು ಯಾವ ಗುರುವಿಗೂ ತಕ್ಕುದಲ್ಲ; ಅವನು ಶಿಷ್ಯನ ಮನಸ್ಸನ್ನು ಮುದಗೊಳಿಸಿ ತೃಪ್ತಿಪಡಿಸಬೇಕು. ಬೆದರಿಸಿ ಹಣ ಕೀಳುವವರು ಚೀಟರುಗಳು. ಅವರು ಕುರುಬರಲ್ಲ, ಕುರಿಗಳು.

**ಭಕ್ತ:** ಹಾಗಾದರೆ ನಾವು ಏನು ಮಾಡಬೇಕೆಂದು ಹೇಳುತ್ತೀರಿ? ಈ ಜನರೊಂದಿಗೆ ನಾವು ಹೇಗೆ ವ್ಯವಹರಿಸಬೇಕು? ದಯವಿಟ್ಟು ಹೇಳಿ.

**ಸ್ವಾಮಿ :** ಮಗು, ದಾರಿತಪ್ಪಿಸಿಕೊಂಡವರ ವಿಷಯ ಮಾತಾಡುವುದನ್ನು ಸಂಪೂರ್ಣ ವಾಗಿ ನಿಲ್ಲಿಸು. ನೀನು ದಾರಿಗೆ ತಲುಪುವ ವಿಚಾರ ಮಾತನಾಡು. ಅಂತಹ ವ್ಯಕ್ತಿಗಳೊಂದಿಗೆ ಎಲ್ಲಾ ಸಂಪರ್ಕವನ್ನು ತೊರೆದು, ಕಾಮವಾಗಲಿ ಲೋಭವಾಗಲಿ ಅಥವಾ ಬೇರೆ ಯಾವುದೇ ಬಗೆಯ ಆಕಾಂಕ್ಷೆಗಳಾಗಲಿ ಇಲ್ಲದ ವ್ಯಕ್ತಿಗಳೊಂದಿಗೆ ಮತ್ತು ಸ್ಥಳಗಳೊಂದಿಗೆ ಸಂಬಂಧ ಬೆಳೆಸಿಕೊ. ಎಲ್ಲರನ್ನೂ ಸಮಾನ ಪ್ರೇಮದಿಂದ ನೋಡುವ ಗುರುವಿಗಾಗಿ ಅರಸು. ನಿಜವಾದ ಗುರುವು ಕೆಲವು ಗುಣಗಳನ್ನು ಹೊಂದಿರಬೇಕು. ಇದನ್ನು ಗಮನಿಸು. ಆ ಗುಣಗಳಿದ್ದರೆ ಅಲ್ಲಿಗೆ ಹೋಗಿ ಸಂತೋಷ ವಾಗಿರು. ಅಂತಹ ಸ್ಥಳ ನಿನಗೆ ಸಿಕ್ಕದೆ ಹೋದರೆ ನಿನ್ನೊಳಗೇ ಭಗವಚ್ಚಿಂತನೆ ಮಾಡು. ಧ್ಯಾನ ಮಾಡು, ಭಜನೆ ಮಾಡು, ಅಷ್ಟು ಸಾಕು; ಬೇರೆ ಒಂದು ಸ್ಥಳವನ್ನು ನೀನು ಹುಡುಕಬೇಕಾಗಿಯೇ ಇಲ್ಲ. ಬಿಡುವು ದೊರೆತಾಗಲೆಲ್ಲಾ ಉತ್ತಮವಾದ ಭಕ್ತಿಯುತವಾದ ಪುಸ್ತಕಗಳನ್ನು ಓದು. ಆ ಪುಸ್ತಕಗಳಿಂದಲೂ ಅಷ್ಟೆ, ನಿನಗೆ ಅಗತ್ಯವಾಗಿರುವಷ್ಟನ್ನು ತೆಗೆದುಕೋ ಮಿಕ್ಕದ್ದನ್ನು ಕೈಬಿಡು. ಎಚ್ಚರಿಕೆಯಿಂದಿರು. ಎಲ್ಲಾ ಬಗೆಯ ಬಲೆಗಳಲ್ಲಿ ಬೋನುಗಳಲ್ಲಿ ಸಿಲುಕಿಕೊಳ್ಳಬೇಡ.

**ಭಕ್ತ:** ಆ ಮಹಾಪುರುಷರ ಗುಣಗಳು ಯಾವುವು ಸ್ವಾಮಿ?

**ಸ್ವಾಮಿ :** ಅವರಿಗೆ ಸಂಪತ್ತಿನ ಹಂಬಲವಿಲ್ಲ; ತಮ್ಮ ಆಶ್ರಮಗಳನ್ನು ಬೆಳೆಸಬೇಕೆಂಬ ಆಕಾಂಕ್ಷೆಯೂ ಇಲ್ಲ; ತಮ್ಮನ್ನು ಹೊಗಳುವವರನ್ನು ಅವರು ವಿಶೇಷವಾಗಿ ಪ್ರೇಮಿ ಸುವುದೂ ಇಲ್ಲ, ತೆಗಳುವವರನ್ನು ದ್ವೇಷಿಸುವುದೂ ಇಲ್ಲ. ತಮ್ಮ ಶಿಷ್ಯರು ಇತರ ಸ್ಥಳಗಳಿಗೆ ಹೋದರೆ ಅದನ್ನು ತಡೆಯುವುದಿಲ್ಲ; ಎಲ್ಲರನ್ನೂ ಅವರು ಸಮಾನ ಪ್ರೇಮದಿಂದ ನೋಡುತ್ತಾರೆ. ಇತರರನ್ನು ತೇಜೋವಧೆ ಮಾಡುವುದು ಅವರಿಗೆ

ಇಷ್ಟವಾಗುವುದಿಲ್ಲ. ತಮ್ಮ ತಪ್ಪನ್ನೂ ದೋಷಗಳನ್ನೂ ತೋರಿಸಿಕೊಡುವವರ ಮೇಲೆ ಸೇಡು ತೀರಿಸಿಕೊಳ್ಳಲು ಹೋಗುವುದಿಲ್ಲ. ಅವರು ಸದಾಕಾಲವೂ ಸತ್ಯ, ಧರ್ಮ, ಶಾಂತಿ ಮತ್ತು ಪ್ರೇಮಗಳನ್ನೇ ಹರಡುತ್ತಾರೆ. ಅವರು ಯಾವಾಗಲೂ ತಮ್ಮ ಶಿಷ್ಯರ ಸಂತೋಷ, ಯೋಗಕ್ಷೇಮ ಮತ್ತು ಪ್ರಗತಿಗಳನ್ನು ಬಯಸುತ್ತಾರೆ. ಅಂತಹ ವ್ಯಕ್ತಿಗಳನ್ನು ಹುಡುಕು. ಅವರು ನಿಜವಾದ ಗುರುಗಳು. ಕೋಪ, ಕಳವಳ, ದ್ವೇಷ, ಅಸೂಯೆ ಇವುಗಳಿಂದ ಪೀಡಿತರಾಗಿರುವವರ ಕಡೆಗೆ ಕಣ್ಣೆತ್ತಿಯೂ ನೋಡಬೇಡ. ಹಾಗೆಯೇ ಹೆಸರು–ಪ್ರಸಿದ್ಧಿ, ಗೌರವ–ಅಂತಸ್ತುಗಳ ಕಡೆಗೆ ಕಳವಳಿಸುತ್ತಿರುವವರು ಎಷ್ಟೋ ವೈಭವೋಪೇತವಾದ ವ್ಯಕ್ತಿತ್ವವನ್ನು ಹೊಂದಿರಲಿ, ಅವರ ಕೀರ್ತಿ ಎಷ್ಟೆ ಮಟ್ಟಿಗೆ ವ್ಯಾಪಿಸಿರಲಿ, ಯಾರನ್ನೂ ಗಮನಕ್ಕೆ ತಂದುಕೊಳ್ಳಬೇಡ.

**ಭಕ್ತ:** ಸರಿ ಸ್ವಾಮಿ. ಇದೆಲ್ಲಾ ಸರಿ. ಒಂದೇ ಒಂದು ಸಣ್ಣ ಸಂದೇಹವಿದೆ. ಈ ದೊಡ್ಡ ಗುರುಗಳು ಅಷ್ಟೊಂದು ವಿದ್ಯಾವಂತರಾಗಿದ್ದೂ, ಗಂಟೆಗಟ್ಟಲೆ ಉದ್ದುದ್ದ ಭಾಷಣಗಳನ್ನು ಕೊಡುವವರೂ ಆಗಿದ್ದು ಇದೆಲ್ಲವನ್ನೂ ಏಕೆ ತಿಳಿದುಕೊಂಡಿಲ್ಲ? ಈ ದೊಡ್ಡ ಮನುಷ್ಯರು ತಮ್ಮ ತಪ್ಪುಗಳನ್ನು ತಾವೇ ತಿಳಿದುಕೊಂಡು ಸರಿಪಡಿಸಿ ಕೊಳ್ಳಲಾರರೆ?

**ಸ್ವಾಮಿ:** ಅಷ್ಟೇಕೆ, ಒಂದು ಔನ್ಸ್ ಅನುಭವವೇ ಸಾಕು! ಉಪಯುಕ್ತವಾಗುತ್ತದೆ; ಆದರೆ ಟನ್ನುಗಟ್ಟಲೆ ವಿದ್ಯೆಯಿದ್ದರೂ ಅದು ನಿಷ್ಪ್ರಯೋಜಕವಾಗಬಹುದು. ಅನೇಕ ಜನರು ಕಾಲೇಜುಗಳಲ್ಲಿ ಉಪನ್ಯಾಸ ನೀಡುತ್ತಾರೆ, ಗಂಟೆಗಂಟೆಗಳ ಕಾಲ ತಾವು ಕಲಿತಿದ್ದನ್ನು ಹಾಗೆಯೇ ಸುರಿಯುತ್ತಾರೆ. ಒಬ್ಬ ವ್ಯಕ್ತಿಯು ತನ್ನ ಉಪನ್ಯಾಸದ ಶೀರ್ಷಿಕೆಯಿಂದ, ದೊಡ್ಡ ದೊಡ್ಡ ಪದ ಪ್ರಯೋಗಗಳಿಂದ ದೊಡ್ಡವನಾಗಬಲ್ಲ ನೇನು? ಇದು ನುಂಗಿದ ಆಹಾರವನ್ನು ವಾಂತಿ ಮಾಡಿದ ಹಾಗೆ ಅಷ್ಟೆ. ಮಾತಾಡಿದ್ದ ರಲ್ಲಿ ಎಷ್ಟನ್ನು ಆಚರಿಸಲಾಗುತ್ತಿದೆ ಎಂಬುದನ್ನು ನೀನು ನೋಡಬೇಕು. ಉಪದೇಶ ಮಾಡುವವರು ಮೊದಲು ತಾವೇ ಹಾಗೆ ನಡೆದುಕೊಳ್ಳಬೇಕು. ಏನಾದರೊಂದನ್ನು ಬಿಡಲು ಸಾಧ್ಯವಿಲ್ಲದೆ ಹೋಗಿರುವಾಗ ಅದನ್ನು ಬಿಡಲು ಇನ್ನೊಬ್ಬರಿಗೆ ಹೇಳಬೇಡ. ಆದ್ದರಿಂದ ವ್ಯಕ್ತಿಯು ಎಷ್ಟೇ ವಿದ್ಯಾವಂತನಾಗಿದ್ದರೂ ಅವನಿಗೆ ಅನುಭವ ಮತ್ತು ಆಚರಣೆಯಿಲ್ಲದೆ ಹೋದರೆ ಅದು ಕೇವಲ ಒಂಬತ್ತು ದಿನಗಳ ಅಚ್ಚರಿ ಅಷ್ಟೆ; ಆಮೇಲೆ ಅವನು ಅಲ್ಲಿಯೂ ಇಲ್ಲಿಯೂ ಎಲ್ಲಿಯೂ ಇಲ್ಲವಾಗುತ್ತಾನೆ. ನಾನು ಹೇಳಿದ ಈ ಗುಣಗಳನ್ನು ನೋಡಬೇಕಾಗಿರುವುದು ಗುರುಗಳಲ್ಲಿ ಮಾತ್ರವಲ್ಲ; ಎಲ್ಲರಲ್ಲಿಯೂ. ಆದ್ದರಿಂದ ಇತರರು ಕೆಟ್ಟವರೋ ತಪ್ಪು ಮಾಡುವವರೋ ಆ ಬಗೆಗೆ ಮಾತನಾಡುವುದು ನಿಲ್ಲಿಸು; ನಿನ್ನ ಶ್ರದ್ಧಾಭಕ್ತಿಗಳನ್ನು ಬೆಳೆಸಿಕೊ. ಭಗವದ್ಧ್ಯಾನವನ್ನು ಬೆಳೆಸಿಕೋ. ಉಪಯುಕ್ತವಾದ ಕಾರ್ಯಗಳಲ್ಲಿ ತೊಡಗು;

ಯಾವುದು ಒಳಿತನ್ನು ತರುವುದೋ ಅದನ್ನು ಮಾತ್ರ ಮಾಡು; ಯಾವುದು ಒಳಿತನ್ನು ಉಂಟು ಮಾಡುವುದೋ ಅದನ್ನು ಮಾತ್ರ ಮಾತನಾಡು. ಭಗವಂತ ನನ್ನು ಪೂಜಿಸು, ಅವನನ್ನೇ ಸದಾ ನೆನೆಯುತ್ತಿದ್ದು ಜಪಮಾಡು, ಧ್ಯಾನ ಮಾಡು. ಇವುಗಳಲ್ಲಿ ನೀನು ಮುಳುಗಿದರೆ ಇತರರ ಸರಿ ತಪ್ಪುಗಳ ವಿಷಯವಾಗಿ ನೀನು ತಲೆಕೆಡಿಸಿಕೊಳ್ಳದಂತಾಗುತ್ತದೆ.

**ಭಕ್ತ:** ಸ್ವಾಮಿ, ನೀವು ಗುರು–ಶಿಷ್ಯರ ನಡುವಣ ಸಂಬಂಧವನ್ನು ವಿವರಿಸಿದಿರಿ, ಈಗಿರುವ ಪರಿಸ್ಥಿತಿಗಳನ್ನು ಗಮನಿಸಿದರೆ ಸತ್ಯವನ್ನು ವ್ಯಕ್ತಪಡಿಸುವವನನ್ನು ಯಾರೂ ಇಷ್ಟಪಡುವುದಿಲ್ಲ. ಅನೇಕ ಗುರುಗಳು, ಸ್ವಾಮಿಗಳು ಮತ್ತು ಸಾಧುಗಳು, ನೀವು ಹೇಳಿದ ಹಾಗೆ, ತಪ್ಪಾಗಿ ನಡೆದುಕೊಂಡು ಅನೇಕ ರೀತಿಗಳಿಂದ ತಮ್ಮ ಹೆಸರನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಜೊತೆಗೆ ಅವರು ಸನ್ಯಾಸದ ನಿಯಮಗಳಿಗೂ ಭಗವಂತನಿಗೆ ಸಂಬಂಧಿಸಿದ ಧರ್ಮಕ್ಕೂ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಾರೆ. ಅಂತಹ ಜನರು ನಿಮ್ಮ ಮಾತುಗಳನ್ನು ಒಪ್ಪದೆ ಹೋಗಬಹುದು. ತಮ್ಮ ದೋಷಗಳನ್ನು ಬಯಲುಪಡಿಸಿದಿರೆಂದು ನಿಮ್ಮ ಮೇಲೆ ದ್ವೇಷ ಕಾರಲೂಬಹುದು. ಅದಕ್ಕಿಂತ ಕೀಳೆಂದರೆ, ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಂಡು ತಮ್ಮ ವರ್ತನೆ ಸರಿಯೆಂದು ಕಾಣುವ ಹಾಗೆ ಕತೆಗಳನ್ನು ವಾದಗಳನ್ನು ಕಟ್ಟಬಹುದು. ನಿಮ್ಮ ಮಾತುಗಳು ತಪ್ಪು ಮಾಡುತ್ತಿರುವವರಿಗೆ ಮಾತ್ರ ಅನ್ವಯಿಸುತ್ತವೆ. ಸತ್ಕಾರ್ಯಗಳಲ್ಲಿ ನಿರತರಾಗಿರುವವರಿಗೆ ಅಲ್ಲ. ಆದ್ದರಿಂದ ಉತ್ತಮ ಸಾಧುಗಳೂ ಆದರ್ಶಗಳನ್ನು ಎತ್ತಿ ಹಿಡಿಯುವುದರಲ್ಲಿ ಆಸಕ್ತರಾದವರೂ ನೀವು ಹೀಗೆ ಮಾತನಾಡಿರುವುದನ್ನು ನೋಡಿ ತುಂಬಾ ಸಂತೋಷಪಡುತ್ತಾರೆ. ಆದರೆ ಜನರು ಏನು ಬೇಕಾದರೂ ಹೇಳಲಿ, ಸಾಧಕರು ಮುನ್ನಡೆಯಲು ಸಹಾಯ ಮಾಡಿ, ಭಗವನ್ಮಹಿಮೆಯನ್ನು ನಮಗೆ ತಿಳಿಸಿಕೊಡಿ.

**ಸ್ವಾಮಿ:** ಒಳ್ಳೆಯದು, ಜನರು ಹೇಗೆ ಮಾತನಾಡಿದರೂ ಅದರಿಂದ ನನಗೇನು? ನಿಂದೆಗೆ ಹೆದರಿಕೊಂಡು ಸುಳ್ಳಿಗೆ ಬೆಂಬಲ ಕೊಡುವುದು ಸಾಧ್ಯವೆ? ಹೊರೆ ಎಂಥದೋ ಹೊರುವವನೂ ಅಂತವನೇ ಎಂದು ಗಾದೆಯಿದೆ. ನಕಲಿಗಳು ಮಾತ್ರ ವಿರೋಧ ಸೂಚಿಸುತ್ತಾರೆ, ನಿಂದಿಸುತ್ತಾರೆ; ಅಸಲಿ ಗುರುಗಳು ಸಂತೋಷಪಡುತ್ತಾರೆ. ಕುಂಬಳಕಾಯಿ ಕಳ್ಳ ಎಂದರೆ ನಿಜವಾಗಿ ಕಳ್ಳನಾದವನು ಮಾತ್ರ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾನೆ. ಏಕೆಂದರೆ ಅವನು ಕದ್ದು ತಂದ ಕುಂಬಳಕಾಯಿ ಹೆಗಲ ಮೇಲೆಯೇ ಇದೆಯೋ ಅಂತ ಅವನಿಗೆ ಆತಂಕ. ಕದಿಯದವರು ಹೆಗಲು ಮುಟ್ಟಿಕೊಳ್ಳಬೇಕಾದ ಅಗತ್ಯವೇ ಇಲ್ಲ.

ಪ್ರಾಮಾಣಿಕರಾದವರಿಗೆ ಹೆದರಿಕೆಯಾಗಲಿ ಕೊಪವಾಗಲಿ ಇರುವುದಿಲ್ಲ. ಇತರರು ಕೊನೆಯ ಪಕ್ಷ ಇನ್ನು ಮುಂದಾದರೂ ತಮ್ಮ ಕೃತ್ಯಗಳಿಗೆ ನಾಚಿಕೊಂಡು ತಿದ್ದಿಕೊಳ್ಳಲು ನಿರ್ಧರಿಸಬಹುದು. ಏಕೆಂದರೆ ತಿಳಿಯದೆ ಮಾಡಿದ ಅಪರಾಧಗಳಿಗೆ ಪಶ್ಚಾತ್ತಾಪವೊಂದೇ ತಿದ್ದಿಕೊಳ್ಳಲು ಮತ್ತು ಕ್ಷಮೆ ಪಡೆಯಲು ಇರುವ ದಾರಿ. ಮತ್ತೆ ಅದೇ ತಪ್ಪನ್ನು ಮಾಡದಿರುವುದೇ ನೈತಿಕವಾಗಿ ವ್ಯಕ್ತಿಯು ಬಲವಾಗಿದ್ದಾನೆನ್ನುವುದಕ್ಕೆ ಕುರುಹು.

# ಅಧ್ಯಾಯ ೧೬

**ಭಕ್ತ:** ಸ್ವಾಮಿ, ಈಗ ನೀವು ಬರೆಯುತ್ತಿರುವ ಧ್ಯಾನದ ವಿಷಯದಲ್ಲಿ ನನಗೆ ಕೆಲವು ಸಂದೇಹಗಳಿವೆ. ಅವುಗಳನ್ನು ಕೇಳಬಹುದೇ?

**ಸ್ವಾಮಿ:** ಖಂಡಿತವಾಗಿಯೂ ಕೇಳಿ ಸಂದೇಹಗಳನ್ನು ಪರಿಹರಿಸಿಕೋ. ಅದು ನಿನಗೂ ಒಳ್ಳೆಯದು, ನನಗೂ ಅದು ಸಂತೋಷ.

**ಭಕ್ತ:** ಕೆಲವರು ಧ್ಯಾನವನ್ನು ಅಭ್ಯಾಸ ಮಾಡುತ್ತಾರೆ, ಆದರೆ ಅದು ಪ್ರಗತಿ ಹೊಂದಿದೆಯೆ ಇಲ್ಲವೆ ಎಂಬುದು ಅವರಿಗೆ ತಿಳಿಯುವುದಿಲ್ಲ. ಅದಕ್ಕೆ ಏನು ಹೇಳುವಿರಿ?

**ಸ್ವಾಮಿ:** ಧ್ಯಾನದಲ್ಲಿ ಪ್ರಗತಿ ಎಂದರೆ ಏಕಾಗ್ರತೆಯ ಸಿದ್ಧಿ. ಪ್ರತಿಯೊಬ್ಬನೂ ಏಕಾಗ್ರತೆಯಲ್ಲಿ ಎಷ್ಟು ಮಟ್ಟಿಗೆ ಯಶಸ್ವಿಯಾಗಿರುವನೆಂದು ತನಗೆ ತಾನೇ ಸಂದೇಹಕ್ಕೆಡೆಯಿಲ್ಲದೆ ತಿಳಿದುಕೊಳ್ಳಬಹುದಲ್ಲವೆ?

**ಭಕ್ತ:** ಕೆಲವರು ಧ್ಯಾನದ ಸಮಯದಲ್ಲಿ ತಮಗೆ ಏನೇನೋ ಕಾಣಿಸುವುದಾಗಿ ಹೇಳುತ್ತಾರೆ; ಮತ್ತೆ ಕೆಲವರಿಗೆ ಏನೇನೋ ಸದ್ದುಗಳು ಕೇಳಿಸುತ್ತವಂತೆ. ಇವು ಪ್ರಗತಿಯನ್ನು ಸೂಚಿಸುತ್ತವೆಯೆ?

**ಸ್ವಾಮಿ:** ಅವು ಭ್ರಮೆಗಳು. ಅವು ಪ್ರಗತಿಗೆ ತಡೆಯುಂಟುಮಾಡುತ್ತವೆ. ಗರ್ವವನ್ನು ಬೆಳೆಸಿ ಏಕಾಗ್ರತೆಯನ್ನು ಚದುರಿಸಿಬಿಡುತ್ತವೆ. ದೃಶ್ಯ ಮತ್ತು ಶಬ್ದಗಳ ತಡೆ ಧ್ಯಾನದ ಕುರುಹಲ್ಲ.

**ಭಕ್ತ:** ಹಾಗೆ ತಡೆಯುಂಟಾದಾಗ ಏನು ಮಾಡಬೇಕು?

**ಸ್ವಾಮಿ:** ಮನಸ್ಸನ್ನು ಅವುಗಳ ಹಿಂದೆಯೇ ಅಲೆಯಲು ಬಿಡಬೇಡ; ನೀನು ಚಿತ್ರಿಸಿಕೊಂಡಿರುವ ಭಗವದ್ರೂಪದಿಂದ ಬೇರೆಡೆಗೆ ಸೆಳೆಯಲು ಹಂಚಿಕೆ ನಡೆಸಿರುವ ತಡೆಗಳು ಎಂಬುದರಲ್ಲಿ ನಂಬಿಕೆಯಿರಲಿ. ಈ ಬಗೆಯ ದೃಶ್ಯಗಳು, ಶಬ್ದಗಳು ನುಸುಳಿಬರಲು ಅವಕಾಶ ಕೊಟ್ಟಿದ್ದೇ ಆದರೆ ಮೂಲ ರೂಪವು ಕಾಂತಿಗುಂದಿ, ನಿನ್ನ ಅಹಂಕಾರವು ಹೆಚ್ಚಿ, ದಾರಿ ತಪ್ಪುವೆ.

**ಭಕ್ತ:** ಆದರೆ, ಸ್ವಾಮಿ, ಕೆಲವರು ಇವು ಧ್ಯಾನದಲ್ಲಿ ಪ್ರಗತಿಯಾಗುತ್ತಿರುವುದರ ಕುರುಹುಗಳು ಎಂದು ಹೇಳುವರಲ್ಲ!

**ಸ್ವಾಮಿ:** ಅದರ ಅರ್ಥ, ಅವರು ಸರಿಯಾಗಿ ಧ್ಯಾನ ಮಾಡುತ್ತಿಲ್ಲ ಎಂದು ಅಷ್ಟೆ! ಸಾಲದ್ದಕ್ಕೆ ಧ್ಯಾನವೆಂದರೆ ಏನೆಂದೇ ತಿಳಿಯದೆ, ಈ ರೀತಿ ಮಾತನಾಡಿ ಶಿಷ್ಯರನ್ನು ಮರುಳುಗೊಳಿಸುತ್ತಾರೆ, ಅವರನ್ನು ಸಂತೋಷಪಡಿಸುತ್ತಾರೆ. ಅದಷ್ಟೇ ಅದರಿಂದ ಆಗುವ ಲಾಭ.

**ಭಕ್ತ:** ಹಾಗೆಂದರೆ ಧ್ಯಾನದಿಂದ ಭಗವಂತನ ದರ್ಶನ ಮಾಡಲು ಸಾಧ್ಯವಿಲ್ಲವೆ?

**ಸ್ವಾಮಿ:** ಯಾಕಿಲ್ಲ? ಖಂಡಿತವಾಗಿಯೂ ಅದು ಸಾಧ್ಯ. ಭಗವಂತನ ಭವ್ಯ ಸುಂದರ ರೂಪದ ಮೇಲೆ ನಿನ್ನ ಗಮನವನ್ನು ನೆಟ್ಟು ಅದೊಂದರ ಮೇಲೆಯೇ ಮನಸ್ಸನ್ನು ಏಕಾಗ್ರಗೊಳಿಸಿದರೆ, ಆ ರೂಪದಲ್ಲೇ ಅವನ ಕರುಣೆಯು ಅನೇಕ ರೀತಿಗಳಲ್ಲಿ ನಿನ್ನ ಮೇಲೆ ಹರಿದು ಬರುವುದು. ಹಾಗೆ ಮಾಡುವಾಗ ಹಲವೊಂದು ಅಡೆತಡೆಗಳು ಮೂಗು ತೂರಿಸಬಹುದು. ಅವುಗಳಿಂದ ನೀನು ಭ್ರಮಿತನಾಗಬಾರದು. ಎಚ್ಚರದಿಂದಿರು, ದಿವ್ಯ ಮಂಗಳಕರವಾದ ರೂಪವನ್ನು ಮರೆಯಬೇಡ. ಸಮಸ್ತ ಸೃಷ್ಟಿಯೂ ಅದರಲ್ಲಿ ಮುಳುಗಿ ಹೋಗಿರುವಂತೆ ಚಿತ್ರಿಸಿಕೊ.

**ಭಕ್ತ:** ಆದರೆ ನಿಜವಾಗಿ ನಾವು ಧ್ಯಾನದ ಯಾವ ಹಂತವನ್ನು ಮುಟ್ಟಿದ್ದೇವೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲವೆ?

**ಸ್ವಾಮಿ:** ಹಂತದ ಸಂಖ್ಯೆ ಇಷ್ಟು, ಇದಿದು ಹೀಗೆ ಹೀಗೆ ಎಂದು ತಿಳಿದಾಗ ಮಾತ್ರವೆ ನಿನಗೆ ಧ್ಯಾನದ ಪ್ರಗತಿ ಅಥವಾ ಅವನತಿಯ ಗುರುತಾಗುವುದು. ಅಲ್ಲವೆ? ಧ್ಯಾನ ರೂಪವು ಅನಾದಿ ಮತ್ತು ಅನಂತ. ಆದ್ದರಿಂದ ಅದರ ಫಲಿಸುವಿಕೆಯನ್ನು ಘೋಷಿಸಿ, ಪೂರ್ಣಗೊಳಿಸಿ, ಮುಗಿಸಲು ಸಾಧ್ಯವಿಲ್ಲ.

**ಭಕ್ತ:** ಹಾಗಾದರೆ ಧ್ಯಾನವು ಕೊನೆಯೇ ಇಲ್ಲದ್ದು ಎನ್ನುವಿರಾ?

**ಸ್ವಾಮಿ :** ಸಾಮಾನ್ಯವಾಗಿ ಕೊನೆ ಎಂದು ಕರೆಯುವುದು ನಾನು ಎಂಬುದರ ಕೊನೆ, ಸಮಸ್ತವೂ ಒಂದು ಅಖಂಡ ರೂಪದಲ್ಲಿ ವಿಲೀನವಾಗುವುದು. ಧ್ಯಾನಕ್ಕೆ ಇಂತಹ ಕೊನೆಯಿಲ್ಲ.

**ಭಕ್ತ:** ಅದರ ವಿವಿಧ ಹಂತಗಳನ್ನು ನಾವು ತಿಳಿದುಕೊಳ್ಳುವುದು ಹೇಗೆ?

**ಸ್ವಾಮಿ :** ಪ್ರತಿದಿನವೂ ಎಷ್ಟರಮಟ್ಟಿಗೆ ಮನಸ್ಸನ್ನು ಏಕಾಗ್ರಗೊಳಿಸಲು ಶಕ್ತನಾಗಿದ್ದೀಯೆ, ಎಷ್ಟರಮಟ್ಟಿಗೆ ಮನಸ್ಸಿನ ಅಲೆಮಾರಿ ಸ್ವರೂಪವನ್ನು ಹತೋಟಿಯಲ್ಲಿಟ್ಟುಕೊಂಡಿರುವೆ, ಭಗವಂತನ ರೂಪವನ್ನು ಎಷ್ಟು ಆಳವಾಗಿ ನೀನು ಸವಿಯುವೆ, ಇವುಗಳನ್ನು ಪರೀಕ್ಷಿಸಿಕೊಂಡರೆ ನೀನಿರುವ ಹಂತದ ಬಗೆಗೆ ಒಂದು ಭಾವನೆ ಬರಬಹುದು, ಅಷ್ಟೆ. ಮುಟ್ಟಿರುವ ಹಂತವನ್ನು ಗುರುತಿಸಲು ಸಾಧ್ಯವೇ ಇಲ್ಲ. ನಿನಗೆ ಏನು ದೊರಕುತ್ತದೆ ಮತ್ತು ಅದು ಯಾವಾಗ ಎನ್ನುವುದು ಅವನ ಕೃಪೆಯನ್ನು ಅವಲಂಬಿಸಿದೆ. ಸಾಧಕನ ಧ್ಯೇಯ ಏನಿದ್ದರೂ ದಾರಿಯಿಂದ ಅತ್ತಿತ್ತ ಸರಿಯದೆ ಧ್ಯಾನವನ್ನು ಆಚರಿಸುವುದು. ಮಿಕ್ಕದ್ದೆಲ್ಲ ಅವನ ಕರುಣೆ. ಅದು ದಿನಗಳ ಸಂಖ್ಯೆಯನ್ನಾಗಲಿ ಧ್ಯಾನಮಾಡಿದ ಸಮಯದ ಲೆಕ್ಕವನ್ನಾಗಲಿ ಅವಲಂಬಿಸುವುದಿಲ್ಲ. ಕೆಲವರಿಗೆ ಅನೇಕ ಜನ್ಮಗಳು ಬೇಕಾಗಬಹುದು; ಇತರರು ಕೆಲವೇ ದಿನಗಳಲ್ಲಿ ಗುರಿಯನ್ನು ಸಾಧಿಸಿಕೊಳ್ಳಬಹುದು. ಅವನವನ ಶ್ರದ್ಧೆ, ಭಕ್ತಿ ಮತ್ತು ಸಾಧನೆಗಳ ಮೇಲೆ ಅದು ನಿಲ್ಲುತ್ತದೆ. ಅದನ್ನು ಲೆಕ್ಕಹಾಕಿ ಹೇಳಲು ಸಾಧ್ಯವಾಗುವುದಿಲ್ಲ.

**ಭಕ್ತ:** ಅಂದರೆ ನಾವು ಸಾಧನೆ, ಅದರ ಮುನ್ನಡೆ, ಹಂತ, ಸಂಭವನೀಯ ಇಳಿತ ಇವೆಲ್ಲವುಗಳನ್ನು ಕುರಿತು ತಲೆಕೆಡಿಸಿಕೊಳ್ಳಬಾರದು ಎಂದರ್ಥ.

**ಸ್ವಾಮಿ :** ಹೌದು. ಸಾಧನೆಗೆ ಅಗತ್ಯವಾದ ನಿಯಮಗಳ ಬಗೆಗೆ ಚಿಂತಿಸು, ಅದರ ಫಲದ ಬಗೆಗೆ ಅಲ್ಲ. ಸತ್ಯ ಮತ್ತು ಸತ್ಯದ ಸಾಕ್ಷಾತ್ಕಾರ ಇವಕ್ಕೆ ಮೆಟ್ಟಿಲುಗಳಿಲ್ಲ, ಅಥವಾ ಮಿತಿಯೂ ಇಲ್ಲ. ಹಲವು ತೆರನಾದ ಭ್ರಮೆಗಳಿಗೆ, ಈ ಹಂತ ಆ ಹಂತ ಎಂಬ ಆಸೆಗಳಿಗೆ ಬಲಿಯಾಗದಿರು. ಗುರಿ ಮತ್ತು ಪ್ರಯಾಣ ಎರಡನ್ನೇ ಭದ್ರವಾಗಿ ಹಿಡಿದುಕೊ. ಸಾಧನೆಯನ್ನು ಬಿಡಬೇಡ. ಧ್ಯಾನದ ಸಮಯವನ್ನು ಬದಲಾಯಿಸಬೇಡ. ಒಂದೇ ಗುರಿ, ಬದಲಾಗದ ಮನೋಧರ್ಮಗಳಿಂದ ಅದನ್ನು ಸಾಧಿಸಲು ಶ್ರಮಿಸು. ಅದು ಫಲವನ್ನು ಆಶ್ವಾಸನೆ ಕೊಡುತ್ತದೆ, ಆನಂದವನ್ನು ಅನುಗ್ರಹಿಸುತ್ತದೆ. ತಮ್ಮ ಕಾಲ್ಪನಿಕ ಅನುಭವಗಳನ್ನು ಕುರಿತು ಇತರರು ಆಡುವ ಮಾತುಗಳನ್ನು ನಂಬಿ ಬಿಡಬೇಡ. ನಿನಗೆ ನಿನ್ನದೇ ಅನುಭವವಿಲ್ಲದೆ ಬೇರೆ

ಯಾವುದೂ ಅಸಲಿಯಲ್ಲ. ಆದ್ದರಿಂದ ಅಚಂಚಲವಾದ ಏಕಾಗ್ರತೆಯನ್ನು ಗಳಿಸಲು ಪ್ರಯತ್ನಪಡು. ಅದೊಂದೇ ನಿನ್ನ ಗುರಿಯಾಗಿರಲಿ.

**ಭಕ್ತ:** ಧ್ಯಾನವೆಂದರೆ ಭಗವಂತನ ರೂಪವನ್ನು ದರ್ಶನ ಮಾಡುವುದು, ಅಲ್ಲವೆ ಸ್ವಾಮಿ? ಅಂತಹ ಒಂದು ರೂಪವು ಕಾಣಿಸಿದಾಗ ಅದು ಸತ್ಯವಲ್ಲ, ಅಸಲಿಯಾದುದಲ್ಲ ಎಂದು ಹೇಳುತ್ತಾರೆ. ಅವರ ಅರ್ಥ ಏನು?

**ಸ್ವಾಮಿ:** ಭಗವಂತನ ರೂಪವನ್ನು ಕಾಣುವುದು ಧ್ಯಾನದ ಗುರಿ. ಅದನ್ನು ಸಾಧಿಸುವುದೇ ಉದ್ದೇಶ. ಆದರೆ ಗುರಿಯನ್ನು ತಲುಪುವುದಕ್ಕೆ ಮುಂಚೆ ಕೆಲವು ತಡೆಗಳು ಎದುರಾಗುತ್ತವೆ. ಅವುಗಳ ಬಗೆಗೆ ಎಚ್ಚರವಾಗಿರಬೇಕು.

**ಭಕ್ತ:** ಆ ಅಡ್ಡಿಗಳು ಯಾವುವು? ಅವುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆ?

**ಸ್ವಾಮಿ:** ಒಂದು ಹಳ್ಳಿಗೆ ಹೋಗಬೇಕೆಂದು ನೀನು ರೈಲು ಹತ್ತಿದ್ದೀಯೆ. ಆ ಹಳ್ಳಿಯಲ್ಲಿ ನಿಲ್ದಾಣವಿದೆ ಎಂದು ನಿನಗೆ ಗೊತ್ತು. ಅದೇ ಬಗೆಯ ಹಲವಾರು ನಿಲ್ದಾಣಗಳು ಪ್ರಯಾಣದ ನಡುವೆ ಬರುತ್ತವೆ. ರೈಲು ಅಲ್ಲೆಲ್ಲಾ ನಿಲ್ಲುತ್ತದೆ. ರೈಲು ನಿಂತಿತೆಂದ ಮಾತ್ರಕ್ಕೆ ನಿನ್ನ ಸಾಮಾನು ಸರಂಜಾಮು ಸಮೇತ ಆ ಯಾವುದಾದರೂ ಒಂದು ನಿಲ್ದಾಣದಲ್ಲಿ ಇಳಿದುಬಿಡುವೆಯೇನು? ಹಾಗೆ ಇಳಿದರೆ, ನೀನು ಹೋಗಬೇಕಾದ ಸ್ಥಳಕ್ಕೆ ಹೋಗಲು ಸಾಧ್ಯವಿಲ್ಲ, ಅಲ್ಲವೆ? ನಡುವಣ ನಿಲ್ದಾಣಗಳಲ್ಲಿ ಇಳಿದುಕೊಳ್ಳುವುದು ಒಳ್ಳೆಯದಲ್ಲ, ನಿನ್ನ ಗುರಿ ತಪ್ಪಿಹೋಗುತ್ತದೆ, ವಿಳಂಬವೊಂದೇ ಅಲ್ಲದೆ ಇನ್ನು ಹಲವು ತೆರನಾದ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಬುದ್ಧಿವಂತಿಕೆಯ ಮಾರ್ಗವೆಂದರೆ, ಪ್ರಯಾಣ ಹೊರಡುವ ಮೊದಲೇ ಮಧ್ಯೆ ಬರುವ ನಿಲ್ದಾಣಗಳ ಹೆಸರುಗಳನ್ನು ಗುರುತಿಟ್ಟುಕೊಳ್ಳುವುದು. ಅದೇ ದಾರಿಯಾಗಿ ಹಿಂದೆ ಪ್ರಯಾಣ ಮಾಡಿದವರನ್ನು ಸಂಧಿಸಿ ಹೀಗೆ ಗುರುತಿಸಿಕೊಳ್ಳಬಹುದು.

**ಭಕ್ತ:** ಪ್ರತಿಯೊಬ್ಬನೂ ಆ ದಾರಿಯಲ್ಲಿ ಪ್ರಯಾಣ ಮಾಡಿ ನುರಿತವನ ಹಾಗೆಯೇ ಕಾಣಿಸುತ್ತಾನೆ! ಸೋಗು ಹಾಕುವವರನ್ನು ನಿಜವಾಗಿ ತಿಳಿದವನಿಂದ ಬೇರ್ಪಡಿಸಿ ತಿಳಿದುಕೊಳ್ಳುವುದು ಹೇಗೆ?

**ಸ್ವಾಮಿ:** ನಿಜ, ಇದು ಆಲೋಚನೆ ಮಾಡಬೇಕಾದ ವಿಷಯವೇ. ಪ್ರತಿಯೊಬ್ಬನೂ ತನ್ನದೇ ಆದ ದಾರಿಯಲ್ಲಿ ಪ್ರಯಾಣ ಮಾಡಿರಬಹುದು. ಕೆಲವರು ಮಾರ್ಗದ ವಿವರಗಳನ್ನೂ, ನಿಲ್ದಾಣಗಳನ್ನೂ ನಕಾಶೆಯ ಮಾರ್ಗದ ಮೂಲಕ ಮಾತ್ರವೇ ಹೇಳುತ್ತಾರೆ. ಹಾಗಿದ್ದ ಪಕ್ಷದಲ್ಲಿ, ಆ ಆಧಾರದಿಂದ ಅವರನ್ನು ನೀನು ಅನುಸರಿಸ

ಬಾರದು. ಅವರು ಹೊರಟಿದ್ದು ಎಲ್ಲಿಂದ, ನೀನು ಹೊರಡುತ್ತಿರುವುದು ಎಲ್ಲಿಂದ ಎಂಬುದನ್ನು ವಿಚಾರಮಾಡು. ಅಲ್ಲದೆ ಗಮ್ಯಸ್ಥಾನದವರೆಗೂ ಪ್ರಯಾಣ ಮಾಡಿರುವವರ ಸಲಹೆ ಪಡೆಯಲು ಸಾಧ್ಯವೇ ಇಲ್ಲ, ಏಕೆಂದರೆ ಅವರು ಹಿಂದಿರುಗಿ ಬರುವುದಿಲ್ಲ; ನೀನಿರುವ ಹಂತದಲ್ಲಿ ಸಲಹೆ ನಿಡಲು ಅವರು ದೊರಕುವುದಿಲ್ಲ. ಆದ್ದರಿಂದ ಮಾರ್ಗದ ವಿಷಯದಲ್ಲಿ ತಮ್ಮವೇ ಅನುಭವಗಳನ್ನು ಹೇಳಬಲ್ಲ ಜನರನ್ನು ಹುಡುಕುವ ಕಷ್ಟಪಡಬೇಕಾಗಿಲ್ಲ. ಅತ್ಯುತ್ತಮವೆಂದರೆ ಗೀತೆಯಲ್ಲಿ, ಶಾಸ್ತ್ರಗಳಲ್ಲಿ, ವೇದ ಉಪನಿಷತ್ತುಗಳಲ್ಲಿ ಮಹಾಪುರುಷರು ಹೇಳಿರುವ ಮಾತುಗಳ ನೆರವನ್ನು ಪಡೆಯುವುದು. ಭಗವದ್ವಾಣಿಯನ್ನು ಅವಲಂಬಿಸು, ಅವತಾರಪುರುಷರ ಉಪದೇಶವನ್ನು ಅನುಸರಿಸು. ನಿನಗೆ ತಾವು ಪ್ರಯಾಣ ಮಾಡಿರುವಷ್ಟರ ಬಗೆಗೆ ದಾರಿತೋರಿಸಲು ಅಸಂಖ್ಯಾತ ಜನರಿದ್ದಾರೆ. ಅದಕ್ಕಿಂತ ಆಚೆಗೆ ಅವರು ಹೇಳಲಾರರು. ಏಕೆಂದರೆ ಅವರೇ ಅನುಭವ ಪಡೆದುಕೊಂಡಿಲ್ಲದುದರ ವಿಷಯವಾಗಿ ನಿನಗೆ ಏನು ತಾನೇ ಹೇಳಬಲ್ಲರು?

**ಭಕ್ತ:** ಹಾಗಾದರೆ, ಆ ದಾರಿಯನ್ನು ತಲುಪಿ, ಆ ಗುರಿಯನ್ನು ಸಾಧಿಸಲು ನಾವು ಅವಕಾಶವನ್ನು ಪಡೆಯುವುದು ಹೇಗೆ?

**ಸ್ವಾಮಿ:** ಅವರ ವಿಧಿ ಹಾಗಿದ್ದರೆ ಅದು ಕಷ್ಟವಾಗುವುದಿಲ್ಲ. ಅವಕಾಶವು ತಾನಾಗಿ ಹುಡುಕಿಕೊಂಡು ಬರುತ್ತದೆ. "ಅರಸುತ್ತಿದ್ದ ಬಳ್ಳಿ ಕಾಲಿಗೆ ತೊಡರಿತು," ಎಂಬ ಗಾದೆಯನ್ನು ಕೇಳಿಲ್ಲವೇ? ನೀನು ಸಂದೇಹಪಡಬೇಕಾಗಿಲ್ಲ; ಅದು ಘಟಿಸಿಯೇ ತೀರುತ್ತದೆ.

**ಭಕ್ತ:** ಸ್ವಾಮಿ, ಧ್ಯಾನದ ಸಮಯದಲ್ಲಿ ಕೆಲವು ದೃಶ್ಯಗಳು ಕಾಣಿಸದಿದ್ದರೆ, ಶಬ್ದ ಕೇಳಿಸದಿದ್ದರೆ ನಮ್ಮ ಧ್ಯಾನ ಸರಿಯಾಗಿ ಮುನ್ನಡೆದಿಲ್ಲ ಎಂದರ್ಥವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಅವರ ಮಾತು ತಪ್ಪೆ?

**ಸ್ವಾಮಿ:** ಅದು ಅವರದೇ ವಿಚಾರದ ಕಲ್ಪನೆಯಾಗಿದೆ. ಬಹುಶಃ ಅವರು ಅಂತಹ ದರ್ಶನಗಳನ್ನು ಶಬ್ದಗಳನ್ನು ಪಡೆಯಲೆಂದೇ ಧ್ಯಾನಮಾಡುತ್ತಾರೆಂದು ತೋರುತ್ತದೆ. ಆದ್ದರಿಂದ ಅವರಿಗೆ ಆ ಅನುಭವವಾಗುತ್ತದೆ. ಅವುಗಳಿಂದ ಅವರು ಒಬ್ಬೊಬ್ಬರೂ ಭ್ರಮಿತರಾಗುತ್ತಾರೆ. ಆ ದರ್ಶನಗಳಡಿಯಲ್ಲಿ ಇರುವ ಸತ್ಯವನ್ನು ಅವರು ವಿಶ್ಲೇಷಣೆ ಮಾಡುವುದಿಲ್ಲ. ನಿಜವಾಗಿ ಹೇಳಬೇಕೆಂದರೆ ಈ ಚಂಚಲ ಭ್ರಮೆಗಳನ್ನು ಅವರು ಕೋರಬಾರದು.

**ಭಕ್ತ:** ಹಾಗಾದರೆ ನಾವು ಏನನ್ನು ಅರಸಬೇಕು ಸ್ವಾಮಿ?

**ಸ್ವಾಮಿ:** ಸಮಸ್ತದ ಹಿಂದಿರುವ ಮೂಲ ತತ್ತ್ವವನ್ನು ಅರಸು, ಅದನ್ನು ಬಯಸು. ಯಾವುದನ್ನು ತಿಳಿದುಕೊಂಡರೆ ಸಮಸ್ತವನ್ನೂ ತಿಳಿದುಕೊಂಡಂತಾಗುವುದೋ ಯಾವುದನ್ನು ನೋಡಿದರೆ ಎಲ್ಲವನ್ನೂ ನೋಡಿ, ಅರ್ಥವಾಗುತ್ತದೋ ಅದನ್ನು ತಿಳಿಯಲು ಪ್ರಯತ್ನಿಸು. ಪ್ರವಾಹವನ್ನು ತಿಳಿಯಬೇಕೆಂಬ ಪ್ರಯತ್ನದಲ್ಲಿ ಹನಿಗಳನ್ನು ಹುಡುಕಲು ಹೋಗಬೇಡ. (ಹನಿಗಳಿಗೆ ಆಧಾರವಾದ) ಸಾಗರವನ್ನೇ ಪಡೆದಾಗ ಹನಿಯ ಭ್ರಮೆ ನಿನಗುಳಿಯುವುದಿಲ್ಲ.

**ಭಕ್ತ:** ಕೆಲವು ಸಾಧಕರು ಧ್ಯಾನದ ಸಮಯದಲ್ಲಿ ಗುರುವನ್ನೂ ಚಿತ್ರಿಸಿಕೊಳ್ಳುತ್ತಾರೆ, ಅದು ಸರಿಯೆ?

**ಸ್ವಾಮಿ:** ಗುರುವು ದಾರಿ ತೋರಿಸುತ್ತಾನೆ; ಯಾವುದು ಪ್ರಯೋಜನಕಾರಿಯೋ ಅದನ್ನು ಬೋಧಿಸುತ್ತಾನೆ. ಆದ್ದರಿಂದ ಅವನ ಬಗೆಗೆ ಗೌರವ ಮತ್ತು ಕೃತಜ್ಞತೆಗಳನ್ನು ತೋರಿಸಬೇಕು. ಆದರೆ ಗುರುವೇ ಸರ್ವಶಕ್ತ ಮತ್ತು ಸರ್ವಗ್ರಾಸಿ ಎಂದು ಭಾವಿಸ ಬಾರದು. ಭಗವಂತ ಆತ್ಮರೂಪದಲ್ಲಿ ಎಲ್ಲರಲ್ಲೂ ಇದ್ದಾನೆ, ಅವನವನಿಗೆ ತಕ್ಕುದಾದ ಸ್ಥಾನಮಾನವನ್ನು ಅವನಿಗೆ ನೀಡುತ್ತಿದ್ದಾನೆ, ಅದಕ್ಕಿಂತ ಹೆಚ್ಚನ್ನಲ್ಲ.

**ಭಕ್ತ:** ಆದರೆ ಕೆಲವು ಮಹಾತ್ಮರು ಗುರುವೇ ತಂದೆ ಮತ್ತು ತಾಯಿ, ಅವನೇ ಬ್ರಹ್ಮ, ವಿಷ್ಣು, ಮಹೇಶ್ವರ ಎಂದೆಲ್ಲ ಘೋಷಿಸುತ್ತಾರೆ.

**ಸ್ವಾಮಿ:** ಆತ್ಮದ ಆಧಾರದಿಂದ ಅದು ಸರಿ. ಆದರೆ ಅಂತಹ ಗುರುಗಳು ತುಂಬಾ ವಿರಳ. ಪ್ರೇಮದಿಂದಲೂ ಗೌರವದಿಂದಲೂ ಅವನನ್ನು ತಂದೆ, ತಾಯಿ, ದೇವರು ಎಂದು ವರ್ಣಿಸಬಹುದು. ವಾಸ್ತವವಾಗಿ ಅವನು ಹಾಗಾಗಲು ಸಾಧ್ಯವೆ? ತಾಯಿಯಂತೆ ಪ್ರೀತಿಯುತನಾಗಿರುತ್ತಾನೆ, ತಂದೆಯ ಹಾಗೆ ರಕ್ಷಣೆ ನೀಡುತ್ತಾನೆ ಎಂದು ಹೇಳಬಹುದು. ಹಾಗಾದರೆ ನಿನಗೆ ಈ ದೇಹವನ್ನು ಕೊಟ್ಟು, ಗುರುವು ದೊರಕುವುದಕ್ಕಿಂತಲೂ ಮೊದಲೇ ನಿನ್ನನ್ನು ಬೆಳೆಸಿದವರನ್ನು ಕುರಿತು ಏನು ಹೇಳುವೆ? ಮೊದಲನೆಯದು ಮತ್ತು ಅತ್ಯಂತ ಮುಖ್ಯವಾದದ್ದು ತಂದೆಗೆ ಮತ್ತು ತಾಯಿಗೆ ಕೃತಜ್ಞನಾಗಿರುವುದು. ಅವರಿಗೆ ಸೇವೆ ಮಾಡು; ಅವರನ್ನು ಸಂತೋಷ ಪಡಿಸು; ಅವರನ್ನು ಗೌರವಿಸು. ಗುರುವನ್ನು ನಿನಗೆ ಸರಿಯಾದ ದಾರಿ ತೋರಿಸಿದ ವ್ಯಕ್ತಿ ಎಂದು, ನಿನ್ನ ಮುನ್ನಡೆಯನ್ನು ಗಮನಿಸುತ್ತಾ ನಿನ್ನ ಯೋಗಕ್ಷೇಮದಲ್ಲಿ ಆಸಕ್ತನಾಗಿರುವ ವ್ಯಕ್ತಿ ಎಂದು ಗೌರವಿಸು. ಎಲ್ಲಾ ಕಡೆಯು ಎಲ್ಲದಕ್ಕೂ ಸಾಕ್ಷಿ ಯೆಂದೂ ಸೃಷ್ಟಿ-ಸ್ಥಿತಿಲಯ ಕರ್ತನೆಂದೂ ಸರ್ವಶಕ್ತನೆಂದೂ ಭಗವಂತನನ್ನು ಪೂಜಿಸು. ನೆನಪಿರಲಿ, ಭಗವಂತನನ್ನು ಮಾತ್ರವೇ ವಿಶ್ವರೂಪನೆಂದೂ ವಿಶ್ವಮಿತ್ರ

ನೆಂದೂ ಸಂರಕ್ಷಕನೆಂದೂ ಪರಿಗಣಿಸುವುದು ಸಾಧ್ಯ. ಬೇರೆ ಯಾರನ್ನೇ ಆಗಲಿ ಅವರ ವ್ಯಕ್ತಿಗತ ಸ್ಥಾನಮಾನಕ್ಕಾಗಿ ಮಾತ್ರವೇ ಗೌರವಿಸಬೇಕು. ತಾಯಿಯನ್ನು ತಾಯಿಯಾಗಿ, ತಂದೆಯನ್ನು ತಂದೆಯಾಗಿ, ಗುರುವನ್ನು ಗುರುವಾಗಿ ಅಷ್ಟೆ. ವಾಸ್ತವದಲ್ಲಿ ಇವರೆಲ್ಲರೂ ಒಂದಾಗಿ ಇರಲು ಸಾಧ್ಯವೇ ಇಲ್ಲ. ಇದನ್ನು ಕುರಿತು ಮನನ ಮಾಡು. ನೀನು ಆತ್ಮ ಸಾಕ್ಷಾತ್ಕಾರವನ್ನೇ ಬಯಸುವಿಯಾದರೆ ಧ್ಯಾನಮಾಡುವಾಗ ನೀನು ತುಂಬಾ ಇಷ್ಟಪಡುವ ಪರಮಾತ್ಮನ ರೂಪವನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಬೇಕೇ ಹೊರತು ನಿನ್ನ ಗುರುವಿನ ಚಿತ್ರವನ್ನಲ್ಲ. ಅದು ಸರಿಯಲ್ಲ, ಭಗವಂತನ ಸ್ಥಾನ ಗುರುವಿಗಿಂತ ಎತ್ತರದ್ದು ಹೌದೋ ಅಲ್ಲವೋ? ಅವನ ಮಾತುಗಳನ್ನು ತಳಹದಿಯಾಗಿ ಇಟ್ಟುಕೋ. ಎಲ್ಲಾ ವಸ್ತುಗಳ ಮೂಲವನ್ನು ಹಿಡಿಯಲು ಪ್ರಯತ್ನಿಸು, ಅದು ಎಲ್ಲಾ ಪ್ರಯತ್ನಗಳ ಫಲವನ್ನು ಆಶ್ವಾಸನೆ ಕೊಡುತ್ತದೆ.

ಕಲ್ಲುಹರಳನ್ನು ರತ್ನವೆಂದೂ ರತ್ನವನ್ನು ಕಲ್ಲುಹರಳೆಂದೂ ಪರಿಗಣಿಸುವಂತೆ ನಿಮಗೆ ಹೇಳಲಾಗುತ್ತಿದೆ. ಅದು ಒತ್ತಾಯದಿಂದ ಇರಬಹುದು, ಆಜ್ಞೆಯ ಅಧೀನ ದಿಂದಾಗಬಹುದು, ಜನರು ವಿಧೇಯತೆಯಿಂದ ಅದನ್ನು ಪಾಲಿಸುತ್ತಾರೆ, ಆದರೆ ಆ ಭಾವನೆ ಅಸಲಿಯಾಗಿರುವುದು ಸಾಧ್ಯವೆ? ಒಂದು ವಿಚಾರವನ್ನು ಹೊರಗಿಟ್ಟು ಕೊಂಡು ಇನ್ನೊಂದನ್ನು ಒಳಗಿಟ್ಟುಕೊಂಡಿರುವುದು ಸರಿಯಾದ ಧ್ಯಾನದ ಕುರುಹೇ ಅಲ್ಲ. ಈ ಸಂಘರ್ಷವು ಪರಿಹಾರಗೊಂಡು ಒಳಗೂ ಹೊರಗೂ ಒಂದೇ ವಿಚಾರವಿರದೆ ಹೋದರೆ ಧ್ಯಾನದಲ್ಲಿ ಸ್ಥಿರತೆಯಿರುವುದಿಲ್ಲ; ಅದು ಯಾವ ರೀತಿ ಯಲ್ಲೂ ಯಶಸ್ವಿಯಾಗುವುದೂ ಇಲ್ಲ.

**ಭಕ್ತ:** ಒಳ್ಳೆಯದು ಸ್ವಾಮಿ, ಪೂರ್ತಿಯಾಗಿ ವಿಷಯವನ್ನು ತಿಳಿದುಕೊಳ್ಳದೆ ಅನೇಕ ಸಾಧಕರು ಧ್ಯಾನ ಎಂದು ತಾವು ಕರೆಯುವ ಪ್ರಕ್ರಿಯೆಯಲ್ಲಿ ವರ್ಷಗಳನ್ನು ಪೋಲು ಮಾಡುತ್ತಾರೆ. ಅವರಿಗೆ ಯಾವುದೇ ನಿಯಮವನ್ನಾಗಲಿ ನಿರ್ಬಂಧವನ್ನಾಗಲಿ ಪಾಲಿಸುವುದಿಲ್ಲ. ಅಂಥವರೆಲ್ಲರಿಗೂ ನಿಮ್ಮ ಉಪದೇಶವು ಸತ್ಯವನ್ನು ತೋರಿಸಿ ಕೊಡುತ್ತದೆ. ಅದು ಅವರನ್ನು ನಿತ್ಯವಸ್ತುವಿನಲ್ಲಿ ನೆಲೆಗೊಳಿಸುತ್ತದೆ. ಇಂದು ನಿಜ ವಾಗಿ ನಾನು ಧನ್ಯನಾದೆ, ಸ್ವಾಮಿ.

# ಅಧ್ಯಾಯ ೧೭

**ಭಕ್ತ:** ಬಹಳ ಕಾಲದಿಂದಲೂ ನಿಮ್ಮನ್ನು ಕೆಲವು ವಿಷಯಗಳ ಬಗೆಗೆ ಕೇಳಿ ತಿಳಿದುಕೊಳ್ಳಬೇಕೆಂದು ಕಾತರನಾಗಿದ್ದೆ, ಸ್ವಾಮಿ, ಇಂದು ಆ ಅವಕಾಶ ದೊರಕಿದೆ. ಈ ಮನಸ್ಸು ಮತ್ತು ಅದರ ತತ್ತ್ವ ಅಜ್ಞಾತ ವಸ್ತುಗಳು. ವಾಸ್ತವ ಅನುಭವವಿಲ್ಲದೆ ಅವುಗಳ ಅರ್ಥ ನಿಶ್ಚಿತವಾಗುವುದಿಲ್ಲ ಮತ್ತು ಸ್ಪಷ್ಟವಾಗುವುದಿಲ್ಲ. ಆದರೆ ಸ್ವಾಮಿ, ಈ ಸಂಸಾರದ ಮಾಯೆಯು ನಮ್ಮನ್ನು ಬಲವಾಗಿ, ಸಾಂದ್ರವಾಗಿ, ಮಳೆಗಾಲದ ಮೋಡಗಳ ಕತ್ತಲೆಯ ಹಾಗೆ ಮುಸುಕಿಕೊಂಡಾಗ ನಮ್ಮನ್ನು ಮುಂದಕ್ಕೆ ಎಳೆದು ಕೊಂಡು ಹೋಗುವ ಈ ಮಹಾಶಕ್ತಿ ಯಾವುದು? ಇದು ಒಂದೇ ಸಮನೆ ನನ್ನನ್ನು ಕಾಡುತ್ತಿರುವ ಪ್ರಶ್ನೆ. ನನ್ನಂಥವರು ಮೊದಲಲ್ಲೇ ಈ ವಿಚಾರಗಳನ್ನು ಬಹು ಸ್ಪಷ್ಟವಾಗಿ ತಿಳಿದುಕೊಂಡು ಬಿಡಬೇಕು ಎಂದು ನನಗನ್ನಿಸುತ್ತದೆ. ಸ್ವಾಮಿ, ದಯ ವಿಟ್ಟು ಹೇಳಿ.

**ಸ್ವಾಮಿ :** ಒಳ್ಳೆಯದು, ಮಗು. ನಾನು ಹೇಳುವುದೇನಿದೆ? ಕತ್ತಲಲ್ಲಿ ಮರದ ಬೊಡ್ಡೆ ಯನ್ನು ನೋಡಿ, ಮನುಷ್ಯ ಎಂದು ಕಲ್ಪಿಸಿಕೊಂಡು ಹೆದರುತ್ತಿದ್ದೀಯೆ. ಅಂದರೆ ಏಕವೂ ಪೂರ್ಣವೂ ಅದ್ವೈತವೂ ಆದ ಬ್ರಹ್ಮವನ್ನು ಪ್ರತ್ಯೇಕವಾದ ಅಪೂರ್ಣವಾದ ಜೀವ ಎಂದು ನೀನು ತಪ್ಪಾಗಿ ಭಾವಿಸಿಕೊಂಡು, ಆ ದೋಷದಿಂದ ನರಳುತ್ತಿ ದ್ದೀಯೆ. ನಿನ್ನ ಎಲ್ಲ ಮನಃಕ್ಲೇಶಗಳಿಗೂ ಆ ಭ್ರಮೆಯೇ ಕಾರಣ.

**ಭಕ್ತ:** ಹಾಗಾದರೆ ಈ ಭ್ರಮೆ ಹೇಗೆ ಬಂದಿತು?

**ಸ್ವಾಮಿ :** ನೀನು ನಿದ್ರಿಸುತ್ತಿದ್ದೆ, ಆದ್ದರಿಂದ ಕನಸನ್ನು ಕಂಡೆ. ಅಜ್ಞಾನ ಮತ್ತು ಮೋಹ ಎಂಬ ನಿದ್ರೆ ಮಾಡಿ ಈ ಸಂಸಾರ ಎಂಬ ಕನಸು ಕಂಡೆ. ಎಚ್ಚೆತ್ತುಕೊ ಕನಸುಗಳು ಬರುವುದಿಲ್ಲ. ಕನಸು ಇಲ್ಲದಾಗ ಭ್ರಮೆಯೂ ಇರುವುದಿಲ್ಲ.

**ಭಕ್ತ:** ಸ್ವಾಮಿ, ಈ ಅಜ್ಞಾನ ಎನ್ನುವುದೇನು? ಅದರ ಗುಣಲಕ್ಷಣಗಳಾವುವು? ಅದು ಹೇಗೆ ಕೆಲಸಮಾಡುತ್ತದೆ?

**ಸ್ವಾಮಿ :** ಯಾವುದು ದೇಹಕ್ಕೆ ಅಂಟಿಕೊಂಡು 'ನಾನು' ಎಂದು ಭಾವಿಸುತ್ತದೆಯೋ ಅದು ಜೀವ. ಅದು ಹೊರಮುಖವಾದದ್ದು; ಈ ಪರಿವರ್ತನಶೀಲವಾದ ಜಗ ತ್ತನ್ನೂ ಸಂಸಾರವನ್ನೂ ಅದು ನಂಬುತ್ತದೆ. ಅದು ಎರಡರಲ್ಲೂ, ಮಗ್ನವಾಗಿದೆ.

ಜೀವವು ತನ್ನ ಅದ್ವೈತ ಸ್ವರೂಪವನ್ನು ಅಲಕ್ಷಿಸಿ ಅದನ್ನು ಮರೆತಾಗ ಅದನ್ನು ಅಜ್ಞಾನವೆಂದು ಕರೆಯುತ್ತೇವೆ. ತಿಳಿಯಿತೆ?

**ಭಕ್ತ:** ಆದರೆ, ಸ್ವಾಮಿ, ಶಾಸ್ತ್ರಗಳೆಲ್ಲವೂ ಮಾಯೆಯೇ ಸಂಸಾರಕ್ಕೆ ಕಾರಣ ಎಂದು ಹೇಳುತ್ತವೆ. ಈಗ ನೀವು ಅದಕ್ಕೆ ಅಜ್ಞಾನ ಕಾರಣ ಎನ್ನುತ್ತಿದ್ದೀರಿ. ಈ ಎರಡರ ನಡುವೆ ವ್ಯತ್ಯಾಸವೇನು?

**ಸ್ವಾಮಿ:** ಅಜ್ಞಾನವನ್ನೇ ಮಾಯಾ, ಪ್ರಧಾನ, ಪ್ರಕೃತಿ, ಅವ್ಯಕ್ತ, ಅವಿದ್ಯಾ, ತಮಸ್ ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಆದ್ದರಿಂದ ಸಂಸಾರವು ಅಜ್ಞಾನದ ಪರಿಣಾಮ ಎಂಬುದನ್ನು ಚೆನ್ನಾಗಿ ತಿಳಿದುಕೊ.

**ಭಕ್ತ:** ಅಜ್ಞಾನವು ಈ ಸಂಸಾರವನ್ನು ಹೇಗೆ ಉತ್ಪತ್ತಿಮಾಡುತ್ತದೆ, ಗುರುದೇವ, ನಿಮ್ಮಿಂದ ತಿಳಿದುಕೊಳ್ಳಲು ಉತ್ಸುಕನಾಗಿದ್ದೇನೆ.

**ಸ್ವಾಮಿ:** ಅಜ್ಞಾನಕ್ಕೆ ಎರಡು ಶಕ್ತಿಗಳಿವೆ, ಒಂದು ಆವರಣ ಶಕ್ತಿ ಇನ್ನೊಂದು ವಿಕ್ಷೇಪಶಕ್ತಿ; ಇವೇ ಮುಸುಕಿ ಮರೆ ಮಾಡುವ ಮತ್ತು ಅದರ ಮೇಲೆ ಮಿಥ್ಯೆಯನ್ನು ಪ್ರಕ್ಷೇಪಿಸುವ ಶಕ್ತಿಗಳು. ಆವರಣ ಶಕ್ತಿಯೂ ಎರಡು ತೆರನಾಗಿ ವರ್ತಿಸುತ್ತದೆ: ಅಸತ್ತಾವರಣ ಮತ್ತು ಅಭಾವಾವರಣ, ಒಬ್ಬ ಜ್ಞಾನಿಯೂ ಒಬ್ಬ ಅಜ್ಞಾನಿಯೂ ಸಂಧಿಸಿದಾಗ ಆತ್ಮವು ಏಕೈಕ ಮತ್ತು ಅದ್ವಿತೀಯ ಎಂದು ಜ್ಞಾನಿಯು ಬೋಧಿಸಿದರೂ ಅಜ್ಞಾನಿಯು ಅದನ್ನು ನಿರಾಕರಿಸುತ್ತಾನೆ; ಅವನಿಗೆ ಸತ್ಯವನ್ನು ಅಷ್ಟೂ ಸುಲಭವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಸತ್ಯವು ಅವನ ಕಿವಿಗೆ ಬಿದ್ದರೂ ಅದನ್ನು ಅರಗಿಸಿಕೊಳ್ಳಲು ಅಗತ್ಯವಾದ ಶ್ರದ್ಧೆ ಮತ್ತು ಸ್ಥಿರತೆ ಅವನಿಗಿರುವುದಿಲ್ಲ, ಭುಜಹಾರಿಸಿ ಅದನ್ನು ವಜಾ ಮಾಡಿಬಿಡುತ್ತಾನೆ. ಇದೇ ಅಸತ್–ಆವರಣ. ಶಾಸ್ತ್ರಗಳ ಅಧ್ಯಯನದಿಂದಲೂ ದೈವ ಕೃಪೆಯಿಂದಲೂ ಅದ್ವೈತ, ಏಕೈಕ ಆತ್ಮವೆಂಬುದಿದೆ ಎಂದು ನಂಬಿದರೂ ಕೂಡ ಮತ್ತು ತೇಲಿಕೆಯ ವಾದಗಳಿಗೆ ಮನಸ್ಸನ್ನು ಹರಿಬಿಟ್ಟು ಅದರ ಅಸ್ತಿತ್ವವನ್ನು ನಿರಾಕರಿಸುತ್ತಾನೆ. ಯಾವುದನ್ನು ಅವನು ನಿರಾಕರಿಸುತ್ತಿದ್ದಾನೋ ಅದರ ಅನಸ್ತಿತ್ವವನ್ನು ಸಾರಲು ಮೋಹವು ಕಾರಣವಾಗುತ್ತದೆ. ಇದೇ ಅಭಾವಾವರಣದ ವಿಚಿತ್ರ ಪಾತ್ರ.

**ಭಕ್ತ:** ನೀವು ವಿಕ್ಷೇಪ ಶಕ್ತಿಯ ವಿಷಯವಾಗೂ ಹೇಳಿದಿರಿ. ಅದರ ಅರ್ಥವೇನು?

**ಸ್ವಾಮಿ:** ನೀನು ರೂಪರಹಿತವಾಗಿ, ಪರಿವರ್ತನ ರಹಿತನಾಗಿದ್ದರೂ ಆನಂದವೇ ನಿನ್ನ ಸ್ವರೂಪವಾಗಿದ್ದರೂ ನೀನು ರೂಪವಿರುವ, ಬದಲಾಗುವ ದುಃಖದ ನೆಲೆ

ಯಾದ ಈ ದೇಹ ಎಂಬುದಾಗಿ ನಂಬಲು, ಭಾವಿಸಲು, ವರ್ತಿಸಲು ಹೊರಡು ತ್ತೀಯೆ. ನಿನ್ನನ್ನೇ ಕರ್ತ ಮತ್ತು ಭೋಕ್ತ ಎಂದು ಹೇಳಿಕೊಳ್ಳುವೆ. ನಾನು, ನೀನು, ಅವರು, ಎಂದು, ಅದು ಇತ್ಯಾದಿಯಾಗಿ ಹೇಳುತ್ತಾ ಈ ಅಸಂಖ್ಯ ವೈವಿಧ್ಯ ಮತ್ತು ಬಹಳತೆಗಳನ್ನು ನಂಬುತ್ತೀಯೆ. ಏಕದ ಮೇಲೆ ಅನೇಕವನ್ನು ಹೇರುವ ಈ ಭ್ರಮೆಯನ್ನು ವಿಕ್ಷೇಪಶಕ್ತಿ ಅಥವಾ ಅಧ್ಯಾರೋಪ, ಮೇಲೆ ಹೇರುವುದು ಎಂದು ಕರೆಯಲಾಗುತ್ತದೆ.

**ಭಕ್ತ:** ಅದು ಏನು?

**ಸ್ವಾಮಿ:** ಮುತ್ತಿನ ಮೇಲೆ 'ಬೆಳ್ಳಿ'ಯನ್ನು ಆರೋಪಿಸಿದಾಗ, ಮರದ ಬೊಡ್ಡೆಯನ್ನು ನೋಡದೆ ಅಲ್ಲಿ ಮನುಷ್ಯ ರೂಪವನ್ನು ನೋಡಿದಾಗ, ಅಥವಾ ಮರಳುಗಾಡಿನ ಹಾಸಿಗೆ ಬದಲು ಅಲ್ಲಿ ಒಂದು ಸರೋವರವನ್ನು ನೋಡಿದಾಗ ನೀನು ಸತ್ಯದ ಮೇಲೆ ಅಸತ್ಯವನ್ನು ಆರೋಪಿಸಿರುತ್ತೀಯೆ. ಇದೇ ಅಧ್ಯಾರೋಪ.

**ಭಕ್ತ:** ಬಾಬಾ, ಸತ್ಯ ಯಾವುದು? ಅಸತ್ಯ ಯಾವುದು? ದಯವಿಟ್ಟು ಅದನ್ನೂ ವಿವರಿಸಿ.

**ಸ್ವಾಮಿ:** ಏಕ ಮತ್ತು ಏಕೈಕ, ಅದ್ವಯ, ಸತ್–ಚಿತ್–ಆನಂದ ಪರಬ್ರಹ್ಮವೇ ಸತ್ಯ. ಹಾವಿನ ನಾಮ ಮತ್ತು ರೂಪವನ್ನು ಹಗ್ಗದ ಮೇಲೆ ಆರೋಪಿಸುವಂತೆ ಈ ಜಗತ್ತನ್ನು (ಬ್ರಹ್ಮದಿಂದ ಹುಲ್ಲು ಎಸಳಿನವರೆಗೆ ಸಕಲ ಜೀವಿಗಳು ಮತ್ತು ಸಕಲ ಅಚೇತನ ವಸ್ತುಗಳು ಎಲ್ಲವೂ) ಆ ಪರಬ್ರಹ್ಮ ವಸ್ತುವಿನ ಮೇಲೆ ಆರೋಪಿಸಿದ್ದಾಗಿದೆ. ಜಗತ್ತು ಅವಸ್ತು, ಮಿಥ್ಯೆ, ಅದು ಆರೋಪಿತ ವಸ್ತು.

**ಭಕ್ತ:** ಆ ಅದ್ವೈತ ವಸ್ತುವಿನ ಮೇಲೆ ನಾಮರೂಪ ಜಗತ್ತನ್ನು ಹೇರುವ ಈ ಪ್ರಕ್ರಿಯೆ ಹೇಗೆ ಸಂಭವಿಸುತ್ತದೆ?

**ಸ್ವಾಮಿ:** ಮಾಯೆಯಿಂದ.

**ಭಕ್ತ:** ಮಾಯೆ ಎಂದರೆ?

**ಸ್ವಾಮಿ:** ಮೇಲೆ ಹೇಳಿದ ಪರಬ್ರಹ್ಮದ ಅಜ್ಞಾನ ಶಕ್ತಿ.

**ಭಕ್ತ:** ಅಜ್ಞಾನ ಶಕ್ತಿ ಎಂದರೆ?

**ಸ್ವಾಮಿ :** ನಾನು ಆಗಲೆ ಹೇಳಲಿಲ್ಲವೆ? ಬ್ರಹ್ಮವನ್ನು ಅರ್ಥಮಾಡಿಕೊಳ್ಳಲು ಅಸಾಮರ್ಥ್ಯ, ನೀನು ಮೂಲತಃ ಬ್ರಹ್ಮವೇ ಆಗಿದ್ದರೂ. ಅದೇ ಅಜ್ಞಾನ.

**ಭಕ್ತ:** ಸರಿ, ಆ ಅಜ್ಞಾನವು ಈ ಸಕಲ ಜಗತ್ತನ್ನೂ ಹೇಗೆ ಉತ್ಪತ್ತಿಮಾಡುತ್ತದೆ?

**ಸ್ವಾಮಿ :** ನೀನು ಹಗ್ಗವನ್ನು ನೋಡಲು ಬಿಡದೆ ಅಜ್ಞಾನ ಶಕ್ತಿಯು ಸಕಲ ಜಗತ್ತನ್ನು ನೋಡುವಂತೆ ಮಾಡುತ್ತದೆ.

**ಭಕ್ತ:** ಸ್ವಾಮಿ, ಇರುವುದು ಒಂದೇ ಅದ್ವೈತ, ಅವ್ಯಯ ವಸ್ತುವಾಗಿರುವಾಗ ಈ ಸಕಲ ಜಗತ್ತುಗಳ ಸೃಷ್ಟಿ ಹೇಗಾಯಿತು?

**ಸ್ವಾಮಿ :** ನಾವು ಪ್ರಾರಂಭಮಾಡಿದ ಸ್ಥಳಕ್ಕೇ ಮತ್ತೆ ನೀನು ಬಂದಿದ್ದೀಯೆ; ಈಗ ನಾನು ಹೇಳಿದರೂ ಗ್ರಹಿಸುವುದು ನಿನಗೆ ಕಷ್ಟ. ಆದರೂ ಕೇಳಿರುವುದರಿಂದ ಹೇಳುತ್ತೇನೆ, ಅಜ್ಞಾನ ಶಕ್ತಿಯು ಸುಪ್ತರೂಪದಲ್ಲಿ ಹಗ್ಗದಲ್ಲೇ ಇದೆ. ಅಂದರೆ ಅದು ಬ್ರಹ್ಮದಲ್ಲಿ ಸುಪ್ತವಾಗಿದೆ, ಅವ್ಯಕ್ತವಾಗಿದೆ. ಇದನ್ನೇ ಅವಿದ್ಯಾ ಎಂದೂ ಕರೆಯುತ್ತಾರೆ. ಅದಕ್ಕೆ ಆಧಾರವೂ ಚಿತ್ ಮತ್ತು ಆನಂವಾದ ಬ್ರಹ್ಮವೇ. ಮಾಯೆಗಿರುವ ಆವರಣ ಮತ್ತು ವಿಕ್ಷೇಪ ಈ ಎರಡು ಶಕ್ತಿಗಳಲ್ಲಿ ಆವರಣವು ಬ್ರಹ್ಮವನ್ನು ಮರೆ ಮಾಡುತ್ತದೆ, ವಿಕ್ಷೇಪವು ಮನಸ್ಸಾಗಿ ಅದು ವ್ಯಕ್ತವಾಗುವಂತೆ ಮಾಡುತ್ತದೆ. ಮನಸ್ಸು ವಾಸನೆಗಳ ವೈಫಲ್ಯದ ಮೂಲಕ ಈ ನಾಮರೂಪ ಜಗತ್ತನ್ನು ಸೃಷ್ಟಿಸುತ್ತದೆ.

**ಭಕ್ತ:** ಅದ್ಭುತ, ಸ್ವಾಮಿ. ಈ ಪ್ರಕೃತಿ ಎಷ್ಟು ಅದ್ಭುತವಾಗಿದೆ! ಜಾಗೃತ ಸ್ಥಿತಿಗೂ ಸ್ವಪ್ನ ಸ್ಥಿತಿಗೂ ವ್ಯತ್ಯಾಸವೇನು?

**ಸ್ವಾಮಿ :** ಎರಡೂ ಮಾಯೆಯ ಸ್ವರೂಪಗಳೇ. ಎರಡರಲ್ಲೂ ವಾಸನೆಗಳು ವರ್ತಿಸುತ್ತಿರುತ್ತವೆ. ಜಗತ್ತು ಸ್ಥಿರವಾದ ಭ್ರಮೆ; ಸ್ವಪ್ನವು ಅಸ್ಥಿರವಾದ ಭ್ರಮೆ. ಇಷ್ಟು ಬಿಟ್ಟರೆ ಯಾವ ವ್ಯತ್ಯಾಸವೂ ಇಲ್ಲ.

**ಭಕ್ತ:** ಸ್ವಾಮಿ, ಈ ಜಗತ್ತು ಘನರೂಪದಲ್ಲಿ ಇರುತ್ತಾ ಅಸಂಖ್ಯ ವಿಧಾನಗಳಿಂದ ಅನುಭವಕ್ಕೆ ಬರುತ್ತಿರುವಾಗ ಅದನ್ನು ಮಿಥ್ಯೆ ಎಂದು ಹೇಳುವುದು ಹೇಗೆ?

**ಸ್ವಾಮಿ :** ಅರಿವಿಗೆ ಬರದಂತೆ ಸತ್ಯವನ್ನು ಮರೆ ಮಾಡಿರುವುದೂ ಒಂದು ಭ್ರಮೆ. ಜಗತ್ತು ಬ್ರಹ್ಮದ ಮೇಲೆ ಮಾಡಿರುವ ಹೇರಿಕೆ; ಗೋಡೆಯ ಮೇಲೆ ಸಾಲು ಸಾಲು ಚಿತ್ರಗಳನ್ನು ಹಾಯಿಸಿದ ಹಾಗೆ.

**ಭಕ್ತ:** ಅವಿದ್ಯೆಯು ಅನಾದಿ ಎಂದು ಹೇಳಲಾಗುತ್ತದೆ ಅಲ್ಲವೆ? ಆದರೂ ಅದನ್ನೇಕೆ ಅಷ್ಟು ನಿಂದಿಸುತ್ತಾರೆ?

**ಸ್ವಾಮಿ:** ಅನಾದಿಯಾದ ಅವಿದ್ಯೆಯು ವಿದ್ಯೆಯು ಮೂಡಿದೊಡನೆ ಅಂತ್ಯವಾಗುತ್ತದೆ. ಇದು ಶಾಸ್ತ್ರಸಮ್ಮತವಾದದ್ದು. ಬೆಳಕಿನಿಂದ ಕತ್ತಲೆಯು ನಾಶವಾಗುತ್ತದೆ. ಜ್ಞಾನವು ಉದಯಿಸಿದೊಡನೆ ಅಜ್ಞಾನವು ಅಂತ್ಯವಾಗುತ್ತದೆ. ಪ್ರತಿಯೊಂದು ವಸ್ತುವಿಗೂ ಐದು ಭಾಗಗಳಿವೆ. ಸ್ವರೂಪ, ಕಾರ್ಯ, ಕಾಲ, ಕಾರಣ ಮತ್ತು ಫಲ. ಆದರೆ ಪರಮಾತ್ಮನ ವಿಷಯದಲ್ಲಿ ಹೀಗೆ ಲೆಕ್ಕಹಾಕಲು ಸಾಧ್ಯವಿಲ್ಲ. ಅವನಿಂದ ವಿಕಾಸಗೊಂಡಂತೆ ತೋರುವ ಸಮಸ್ತವೂ ಅವನಲ್ಲಿದೆಯಾದರೂ ಅದನ್ನು ನಿರೂಪಿಸಲಾರೆವು. ಮಾಯೆಗೆ ಕಾರಣವೂ ಇಲ್ಲ, ಕಲ್ಪಿತವಾದುದೂ ಅಲ್ಲ; ಇದು ಸಹಜವಾಗಿ ಅನಾದಿಯಿಂದ ಬ್ರಹ್ಮನೊಡನೆ ಇದೆ. ಅದು ಹೇಗೆ ಇಷ್ಟು ವಿಪುಲವಾಗಿ ವ್ಯಕ್ತವಾಯಿತೆಂದು ವಿವರಿಸಲು ಯಾವ ಕಾರಣವನ್ನೂ ಕೊಡಲು ಸಾಧ್ಯವಿಲ್ಲ. ಒಂದು ಗುಳ್ಳೆಯು ತನ್ನದೇ ಸ್ವರೂಪದ ಶಕ್ತಿಯಿಂದ ನೀರಿನಿಂದ ಮೇಲೆ ಮೂಡುವಂತೆ ಅನಂತವೂ ಪೂರ್ಣವೂ ಆದ ಪರಮಾತ್ಮನಿಂದ ಒಂದು ಶಕ್ತಿಯು ನಾಮ–ರೂಪಗಳ ರೂಪದಲ್ಲಿ ಉದಿಸುತ್ತದೆ, ಅಷ್ಟೆ. ಅವಿದ್ಯೆಯನ್ನು ಕುರಿತು ಹೀನವಾಗಿ ಮಾತನಾಡುವವರು ಅಜ್ಞಾನಿಗಳು ಮಾತ್ರ. ವಾಸ್ತವವಾಗಿ ಒಳಿತೂ ಇಲ್ಲ, ಕೆಡುಕೂ ಇಲ್ಲ.

**ಭಕ್ತ:** ಮಾಯೆಗೆ ಮೂಲ ಹೇತು ಇಲ್ಲ ಎಂದು ಹೇಗೆ ಹೇಳಬಹುದು? ಜೇಡಿಮಣ್ಣು ಮಡಕೆಯ ಆಕಾರವನ್ನು ಪಡೆಯಲು ಕುಂಬಾರನ ಕರಕೌಶಲವೇ ಹೇತುವಾಗಿರುವಂತೆ, ಬ್ರಹ್ಮದಲ್ಲಿ ಸುಪ್ತವಾಗಿರುವ ಶಕ್ತಿಯು ವ್ಯಕ್ತವಾಗಬೇಕಾದರೆ, ಈಶ್ವರ ಸಂಕಲ್ಪ ಅತ್ಯಗತ್ಯವಾಗಿದೆ.

**ಸ್ವಾಮಿ:** ಮಹಾ ಪ್ರಳಯದಲ್ಲಿ ಈಶ್ವರನೂ ಅಸ್ತಿತ್ವದಲ್ಲಿರುವುದಿಲ್ಲ; ಬ್ರಹ್ಮವೊಂದೇ ಇರುತ್ತದೆ ಅಲ್ಲವೇನು? ಹಾಗಾದರೆ ಈಶ್ವರ ಸಂಕಲ್ಪವು ಹೇತುವಾಗುವುದಾದರೂ ಹೇಗೆ? ಅದು ಸಾಧ್ಯವಿಲ್ಲ. ಈ ವಿಷಯವನ್ನು ಪರಿಗಣಿಸುವಾಗ ನೀನು ಬ್ರಹ್ಮ, ವಿಷ್ಣು ಮತ್ತು ಈಶ್ವರನನ್ನು ಬೇರೆ ಬೇರೆ ಮೂರು ವಸ್ತುಗಳೆಂಬಂತೆ ನೋಡಬಾರದು. ಇವು ಮೂರು ಗುಣಗಳು ಆಕಾರ ಕೊಟ್ಟಿರುವ ಮೂರು ರೂಪಗಳು. ಈ ಮೂರೂ ಸೇರಿ ಒಬ್ಬ ಪರಮಾತ್ಮ. ಆದರೆ ಜಗತ್ತಿನ ಕಾರ್ಯವಿಧಾನವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾದ್ದರಿಂದ ಅದನ್ನು ಮೂರಾಗಿ ಗ್ರಹಿಸಲಾಗುತ್ತದೆ ಮತ್ತು ವಿವರಿಸಲಾಗುತ್ತದೆ. ಮೂರು ರೂಪಗಳು ಮೂರು ಬಗೆಯ ಕಾರ್ಯಗಳನ್ನು ಮೂರು ಹೆಸರುಗಳಿಂದ ನಿರ್ವಹಿಸುತ್ತವೆ. ಸೃಷ್ಟಿಯ ಸಂದರ್ಭದಲ್ಲಿ ಲಯ ಇರುವುದಿಲ್ಲ. ಎರಡೂ ಕಾಲದಿಂದಾಚೆಗೆ ಮಾತ್ರವೇ ಒಟ್ಟಿಗೆ ಇರಬಲ್ಲವು. ಕಾಲ,

ಕರ್ಮ ಮತ್ತು ಕಾರಣಗಳಲ್ಲಿ ಅಸ್ತಿತ್ವದಲ್ಲಿರುವ ಮನುಷ್ಯನು ಅದನ್ನು ಗ್ರಹಿಸುವ ನಿರೀಕ್ಷೆಯೇ ಇಲ್ಲ. ಮೂರೂ ಗುಣಗಳಿಗೆ ಅತೀತರಾದಾಗ ನೀವೂ ಅದನ್ನು ಸಾಧಿಸಬಹುದು ಆದರೆ ಅಲ್ಲಿಯವರೆಗೂ ಅಲ್ಲ. ಆದ್ದರಿಂದ ಅಂತಹ ಅರ್ಥಮಾಡಿಕೊಳ್ಳಲಾಗದ ಸಮಸ್ಯೆಗಳ ಬಗೆಗೆ ಕಾಲಹರಣ ಮಾಡದೆ ನಿನಗೆ ತುರ್ತಾಗಿ ಅಗತ್ಯವಾಗಿರುವ ವಿಷಯಗಳಲ್ಲಿ ತೊಡಗು, ಗುರಿಯ ಕಡೆಗೆ ಒಯ್ಯುವ ದಾರಿಯಲ್ಲಿ ನಡೆಯತೊಡಗು, ಮಗೂ!

✍ ಟಿಪ್ಪಣಿ

✍ ಟಿಪ್ಪಣಿ

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩ ✆ 2226-9694, 2226-8201

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 35 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 45 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 22 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ ರತ್ನಮಾಲೆ | 18 |
| 21 | ಪ್ರೇಮ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 22 | ಪ್ರಶಾಂತಿ ವಾಹಿನಿ | 20 | 59 | ಭಗವಲ್ಲೀಲಾ | 35 |
| 23 | ಪ್ರಶ್ನೋತ್ತರ ವಾಹಿನಿ | 20 | 60 | ಚಮತ್ಕಾರ ವಾಣಿ | 15 |
| 24 | ಧರ್ಮ ವಾಹಿನಿ | 25 | 61 | ಕೋಽಹಂ ? ಸೋಽಹಂ ! | 15 |
| 25 | ಸಂದೇಹ ನಿವಾರಿಣಿ | 25 | 62 | ನೀತಿ ಪಾಠಗಳು | 30 |
| 26 | ಸೂತ್ರ ವಾಹಿನಿ | 20 | 63 | ಸಂಧ್ಯಾವಂದನ ವಿಧಿ | 10 |
| 27 | ಲೀಲಾ ಕೈವಲ್ಯ ವಾಹಿನಿ | 10 | 64 | ಭಜನೆಗಳು | 10 |
| 28 | ಭಾಗವತ ವಾಹಿನಿ | 60 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ (ಸಾರ ಸಂಗ್ರಹ) | 11 |
| 29 | ಗೀತಾ ವಾಹಿನಿ | 50 | 66 | ಆತ್ಮಾವಲೋಕನ | 10 |
| 30 | ರಾಮಕಥಾರಸ ವಾಹಿನಿ | 120 | 67 | ಅವತಾರ ಘೋಷಣೆ | 12 |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 32 | ಶ್ರೀ ಸತ್ಯಸಾಯಿ ಆರಾಧನಾ ಸ್ತೋತ್ರ ಸೌರಭ | 12 | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – ನಿಯಮ ಮತ್ತು ನಿಬಂಧನೆಗಳು | 40 | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ ಸೂತ್ರಗಳು | 10 | 74 | ತ್ವಮೇವ ಮಾತಾ | 20 |
| | | | | ಮುಂದುವರಿದಿದೆ . . . | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩ ✆ 2226-9694, 2226-8201

## ಪ್ರಕಟಣೆಗಳು

| # | ಶೀರ್ಷಿಕೆ | ₹ |
|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 |
| 77 | ಅಮರಪುರಿಯ ಆನಂದ ಯಾತ್ರೆ | 10 |
| 78 | ಪರಮ ವೈದ್ಯ | 28 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 |
| 81 | ನನ್ನ ನೆಚ್ಚಿನ ಬಾಬಾ | 45 |
| 82 | ಸೇವೆಯೇ ಸಾಧನೆ | 31 |
| 83 | ಶ್ರೀ ಸತ್ಯಸಾಯಿ ಗೀತೆ | 36 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ ಅವಶ್ಯಕತೆ | 10 |
| 85 | ವೇದ ಮಂಜರಿ | 60 |
| 86 | ವೇದ ಮಂತ್ರಗಳು (ಬಾಲವಿಕಾಸ ಮಕ್ಕಳಿಗಾಗಿ) | 30 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ ಮಾರ್ಗದರ್ಶಿ ಸೂತ್ರಗಳು | 25 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 |
| 89 | ಭಾರತದ ಸಂತರು | 50 |
| 90 | ಶ್ರೀ ಸತ್ಯಸಾಯಿ ಮುರುಗನ ಕರುಣಾಮೃತ | 40 |
| 91 | ದಿವ್ಯ ಪಥ ಭಾಗ – ೧ | 50 |
| 92 | ಹರಿ ಭಜನ ಬಿನಾ | 30 |
| 93 | ಒಂದು ದಿವ್ಯ ಜೀವನ | 63 |
| 94 | Sri Sathya Sai, The Indweller | 15 |
| 95 | Guidelines for Sai Bhajans | 10 |
| 96 | Balavikas - 1 | 35 |
| 97 | Balavikas - 2 | 60 |
| 98 | Balavikas - 3 | * |
| 99 | Supplement to Balavikas 1 | 10 |
| 100 | Supplement to Balavikas 2 | 10 |
| 101 | Supplement to Balavikas 3 | 10 |
| 102 | Sri Sathya Sai Educare | 10 |
| 103 | Sai Educare for Devotees | 10 |
| 104 | Sandhyavandana Vidhi | 10 |
| 105 | Sainama Kirtana Kaliyuga Sadhana | 100 |
| 106 | Educare, Veda of Twenty First Century | 60 |
| 107 | Namo Namah Sri Guru Padukabyam | 60 |
| 108 | Sri Sathya Sai Balvikas: The Pathway to Excellence–2 | * |
| 109 | Brindamrutam | 225 |
| 110 | Sri Sathya Sai Madhura Smrithi | 90 |
| 111 | Bhagavallila | 35 |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.